ಕರ್ನಾಟಕ ಸರ್ಕಾರ

# ಸಮಾಜಶಾಸ್ತ್ರ

## ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ

# 10

## ಹತ್ತನೆಯ ತರಗತಿ

### ವಿಭಿನ್ನ ಸಾಮರ್ಥ್ಯವುಳ್ಳ /

### (ಅಂಧ ವಿದ್ಯಾರ್ಥಿಗಳಿಗಾಗಿ)

## 2015

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085.

# ಮುನ್ನುಡಿ

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿಭಿನ್ನ ಸಾಮರ್ಥ್ಯವುಳ್ಳ / ಅಂಧ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಬದಲಾಗಿ ವಿದ್ಯಾರ್ಥಿಗಳ ಆಯ್ಕೆಗೆ ಅನುಗುಣವಾಗಿ ಐದು ವಿಷಯಗಳನ್ನು ಸೂಚಿಸಿ, ಎರಡು ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶವನ್ನು ಒದಗಿಸಲಾಗಿದೆ. ಈ ಐದು ವಿಷಯಗಳಲ್ಲಿ ಭಾರತೀಯ ಸಮಾಜಶಾಸ್ತ್ರ ವಿಷಯವೂ ಒಂದಾಗಿದೆ. 2015ರಲ್ಲಿ ಹತ್ತನೇ ತರಗತಿಯ ಪಠ್ಯ ಪುಸ್ತಕವನ್ನು ರಚಿಸಿ, ಜಾರಿಗೆ ತರಲಾಗಿದೆ. ಎಂಟನೆಯ ಹಾಗೂ ಒಂಬತ್ತನೆಯ ತರಗತಿಗಳಿಗೂ ಪಠ್ಯಪುಸ್ತಕ ರಚನಾ ಕಾರ್ಯವು ತ್ವರಿತವಾಗಿ ನಡೆಯುತ್ತಿದ್ದು, ಮುಂದಿನ ವರ್ಷಗಳಲ್ಲಿ ಜಾರಿಗೆ ತರಲು ತೀರ್ಮಾನಿಸಲಾಗಿದೆ.

ಭಾರತೀಯ ಸಮಾಜಶಾಸ್ತ್ರ ವಿಷಯದಲ್ಲಿ ಹತ್ತನೇ ತರಗತಿಗೆ **ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ** ಈ ಶೀರ್ಷಿಕೆಯಡಿಯಲ್ಲಿ ವ್ಯಾಪಕವಾಗಿರುವ ಕಲಿಕಾಂಶಗಳನ್ನು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಡಿಯಲ್ಲಿ ಹಾಗೂ ಪಠ್ಯವಸ್ತುವಿಗೆ ಅನುಗುಣವಾಗಿ ವಿಷಯಮಂಡನೆ ಹಾಗೂ ಪ್ರತಿ ಅಧ್ಯಾಯದಲ್ಲಿ ನೀಡಿರುವ ಅಭ್ಯಾಸಗಳು ವಿದ್ಯಾರ್ಥಿಗಳನ್ನು ತಾರ್ಕಿಕ ಆಲೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ರಚನೆ ಮತ್ತು ಸಂರಚನೆ ಹಾಗೂ ಪುನರ್‌ರಚನೆ ಮತ್ತು ಸ್ವಕಲಿಕೆಯೊಂದಿಗೆ ಸಾಮರ್ಥ್ಯಗಳನ್ನು ತನ್ನದಾಗಿಸಿಕೊಳ್ಳುವಂತೆ, ನಿತ್ಯ ಜೀವನದಲ್ಲಿನ ಘಟನೆಗಳಿಗೆ ಪರಿಹಾರ ಕಂಡುಕೊಳ್ಳುವ ಜೀವನ ಕೌಶಲಗಳನ್ನು ತನ್ನದಾಗಿಸಿಕೊಳ್ಳುವಂತೆ ಪ್ರೇರೇಪಿಸುವ ಪ್ರಯತ್ನಶೀಲತೆಯೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಏಳು ಅಧ್ಯಾಯಗಳನ್ನೊಳಗೊಂಡ ಈ ಶೀರ್ಷಿಕೆಯಲ್ಲಿ ವಿಷಯ ಮಂಡನೆಯನ್ನು ಹಂತ ಹಂತವಾಗಿ ಆದಷ್ಟು ಸಂಕ್ಷಿಪ್ತವಾಗಿ, ಸಂಗ್ರಹವಾಗಿ, ಸರಳವಾಗಿ ಪ್ರಸ್ತಾಪಿಸಲಾಗಿದೆ, ವಿದ್ಯಾರ್ಥಿಗಳು ಸುಲಭವಾಗಿ ಅರ್ಥೈಸಿಕೊಳ್ಳುವಂತೆ ರಚಿಸಲಾಗಿದೆ, ಪ್ರತಿ ಅಧ್ಯಾಯದ ಕೊನೆಯಲ್ಲಿ ನೀಡಿರುವ ಅಭ್ಯಾಸಗಳು ಮತ್ತು ಸಲಹಾತ್ಮಕ ಚಟುವಟಿಕೆಗಳನ್ನು ನೀಡುವುದರ ಜೊತೆಗೆ ಪ್ರಚಲಿತ ಅಂಶಗಳಿಗೆ ಆದ್ಯತೆ ನೀಡಿ ಇವುಗಳನ್ನು ಅರ್ಥೈಸಿಕೊಳ್ಳಲು, ಚರ್ಚೆ, ಸಂವಾದಗಳಿಗೆ ಅವಕಾಶ ಇರುವಂತೆ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪಠ್ಯಪುಸ್ತಕ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಪರಿಶೀಲಕರಿಗೆ, ಮಾರ್ಗದರ್ಶಕರಿಗೆ, ಪಠ್ಯಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ವಿದ್ಯಾರ್ಥಿಗಳಿಗೆ ಯಶಸ್ವಿ ಉಂಟಾಗಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲೆಂದು ಕರ್ನಾಟಕ ಪಠ್ಯಪುಸ್ತಕ ಸಂಘವು ಆಶಿಸುತ್ತದೆ.

**ನಾಗೇಂದ್ರ ಕುಮಾರ್**

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು.

# ಅಧ್ಯಕ್ಷರ ನುಡಿ

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿಭಿನ್ನ ಸಾಮರ್ಥ್ಯವುಳ್ಳ / ಅಂಧ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರವನ್ನು ಒಂದು ವಿಷಯವನ್ನಾಗಿ ಬೋಧಿಸಲು ತೀರ್ಮಾನಿಸಿರುವುದು ಅಭಿನಂದನೀಯ ವಿಷಯವಾಗಿದೆ.

ಪ್ರೌಢಶಾಲೆಯ ಹಂತದಲ್ಲಿರುವ ವಿದ್ಯಾರ್ಥಿಗಳ ಸಾಮಾಜಿಕ ವ್ಯಕ್ತಿತ್ವ ರೂಪುಗೊಳ್ಳಲು ಸಮಾಜಶಾಸ್ತ್ರದ ಅಧ್ಯಯನವು ಸಹಾಯಕವಾಗುತ್ತದೆ. ನಮ್ಮ ಸುತ್ತ-ಮುತ್ತಲಿನ ಸಾಮಾಜಿಕ ವಿದ್ಯಮಾನಗಳನ್ನು ಅರಿತುಕೊಳ್ಳುವುದೇ ಸಮಾಜಶಾಸ್ತ್ರದ ಉದ್ದೇಶ. ಸಾಮಾಜಿಕ ವಿದ್ಯಮಾನಗಳನ್ನು ಅರಿತು ಕೊಳ್ಳುವುದರ ಮೂಲಕ ಭಾರತದಂತಹ ವೈವಿಧ್ಯಮಯ ರಾಷ್ಟ್ರವನ್ನು ಸದೃಢವಾಗಿ ಕಟ್ಟಬಹುದಾಗಿದೆ.

ಹತ್ತನೇ ತರಗತಿಗೆ **ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ** ಈ ಶೀರ್ಷಿಕೆ ಅಡಿಯಲ್ಲಿ ಸಾಮಾಜಿಕ ಬದಲಾವಣೆ ಈ ಬದಲಾವಣೆಗೆ ಇರುವ ಅಡ್ಡಿ ಆತಂಕಗಳು, ಜಾತಿ ವ್ಯವಸ್ಥೆಯ ಸ್ವರೂಪ, ಬದಲಾವಣೆಗಳು, ಸಾಮಾಜಿಕ ಬದಲಾವಣೆಯಲ್ಲಿ ಚಳುವಳಿಗಳ ಪಾತ್ರ ಮತ್ತು ಭಾರತೀಯ ಮಹಿಳೆಯರ ಸ್ಥಾನ, ಬುಡಕಟ್ಟು ಸಮುದಾಯಗಳ ವೈಶಿಷ್ಟ್ಯತೆಯ ಜೊತೆಗೆ ಸಾಮಾಜಿಕ ಬದಲಾವಣೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಸಮಾಜ, ಸಂಸ್ಕೃತಿ, ಭಾಷೆ, ಜಾತಿ, ಧರ್ಮ, ಕುಟುಂಬ, ಬುಡಕಟ್ಟುಗಳನ್ನು ಸಮಾಜ ಶಾಸ್ತ್ರವು ವೈಜ್ಞಾನಿಕವಾಗಿ ವಸ್ತು ನಿಷ್ಠವಾಗಿ ಅಧ್ಯಯನ ಮಾಡುತ್ತದೆ. ಇದರಿಂದಾಗಿ ಹದಿಹರೆಯದ ವಿದ್ಯಾರ್ಥಿಗಳಲ್ಲಿ ಭಾರತೀಯ ಸಮಾಜವನ್ನು ಕುರಿತಾದ ಸರಿಯಾದ ಜ್ಞಾನವು ಮೂಡುತ್ತದೆ. ಈ ಮೂಲಕ ಭಾರತೀಯ ಸಂವಿಧಾನದ ಆಶಯದಂತೆ ಜಾತಿ, ಧರ್ಮ, ವರ್ಗ, ಲಿಂಗ, ಬಣ್ಣದ ಆಧಾರದ ಮೇಲೆ ಸಮಾಜವನ್ನು ವಿಭಜಿಸದೆ, ವಿವಿಧತೆಯಲ್ಲಿ ಏಕತೆಯನ್ನು ಹೊಂದಿ, ಸದೃಢ ಭಾರತವನ್ನು ನಿರ್ಮಿಸಲು ಸಾಧ್ಯ. ಈ ದಿಕ್ಕಿನಲ್ಲಿ ಸಮಾಜಶಾಸ್ತ್ರವು ವಿದ್ಯಾರ್ಥಿಗಳಿಗೆ ಭಾರತೀಯ ಸಮಾಜವನ್ನು ಕುರಿತು, ಸರಿಯಾದ ವಿವೇಕವನ್ನು ನೀಡ ಬಲ್ಲದು ಎಂಬುದು ನಮ್ಮ ನಂಬಿಕೆಯಾಗಿದೆ.

ಪಠ್ಯಪುಸ್ತಕದ ಉತ್ತಮ ಅಂಶಗಳು ಮತ್ತು ಕೊರತೆಗಳನ್ನು ಶಿಕ್ಷಕರು, ಕರ್ನಾಟಕ ಪಠ್ಯಪುಸ್ತಕ ಸಂಘದ ಮುಖ್ಯ ಸಂಯೋಜಕರಿಗೆ ತಿಳಿಸುವ ಕ್ರಮವನ್ನು ಸ್ವಾಗತಿಸುತ್ತೇವೆ. ಶಿಕ್ಷಕರ ಈ ಸೂಕ್ತ ಸಲಹೆಗಳನ್ನು ಪಠ್ಯಪುಸ್ತಕ ಪರಿಷ್ಕರಣೆಯ ಹಂತದಲ್ಲಿ ಅಳವಡಿಸಿಕೊಳ್ಳಲಾಗುವುದು. ಪೋಷಕರೂ ಈ ಕಾರ್ಯದಲ್ಲಿ ಭಾಗವಹಿಸುವುದಾದರೆ ಅದನ್ನೂ ಸ್ವಾಗತಿಸುತ್ತೇವೆ.

* ಪ್ರತಿ ಪಾಠದಲ್ಲಿ ಸಲಹಾತ್ಮಕ ಚಟುವಟಿಕೆಗಳನ್ನು ಕೊಟ್ಟಿದ್ದು, ಅದನ್ನು ವಿದ್ಯಾರ್ಥಿಗಳು ಅರಿಯಲು ಶಿಕ್ಷಕರು ಸೂಕ್ತವಾದ ಮಾರ್ಗದರ್ಶನವನ್ನು, ಸಾಧನಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಿ ಎಂದು ನಾವು ನಮ್ರತೆಯಿಂದ ಶಿಕ್ಷಕ ಬಂಧುಗಳನ್ನು ಕೋರುತ್ತೇವೆ.

* ಈ ಪಠ್ಯಪುಸ್ತಕವನ್ನು ರೂಪುಗೊಳಿಸಲು ಸಹಕರಿಸಿದ ಎಲ್ಲರಿಗೂ ವಂದನೆಗಳು.

**ಡಾ. ಸಿ.ಜಿ. ಲಕ್ಷ್ಮಿಪತಿ**
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು:**

**ಡಾ. ಸಿ.ಜಿ. ಲಕ್ಷ್ಮಿಪತಿ** : ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಶ್ರೀಮತಿ ವಿಹೆಚ್‌ಡಿ ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಹೋಮ್ ಸೈನ್ಸ್, ಪ್ಯಾಲೇಸ್ ರಸ್ತೆ, ಬೆಂಗಳೂರು

**ಸದಸ್ಯರುಗಳು:**

**ಶ್ರೀ ವಾಸುಕಿ ಬಿ.ಕೆ** : ಸಹ ಶಿಕ್ಷಕರು, ಬಿಳಿಗಿರಿ ರಂಗನಾಥ ಪ್ರೌಢ ಶಾಲೆ, ಬಿ.ಆರ್.ಹಿಲ್ಸ್, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

**ಡಾ. ಜಿ. ಶಾಂತಿ** : ಸಮಾಜಶಾಸ್ತ್ರ, ಅಧ್ಯಾಪಕರು, ವಿವೇಕಾನಂದ ಇನ್ಸಟಿಟ್ಯೂಟ್ ಫಾರ್ ಲೀಡರ್‌ಷಿಪ್ ಡೆವಲಪ್‌ಮೆಂಟ್, ಸಂಶೋಧನಾ ಸಮಾಲೋಚಕರು, ಮೈಸೂರು

**ಶ್ರೀ. ಪಿ.ಎಂ. ಕಾಗಿನಕರ್** : ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಚಂಗವರ, ಶಿರಾ ತಾ: ಮಧುಗಿರಿ ಜಿಲ್ಲೆ.

**ಪರಿಶೀಲಕರು:**

**ಡಾ. ಗುರುಲಿಂಗಯ್ಯ** : ಪ್ರಾಧ್ಯಾಪಕರು, ಸಮಾಜಶಾಸ್ತ್ರ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿ, ಶಿವಮೊಗ್ಗ.(ನಿಯೋಜಿತ, ಹಿಂದುಳಿದ ವರ್ಗಗಳ ಆಯೋಗದ ಸದಸ್ಯರು)

**ಸಲಹೆ ಮತ್ತು ಮಾರ್ಗದರ್ಶನ:**

**ಶ್ರೀ ನಾಗೇಂದ್ರ ಕುಮಾರ್** : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀ ಪಾಂಡುರಂಗ** : ಉಪನಿರ್ದೇಶಕರು (ಪ್ರಭಾರಿ) ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು:**

**ಶ್ರೀಮತಿ. ಎನ್.ಎಸ್. ಸೌಮ್ಯ**: ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.

# ಪರಿವಿಡಿ

## ವಿಷಯ : ಸಮಾಜಶಾಸ್ತ್ರ


| ಕ್ರ.ಸಂ. | ಶೀರ್ಷಿಕೆ : ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ | ಪುಟಸಂಖ್ಯೆ |
|---|---|---|
| ಅಧ್ಯಾಯ – 1 | ಸಾಮಾಜಿಕ ಬದಲಾವಣೆ | 1 |
| ಅಧ್ಯಾಯ – 2 | ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳು | 8 |
| ಅಧ್ಯಾಯ – 3 | ಭಾರತದ ಜಾತಿವ್ಯವಸ್ಥೆಯಲ್ಲಿನ ಬದಲಾವಣೆ | 13 |
| ಅಧ್ಯಾಯ – 4 | ಸಾಮಾಜಿಕ ಬದಲಾವಣೆಯಲ್ಲಿ ಚಳುವಳಿಗಳ ಪಾತ್ರ | 21 |
| ಅಧ್ಯಾಯ – 5 | ಬದಲಾಗುತ್ತಿರುವ ಮಹಿಳೆಯರ ಸ್ಥಾನ–ಮಾನ | 30 |
| ಅಧ್ಯಾಯ – 6 | ಬುಡಕಟ್ಟು ಸಮುದಾಯಗಳು ಮತ್ತು ಬದಲಾವಣೆ | 42 |
| ಅಧ್ಯಾಯ – 7 | ಸಾಮಾಜಿಕ ಬದಲಾವಣೆಯತ್ತ ಮಾಧ್ಯಮಗಳು | 59 |

# ಅಧ್ಯಾಯ-1

# ಸಾಮಾಜಿಕ ಬದಲಾವಣೆ

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಸಾಮಾಜಿಕ ಬದಲಾವಣೆಯ ಅರ್ಥ ಮತ್ತು ಸ್ವರೂಪ
- ಸಾಮಾಜಿಕ ಬದಲಾವಣೆಯ ಪ್ರೇರಕಾಂಶಗಳು
- ಶಿಕ್ಷಣ
- ವಿಜ್ಞಾನ ಮತ್ತು ತಂತ್ರಜ್ಞಾನ
- ಕೈಗಾರಿಕೀಕರಣ
- ಆಧುನೀಕರಣ

**ಪೀಠಿಕೆ**

ಮಾನವ ಸಮಾಜವು ಮೊದಲಿನಿಂದಲೂ ಬದಲಾಗುತ್ತಾ ಬಂದಿದೆ. ಬದಲಾವಣೆಯು ಒಂದು ಸಾಮಾಜಿಕ ಪ್ರಕ್ರಿಯೆ. ಬದಲಾವಣೆಯನ್ನು ಹೊಂದದ ಸಮಾಜವೇ ಇಲ್ಲ. ಇದು ಸಮಾಜದ ಆಂತರಿಕ ಲಕ್ಷಣವಾಗಿದೆ. ಅನಾಗರಿಕ ಸ್ಥಿತಿಯಿಂದ ಇಂದಿನ ನಾಗರಿಕ ಸ್ಥಿತಿಯವರೆಗೆ ತಲುಪಲು ಸಮಾಜವು ಅನೇಕ ಬದಲಾವಣೆಗಳನ್ನು ಕಂಡಿದೆ.

ಸಾಮಾಜಿಕ ಬದಲಾವಣೆಯು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಕಂಡುಬರುವ ಮಾರ್ಪಾಟುಗಳನ್ನು ಸೂಚಿಸುತ್ತದೆ. ಸಾಮಾಜಿಕ ಸಂಬಂಧಗಳೇ ಸಾಮಾಜಿಕ ಪ್ರಕ್ರಿಯೆಗಳು. ಈ ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ಪರಿವರ್ತನೆಯನ್ನು 'ಸಾಮಾಜಿಕ ಬದಲಾವಣೆ'ಎಂದು ಅರ್ಥೈಸಬಹುದಾಗಿದೆ. ಸರಳವಾಗಿ ಹೇಳುವುದಾದರೆ, ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಕಂಡುಬರುವ ಬದಲಾವಣೆಯೇ ಸಾಮಾಜಿಕ ಬದಲಾವಣೆ ಎಂದು ಕರೆಯಬಹುದಾಗಿದೆ.

## 1. ಸಾಮಾಜಿಕ ಬದಲಾವಣೆಯ ಅರ್ಥ ಮತ್ತು ಸ್ವರೂಪ

**ಮೆಕ್ಕೈವರ್ ಮತ್ತು ಪೇಜ್**ರವರು ಬಹಳ ಸರಳವಾಗಿ ಹೀಗೆ ಹೇಳುತ್ತಾರೆ:– "ಸಾಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆಯೇ ಸಾಮಾಜಿಕ ಬದಲಾವಣೆ"

**ಕಿಂಗ್ಸ್‌ಲೇ ಡೇವಿಸ್**ನ ಪ್ರಕಾರ "ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಆಗುವ ಬದಲಾಣೆಗಳನ್ನು ಸಾಮಾಜಿಕ ಬದಲಾವಣೆ ಎನ್ನಬಹುದು"

ಸಾಮಾಜಿಕ ಚಿಂತನೆಯಲ್ಲಿ ಸಾಮಾಜಿಕ ಪರಿವರ್ತನೆಗೆ ಬಹಳ ಮಹತ್ವವಾದ ಸ್ಥಾನವಿದೆ. ಸಾಮಾಜಿಕ ಬದಲಾವಣೆಗೆ ಕಾರಣಗಳೇನು? ಯಾವ ದಿಕ್ಕಿನಲ್ಲಿ ಸಮಾಜ ಸಾಗುತ್ತಿದೆ? ಎಂಬ ಇಂತಹ ಪ್ರಶ್ನೆಗಳು ಎಂದಿಗೂ

ಸಾಮಾಜಿಕ ಚಿಂತನಶೀಲರನ್ನು ಗೊಂದಲಕ್ಕೀಡುಮಾಡಿವೆ. ಏಕೆಂದರೆ ಸಾಮಾಜಿಕ ಬದಲಾವಣೆಯು ಸಾಮಾಜಿಕ ಪ್ರಕ್ರಿಯೆಯಲ್ಲಿ ಅತ್ಯಂತ ಸಂಕೀರ್ಣವಾದುದು. ಸಾಮಾಜಿಕ ಬದಲಾವಣೆಗಳು ಪ್ರಗತಿಶೀಲವಾಗಿರುವಂತೆ ಪ್ರತಿಗಾಮಿಯೂ ಆಗಿರಬಹುದು. ಹಿತಕರವಾಗಿರುವಂತೆ ಹಾನಿಕಾರಕವಾಗಿಯೂ ಇರಬಹುದು. ಉದಾ: ಕೈಗಾರಿಕೀಕರಣವು ಸಮಾಜದಲ್ಲಿ ಪ್ರಗತಿ – ಅಭಿವೃದ್ಧಿಯನ್ನು ತರುವುದಾದರೂ ಅದರಿಂದ ಸಮಾಜಕ್ಕೆ ಉಂಟಾಗುವ ಹಾನಿಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅದರ ಲಕ್ಷಣಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಅವು ಕೆಳಕಂಡಂತಿವೆ;

❖ **ಸಾಮಾಜಿಕ ಬದಲಾವಣೆಯು ನಿರಂತರವಾದುದು**

ಸಮಾಜವು ನಿರಂತರವಾಗಿ ಬದಲಾವಣೆ ಹೊಂದುತ್ತಿರುವುದು. ಮಾನವನು ಸಂಘಜೀವಿಯಾದಾಗಿನಿಂದ ಇಂದಿನವರೆಗೂ ಬದಲಾವಣೆಯನ್ನು ನೋಡುತ್ತಲೇ ಸಾಗುತ್ತಿದ್ದಾನೆ.

❖ **ಸಾಮಾಜಿಕ ಬದಲಾವಣೆಯು ಸಾರ್ವತ್ರಿಕವಾದುದು**

ಜಗತ್ತಿನ ಎಲ್ಲ ಸಮಾಜಗಳಲ್ಲೂ ಬದಲಾವಣೆಯು ಸಂಭವಿಸುತ್ತಲೇ ಇರುತ್ತದೆ. ಈ ಪ್ರಕ್ರಿಯೆಯಿಂದ ಯಾವುದೊಂದು ಸಮಾಜವು ಹೊರತಾಗಿಲ್ಲ.

❖ **ಮಾನವ ಸಂಬಂಧಗಳ ಬದಲಾವಣೆ**

ಸಾಮಾಜಿಕ ಬದಲಾವಣೆ ಎಂದರೆ ಮಾನವ ಸಂಬಂಧಗಳಲ್ಲಾಗುವ ಪರಿವರ್ತನೆ. ಹಳೆಯ ಸಂಬಂಧಗಳು ಮುರಿದುಹೋದರೆ ಹೊಸ ಸಂಬಂಧಗಳು ಬೆಸೆಯುತ್ತವೆ. ಬದಲಾವಣೆಗೆ ಜನರೇ ಕಾರಣರಾಗಿರುತ್ತಾರೆ ಹಾಗೂ ಅವರೇ ಅದರ ಪ್ರಭಾವಕ್ಕೆ ಒಳಗಾಗುತ್ತಾರೆ.

❖ **ಸಾಮಾಜಿಕ ಬದಲಾವಣೆಯ ರೂಪ ಮತ್ತು ಗತಿ ಬೇರೆಯಾಗಿರುತ್ತದೆ**

ಸಾಮಾಜಿಕ ಬದಲಾವಣೆಯು ಬೇರೆ ಬೇರೆ ಸಮಾಜಗಳಲ್ಲಿ ವಿವಿಧ ರೂಪಗಳಲ್ಲಿ ಹಾಗೂ ವಿವಿಧ ಕಾರಣಗಳಿಗಾಗಿ ಸಂಭವಿಸಬಹುದು. ಬದಲಾವಣೆಯ ವೇಗ ಹಾಗೂ ಅದರ ಪರಿಮಾಣದಲ್ಲಿ ವ್ಯತ್ಯಾಸವಿರುತ್ತದೆ. ಅಲ್ಲದೇ ಕಾಲಮಾನಕ್ಕನುಗುಣವಾಗಿಯೂ ವ್ಯತ್ಯಾಸ ಹೊಂದುತ್ತದೆ.

❖ **ಸಾಮಾಜಿಕ ಬದಲಾವಣೆಯು ಅನಿಶ್ಚಿತ**

ಸಾಮಾಜಿಕ ಬದಲಾವಣೆಯು ಒಂದು ನಿಶ್ಚಿತ ರೂಪದಲ್ಲಿ ನಡೆಯಬೇಕೆಂಬ ಯಾವುದೇ ನಿಯಮವಿಲ್ಲ. ಸಾಮಾಜಿಕ ಬದಲಾಣೆಯು ಹೀಗೆಯೇ ಆಗುತ್ತದೆ ಎಂದು ಖಚಿತವಾಗಿ ತಿಳಿಸಲು ಸಾಧ್ಯವಿಲ್ಲ.

❖ **ನಿಯೋಜಿತ ಮತ್ತು ಅನಿಯೋಜಿತ ಬದಲಾವಣೆ**

ಸಾಮಾಜಿಕ ಬದಲಾವಣೆಯ ಗುರಿ ಮತ್ತು ಗತಿ ಎರಡು ಮಾನವ ನಿರ್ಧಾರಿತವಾಗಿರುತ್ತವೆ. ಮಾನವನು ಸಾಮಾಜಿಕ ಬದಲಾವಣೆಯ ದಿಕ್ಕನ್ನು ಯೋಜಿತ ಪ್ರಕಲ್ಪಗಳ ಮೂಲಕ ನಿಯಂತ್ರಿಸಲು ಯತ್ನಿಸುತ್ತಾನೆ. ಇದು ನಿಯೋಜಿತ ಬದಲಾವಣೆಯಾಗುತ್ತದೆ. ಕೆಲವೊಮ್ಮೆ ಮಾನವನ ಕೈ ಮೀರಿ ನಿಸರ್ಗದಲ್ಲುಂಟಾಗುವ – ಅತೀವೃಷ್ಟಿ, ಅನಾವೃಷ್ಟಿ, ಭೂಕಂಪ, ಸಾಂಕ್ರಾಮಿಕ ರೋಗಗಳು, ಜ್ವಾಲಾಮುಖಿಯ ಆಸ್ಫೋಟ – ಬದಲಾವಣೆಗಳನ್ನು ಅನಿಯೋಜಿತ ಬದಲಾವಣೆಗಳೆಂದು ಹೇಳಬಹುದು.

❖ **ಸಾಮಾಜಿಕ ಬದಲಾವಣೆಯು ವಸ್ತುನಿಷ್ಠ ಕಲ್ಪನೆಯಾಗಿದೆ**

ಇದು ಸಾಮಾಜಿಕ ಜೀವನದಲ್ಲಿ ಉಂಟಾಗುವ ಸ್ಪಷ್ಟ ಹಾಗೂ ಖಚಿತವಾದ ಪ್ರಕ್ರಿಯೆಗಳನ್ನು ಸೂಚಿಸುತ್ತದೆಯೇ ಹೊರತು ನೈತಿಕ ಅಥವಾ ಧಾರ್ಮಿಕ ಮೌಲ್ಯಗಳನ್ನಲ್ಲ.

❖ **ಪುನರಾವರ್ತಿತ ಮತ್ತು ದೀರ್ಘಾವಧಿಯ ಪರಿವರ್ತನೆಗಳು**

ಕೆಲವು ಕ್ಷೇತ್ರಗಳಲ್ಲಿ ಬದಲಾವಣೆಗಳು ಆಗಾಗ್ಗೆ ಸಂಭವಿಸುತ್ತಿರುತ್ತವೆ. ಉಡುಪು, ಭಾಷೆ, ಮುಂತಾದವುಗಳಲ್ಲಿ ಪರಿವರ್ತನೆಗಳು ಪುನಃ ಪುನಃ ಸಂಭವಿಸುತ್ತವೆ. ಆದರೆ ಜನರ ಮೌಲ್ಯಗಳಲ್ಲಿ, ರಾಜಕೀಯ ಸಿದ್ಧಾಂತಗಳಲ್ಲಿ ಪರಿವರ್ತನೆಗಳು ಉಂಟಾದಾಗ ಅವು ಗಂಭೀರ ಪರಿಣಾಮಗಳಿಗೆ ಕಾರಣವಾಗುತ್ತದೆ. ಈ ಪರಿಣಾಮಗಳು ಬಹಳ ಕಾಲದವರೆಗೆ ಇರುವ ಸಾಧ್ಯತೆಯಿದೆ. ಉದಾ: ರಷ್ಯಾದಲ್ಲಿ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತ ಬಹುಕಾಲದವರೆಗೆ ಜನರ ಮೇಲೆ ಪ್ರಭಾವ ಬೀರಿತ್ತು.

## 2. ಸಾಮಾಜಿಕ ಬದಲಾವಣೆಯ ಪ್ರೇರಕಾಂಶಗಳು

ಬದಲಾವಣೆ ಸಮಾಜದ ಅಂತರ್ಗತ ಗುಣವಾಗಿದೆ. ಅನೇಕ ಆಂತರಿಕ ಹಾಗೂ ಬಾಹ್ಯ ಒತ್ತಡಗಳ ಕಾರಣಗಳಿಂದ ಸಮಾಜವು ಪರಿವರ್ತನೆಯ ಪ್ರಕ್ರಿಯೆಗೆ ಒಳಗಾಗಿದೆ. ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಅಂಶಗಳನ್ನು ಕೆಳಗೆ ವಿವರಿಸಲಾಗಿದೆ.

### 2.1 ಶಿಕ್ಷಣ

ಆಧುನಿಕ ಯುಗದಲ್ಲಿ ಶಿಕ್ಷಣದಿಂದ ಉಂಟಾದ ಪರಿವರ್ತನೆಯು ಬಹು ಪರಿಣಾಮಕಾರಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸಾರ್ವತ್ರಿಕ ಶಿಕ್ಷಣವು ಜನರ ಜೀವನದಲ್ಲಿ ಗಣನೀಯ ಬದಲಾವಣೆಯನ್ನು ತಂದಿದೆ. ವರ್ತಮಾನ ಪತ್ರಿಕೆಗಳನ್ನು ಓದಿ ಸುದ್ದಿ ತಿಳಿಯುವ, ಮಾರಾಟದ ವಸ್ತುಗಳ ಮೇಲೆ ನಮೂದಿಸಿದ ಬೆಲೆಯನ್ನು ಅರಿಯುವ, ಸಾಮಾನ್ಯ ಲೆಕ್ಕಚಾರವನ್ನು ಕಲಿತು ವ್ಯವಹರಿಸುವ, ಸ್ವಪ್ರಯತ್ನದಿಂದ ಕಾರ್ಯನಿರ್ವಹಿಸುವ ಅನೇಕ ಸಾಮರ್ಥ್ಯಗಳನ್ನು ಶಿಕ್ಷಣದಿಂದ ಪಡೆಯಬಹುದು. ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಣವು ಮಕ್ಕಳಲ್ಲಿ ಸಾಮಾಜಿಕ ಬದಲಾವಣೆಯ ಗುರಿಯತ್ತ ನಡೆಯುವಲ್ಲಿ ಭದ್ರ ಬುನಾದಿ ಹಾಕಿದರೆ ಕಾಲೇಜು ಹಾಗೂ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣವು ಸಮಾಜವನ್ನು ನಿರ್ದಿಷ್ಟ ದಿಕ್ಕಿನಲ್ಲಿ ಬದಲಿಸಿ ಪ್ರಗತಿಗಾಮಿ ಶಕ್ತಿಯಾಗಿಸುತ್ತದೆ. ಶಿಕ್ಷಣವು ಸಾಮಾಜಿಕ ಬದಲಾವಣೆಯನ್ನು ತರಬಲ್ಲ ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದೆ ಎಂಬುದು ನಿಸ್ಸಂದೇಹವಾಗಿದೆ. ಹೀಗಾಗಿ ಔಪಚಾರಿಕ ಶಿಕ್ಷಣವು ಪ್ರಚಲಿತ ಸಾಮಾಜಿಕ ಜೀವನದ ಮೇಲೆ ಉಂಟುಮಾಡಿರುವ ಕೆಲವು ಪ್ರಮುಖ ಪರಿಣಾಮಗಳನ್ನು ಇಲ್ಲಿ ವಿವೇಚಿಸಲಾಗಿದೆ.

❖ **ಆಧುನಿಕ ಶಿಕ್ಷಣ ಒಂದು ಔದ್ಯೋಗಿಕ ಸಾಧನೆ**

ಇಂದಿನ ಕೈಗಾರಿಕಾ ಯುಗದಲ್ಲಿ ಉದ್ಯೋಗವನ್ನು ಗಳಿಸಲು ಬೇಕಾದ ಕೌಶಲ್ಯ, ತಂತ್ರಜ್ಞಾನ, ಮತ್ತು ತರಬೇತಿಯನ್ನು ಶಿಕ್ಷಣವು ನೀಡುತ್ತಾ ಬಂದಿದೆ. ವೃತ್ತಿ ಆಧಾರಿತ ತಾಂತ್ರಿಕ ಶಿಕ್ಷಣವಂತೂ ಇಂದು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಉನ್ನತ ತಾಂತ್ರಿಕ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಅಧಿಕ ಸಂಪಾದನೆ ಮಾಡುವ ವೃತ್ತಿ ಪಡೆಯಲು ಸಾಧ್ಯವಾಗಿದೆ.

❖ **ಜನರ ದೃಷ್ಟಿಕೋನ ಬದಲಾವಣೆ**

ಶಿಕ್ಷಣವು ಜನರಲ್ಲಿ ಹೊಸವಿಚಾರ, ಆಲೋಚನೆ, ಆಸೆ–ಆಕಾಂಕ್ಷೆಗಳು ಮೂಡಲು ಕಾರಣವಾಗಿದೆ. ಇದು ಅವನ ಇಚ್ಛಾಶಕ್ತಿಯನ್ನು, ಆತ್ಮವಿಶ್ವಾಸವನ್ನು ಹೆಚ್ಚಿಸಲು ಶಿಕ್ಷಣವು ರೂಢಿ–ಸಂಪ್ರದಾಯಗಳು, ನಂಬಿಕೆ–ಶ್ರದ್ಧೆಗಳು ಆದರ್ಶ ಮೌಲ್ಯಗಳನ್ನು ಬದಲಿಸಿದೆ, ವೈಜ್ಞಾನಿಕ ಮನೋಭಾವನೆ ಬೆಳೆಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ.

❖ **ಸ್ತ್ರೀಯರ ಸ್ಥಾನಮಾನ ಸುಧಾರಣೆ**

ಆಧುನಿಕ ಶಿಕ್ಷಣವು ಸ್ತ್ರೀ ಪುರುಷರೆಂಬ ಬೇಧವಿಲ್ಲದೆ ಎಲ್ಲರನ್ನು ಸಮಾನ ದೃಷ್ಟಿಯಿಂದ ಕಾಣುವುದನ್ನು ಕಲಿಸುತ್ತದೆ. ಬಹು ಕಾಲದವರೆಗೆ ಉನ್ನತ ಶಿಕ್ಷಣದಿಂದ ವಂಚಿತವಾಗಿದ್ದ ಸ್ತ್ರೀ ಸಮುದಾಯವು ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿದೆ. ಶಿಕ್ಷಿತ ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಸ್ತ್ರೀಯರು ಶಿಕ್ಷಣದಿಂದಾಗಿ ಹೆಚ್ಚು ಹೆಚ್ಚು ಆರ್ಥಿಕ ಸ್ವಾವಲಂಬಿಗಳಾಗುತ್ತಿದ್ದಾರೆ.

❖ **ಸಾಮಾಜಿಕ ಹಾಗೂ ಆರ್ಥಿಕ ಪ್ರತಿಫಲ ಸಾಧನ**

ಇಂದಿನ ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯು ಆಧುನಿಕ ಶಿಕ್ಷಣ ಮತ್ತು ವಿಶೇಷ ಪರಿಣಿತಿಯನ್ನು ಹೊಂದಿರುವ ಜನರನ್ನು ಅಪೇಕ್ಷಿಸುತ್ತದೆ. ಬದಲಾದ ಇಂದಿನ ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಶಿಕ್ಷಣದಲ್ಲಿ ಪರಿವರ್ತನೆ ಆಗಬೇಕಾಗಿದೆ.

❖ **ಸಾಮಾಜಿಕ ಚಲನೆಗೆ ಸಹಾಯಕ**

ಶಿಕ್ಷಣವು ಸಾಮಾಜಿಕ ಸ್ಥಾನಮಾನವನ್ನು ಉತ್ತಮಪಡಿಸುವಲ್ಲಿ ಒಂದು ಪ್ರಭಾವಿ ಸಾಧನವಾಗಿದೆ. ಉದ್ಯೋಗ ಗಳಿಸುವಲ್ಲಿ ಶೈಕ್ಷಣಿಕ ಅರ್ಹತೆ ಅಗತ್ಯ ಅಂಶವಾಗಿದೆ. ಶಿಕ್ಷಣದಿಂದ ಔದ್ಯೋಗಿಕ ಚಲನೆ–ಸಾಮಾಜಿಕ ಚಲನೆ ಸಾಧ್ಯವಾಗಿದೆ.

❖ **ದುರ್ಬಲವರ್ಗದ ಜಾಗೃತಿ**

ಶಿಕ್ಷಣವು ಸಾರ್ವತ್ರಿಕವಾದುದರಿಂದ ದುರ್ಬಲವರ್ಗದವರು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಲು ಶಿಕ್ಷಣವು ಒಂದು ಸಾಧನವಾಗಿದೆ. ಶೋಷಣೆಯ ವಿರುದ್ಧ ಧ್ವನಿ ಎತ್ತುವ ಜಾಗೃತಿ ಆಧುನಿಕ ಶಿಕ್ಷಣದಿಂದ ಸಾಧ್ಯವಾಗಿದೆ.

❖ **ನಗರೀಕರಣಕ್ಕೆ ಪ್ರಚೋದನೆ**

ಉನ್ನತ ಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳು ಸಾಮಾನ್ಯವಾಗಿ ನಗರಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಆ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿದೆ. ನಗರವಾಸಿಗಳ ಸಂಖ್ಯೆಯು ಹೆಚ್ಚುತ್ತಿರುವುದು ಈ ಕಾರಣದಿಂದಲೇ ಎಂಬುದು ಗಣನೀಯವಾಗಿದೆ.

❖ **ರಾಜಕೀಯ ಪ್ರಜ್ಞೆ**

ಶಿಕ್ಷಣವು ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಯ ಪ್ರಬಲ ಸಾಧನ ಎಂಬುದು ಎಲ್ಲರೂ ಒಪ್ಪಬೇಕಾದ ವಿಷಯವಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರದ ಯಶಸ್ಸು ಅಲ್ಲಿನ ಜನತೆಯ ರಾಜಕೀಯ ಪ್ರಜ್ಞೆ ಮತ್ತು ಅವರ ಶಿಕ್ಷಣಮಟ್ಟವನ್ನು ಅವಲಂಬಿಸಿದೆ ಎಂದು ಹೇಳಬಹುದು. ಒಟ್ಟಿನಲ್ಲಿ ಹೇಳುವುದಾದರೆ ಶಿಕ್ಷಣವು ಸಾಮಾಜಿಕ ಬದಲಾವಣೆ ತರುವಲ್ಲಿ ಪ್ರಭಾವಿ ಸಾಧನವಾಗಿದೆ.

## 2.2 ವಿಜ್ಞಾನ ಮತ್ತು ತಂತ್ರಜ್ಞಾನ

ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವನ ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ತಂತ್ರಜ್ಞಾನದಲ್ಲಿ ಪ್ರಗತಿಯಾದಂತೆ ಸಮಾಜದಲ್ಲಿಯೂ ಬದಲಾವಣೆ ಕಾಣುತ್ತದೆ. ತಂತ್ರಜ್ಞಾನದಿಂದ ಉಂಟಾಗುವ ಸಾಮಾಜಿಕ ಪರಿಣಾಮಗಳು ವ್ಯಾಪಕವಾಗಿರುತ್ತದೆ.

❖ **ಉದ್ದಿಮೆಗಳಲ್ಲಿ ಯಂತ್ರಗಳ ಬಳಕೆ:** ಯಂತ್ರಚಾಲಿತ ಉದ್ದಿಮೆಗಳು ಇಂದು ಉತ್ಪಾದನಾ ಕೇಂದ್ರಗಳಾಗಿದ್ದು ಕಡಿಮೆ ಖರ್ಚಿನಲ್ಲಿ ಉತ್ತಮ ದರ್ಜೆಯ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುವುದು ಸಾಧ್ಯವಾಗಿದೆ.

❖ **ಸಂಪರ್ಕ ಸಾಧನಗಳ ಬೆಳವಣಿಗೆ:** ತಂತ್ರಜ್ಞಾನದ ಕೊಡುಗೆಗಳಾದ ಅಂಚೆ ಮತ್ತು ತಂತಿ, ದೂರವಾಣಿ, ದೂರದರ್ಶನ, ಮಿಂಚಂಚು(ಇ–ಮೇಲ್), ಸೆಲ್ ಫೋನ್, ಅಂತರ್ಜಾಲ, ದೂರಶಿಕ್ಷಣ ಮಾಧ್ಯಮ, ಇವುಗಳು ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಸಾಧನಗಳಾಗಿವೆ. ವಿಶ್ವದ ಗಾತ್ರವನ್ನು ಕುಗ್ಗಿಸಿದೆ.

❖ **ಸಾರಿಗೆ ವ್ಯವಸ್ಥೆಯ ಬೆಳವಣಿಗೆ:** ಸಾರಿಗೆ ವ್ಯವಸ್ಥೆಯಲ್ಲಾಗಿರುವ, ಆಗುತ್ತಿರುವ ಎಲ್ಲಾ ಆನ್ವೇಷಣೆಗಳು ತಂತ್ರಜ್ಞಾನದಿಂದಾಗಿದ್ದು, ಜನರ ಪ್ರಯಾಣ ಹಾಗೂ ವಸ್ತುಗಳ ಸಾಗಾಟಕ್ಕೆ ಅನುಕೂಲವಾಗಿದೆ.

❖ **ಕೃಷಿವಿಧಾನಗಳ ಸುಧಾರಣೆ:** ಕೃಷಿ ತಂತ್ರಜ್ಞಾನದಿಂದಾಗಿ ಕೃಷಿ ಪದ್ಧತಿ ಹಾಗೂ ವಿಧಾನಗಳಲ್ಲಿ ಬದಲಾವಣೆ ಕಂಡುಬಂದಿದೆ. ಇಂದು ಬಹುತೇಕ ಕೃಷಿ ಚಟುವಟಿಕೆಗಳು ಯಂತ್ರಗಳಿಂದ ನಡೆಯುತ್ತಿದೆ.

## 2.3 ಕೈಗಾರಿಕೀಕರಣ

ಕೈಗಾರಿಕೀಕರಣವೆಂದರೆ ಸರಕು ಮತ್ತು ಸೇವೆಗಳ ಉತ್ಪಾದನೆಗೆ ದೈಹಿಕ ಶ್ರಮದ ಬದಲು ಯಂತ್ರಗಳನ್ನು ಬಳಸಲಾಗುವುದನ್ನೇ ಕೈಗಾರಿಕೀಕರಣ ಎನ್ನುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ಇಂದು ಕಾರ್ಖಾನೆಗಳು ಬೃಹತ್ ಉತ್ಪಾದನಾ ಕೇಂದ್ರಗಳಾಗಿವೆ. ಇದರ ಪರಿಣಾಮದಿಂದ, ಉತ್ಪಾದನಾ ಪ್ರಮಾಣ, ಗುಣಮಟ್ಟ ಹೆಚ್ಚಿ ವೆಚ್ಚವೂ ಕಡಿಮೆಯಾಗಿದೆ. ಉದ್ಯೋಗಾವಕಾಶಗಳು ಹೆಚ್ಚಿದೆ. ಕೈಗಾರಿಕೀರಣದಿಂದ ಕೇವಲ ಆರ್ಥಿಕ ಕ್ಷೇತ್ರವಲ್ಲದೇ, ಸಾಮಾಜಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯಾಗಿದೆ. ನಗರಗಳ ಬೆಳವಣಿಗೆ, ಹೊಸ ರಾಜಕೀಯ, ಆರ್ಥಿಕ ಸಿದ್ಧಾಂತಗಳು, ಮೌಲ್ಯಗಳ ಬದಲಾವಣೆ ಇವು ಕೈಗಾರಿಕೀಕರಣದ ಪರಿಣಾಮಗಳಾಗಿವೆ.

> ಕೈಗಾರಿಕೀಕರಣವು ಸುಮಾರು 18ನೇ ಶತಮಾನದಲ್ಲಿ ಪ್ರಾರಂಭವಾಗಿ 21ನೇ ಶತಮಾನದಲ್ಲಿಯೂ ಮುಂದುವರೆಯುತ್ತಿದೆ. ನಮ್ಮ ಜೀವನದ ಹೆಜ್ಜೆ ಹೆಜ್ಜೆಗೂ ಕೈಗಾರಿಕೀಕರಣದ ಪ್ರಭಾವವು ಗೋಚರವಾಗುತ್ತದೆ. ನಾವು ದಿನನಿತ್ಯ ಬಳಸುವ ಬಸ್ಸು, ರೈಲು, ದ್ವಿಚಕ್ರವಾಹನಗಳು ಅದರ ಫಲವಾಗಿದೆ. ವಿಶ್ವದ ಸುಮಾರು 600 ಕೋಟಿ ಜನರ ದಿನನಿತ್ಯದ ಅಗತ್ಯಗಳನ್ನು ಪೂರೈಸುವಲ್ಲಿ ಕೈಗಾರಿಕೆಯ ಪಾತ್ರ ದೊಡ್ಡದು. ಯಂತ್ರಗಳು ಇಲ್ಲದೇ ಇರುವ ಒಂದು ದಿನವನ್ನು ಊಹಿಸಿಕೊಳ್ಳುವುದು ಅಸಾಧ್ಯವಾಗಿದೆ.

### 2.4 ಆಧುನೀಕರಣ

ಆಧುನೀಕರಣ ಎಂದರೆ ವಿಜ್ಞಾನ ತಂತ್ರಜ್ಞಾನದಿಂದ ಸಮಾಜದ ಮೇಲೆ ಉಂಟಾಗುವ ಪ್ರಭಾವವಾಗಿದೆ. ತಂತ್ರಜ್ಞಾನ, ಕೈಗಾರಿಕೀಕರಣ ಈ ಪ್ರಕ್ರಿಯೆಗಳು ಆಧುನೀಕರಣಕ್ಕೆ ಕಾರಣವಾಗಿವೆ. ವೈಜ್ಞಾನಿಕ ಪ್ರಗತಿ ಹಾಗೂ ಮಾನವನ ಹಿತಸಾಧನೆಯೇ ಆಧುನೀಕರಣದ ಮುಖ್ಯ ಗುರಿಯಾಗಿದೆ. ನಾಗರೀಕತೆ, ಶಿಕ್ಷಣ, ಹಣಸಂಪಾದನೆ, ಸುಸಂಸ್ಕೃತ ಜೀವನ ಮೊದಲಾದವುಗಳಿಗೆ ಅವಕಾಶ ಕಲ್ಪಿಸುತ್ತದೆ.

ಮಾನವನ ಪ್ರಗತಿಗೆ ಆಧುನೀಕರಣವು ಅಪಾರ ಕೊಡುಗೆಯನ್ನು ನೀಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ನಾವು ಪ್ರತಿಯೊಂದನ್ನೂ ವೈಜ್ಞಾನಿಕವಾಗಿ ಆಲೋಚಿಸುವುದನ್ನು ಕಲಿತಿದ್ದೇವೆ. ಜಗತ್ತಿನಲ್ಲಿ ಯಾವುದೇ ಚಟುವಟಿಕೆ ನಡೆಯಬೇಕಾದರೂ ಶೂನ್ಯದಲ್ಲಿ ಸಂಭವಿಸುವುದಿಲ್ಲ. ಅದಕ್ಕೆ ಬಲವಾದ ಕಾರಣವಿರಬೇಕಾಗಿರುತ್ತದೆ. ಈ ಕಾರ್ಯಕಾರಣ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಆಧುನೀಕರಣವು ನೀಡಿದೆ. ಮೂಢನಂಬಿಕೆಗಳನ್ನು ಪ್ರಶ್ನಿಸಲು ಸಹಾಯಕವಾಗಿದೆ. ಈ ಮನೋಭಾವದಿಂದ ಸತಿ ಪದ್ಧತಿ, ಬಾಲ್ಯವಿವಾಹ ಹೆಣ್ಣು ಶಿಶು ಹತ್ಯೆ, ಜ್ಯೋತಿಷ್ಯ ಮೊದಲಾದ ಆಚರಣೆಗಳನ್ನು ಪ್ರಶ್ನಿಸಿ ದೂರವಿಡಲು ಸಾಧ್ಯವಾಗಿದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ಪರಿವರ್ತನೆಗೆ ಕಾರಣ __________ ಬದಲಾವಣೆ

   ಅ) ರಾಜಕೀಯ ಆ) ಸಾಮಾಜಿಕ ಇ) ಆರ್ಥಿಕ ಈ) ತಾಂತ್ರಿಕ

2. ರಷ್ಯಾದ ಜನರು __________ ರವರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು.

   ಅ) ಸ್ಟಾಲಿನ್ ಆ) ಕಾರ್ಲ್ ಮಾರ್ಕ್ಸ್

   ಇ) ರೂಸ್ಸೋ ಈ) ಅಬ್ರಾಹಂ ಲಿಂಕನ್

3. ಪ್ರಜಾಪ್ರಭುತ್ವದ ಯಶಸ್ಸು ಆ ದೇಶದ ಜನತೆಯ __________ ಅನ್ನು ಅವಲಂಬಿಸಿದೆ.

   ಅ) ಶಿಕ್ಷಣ ಆ) ಅನಕ್ಷರತೆ ಇ) ಆರ್ಥಿಕತೆ ಈ) ನಿರುದ್ಯೋಗ

4. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ __________ .

   ಅ) ದೂರವಾಣಿ ಆ) ದೂರದರ್ಶನ

   ಇ) ಶಿಕ್ಷಣ ಈ) ಸಮಾಜ

**II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಸಾಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆಯೇ __________ .

2) ನಿಯೋಜಿತ ಬದಲಾವಣೆಗೆ ಒಂದು ಉದಾಹರಣೆ __________ .

3) ಮಾನವನ ಕೈ ಮೀರಿ ನಿಸರ್ಗದಲ್ಲಿ ಉಂಟಾಗುವ ಬದಲಾವಣೆಯೇ ------------ .

4) ಆಧುನೀಕರಣದ ಮುಖ್ಯ ಗುರಿ __________ ಹಾಗೂ __________ .

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಶಿಕ್ಷಣವು ಯಾವುದರ ಪ್ರಬಲ ಸಾಧನ?

2) ಕೈಗಾರಿಕೀಕರಣ ಎಂದರೇನು?

3) ಸಾಮಾಜಿಕ ಬದಲಾವಣೆ ಎಂದರೇನು?

4) ಕಿಂಗ್ಸ್ ಲೇ ಡೇವಿಡ್ಸ್ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಪ್ರಮುಖ ಅಂಶಗಳಾವುವು?

2) ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಪ್ರಮುಖ ಸಾಧನಗಳಾವುವು?

3) ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ತಿಳಿಸಿ.

4) ನಿಯೋಜಿತ ಮತ್ತು ಅನಿಯೋಜಿತ ಬದಲಾವಣೆಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿಮಾಡಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1) ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವನ್ನು ತಿಳಿಸಿ.

2) ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ವಿವರಿಸಿ.

3) ಸಾಮಾಜಿಕ ಬದಲಾವಣೆ ಉಂಟುಮಾಡುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವನ್ನು ವಿಶ್ಲೇಷಿಸಿ.

**ಸಲಹಾತ್ಮಕ ಚಟುವಟಿಕೆಗಳು :**

✦ ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವನ ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಚರ್ಚಾಕೂಟ ಏರ್ಪಡಿಸಿ.

✦ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಅಂತರ್ಜಾಲದ ಪಾತ್ರದ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿ.

✦ ಸ್ತ್ರೀಯರ ಸ್ಥಾನ-ಮಾನ ಸುಧಾರಣೆಯ ವಿದ್ಯಮಾನಗಳನ್ನು ವೃತ್ತ ಪತ್ರಿಕೆಯಿಂದ ಸಂಗ್ರಹಿಸಿ.

✦ ಮೊಬೈಲ್ ಫೋನ್, ದೂರವಾಣಿ ಮತ್ತು ಸಿನಿಮಾಗಳು ನಿಮ್ಮ ಸುತ್ತಮುತ್ತಲಿನ ಜನರ ಮೇಲೆ ಬೀರಿರುವ ಪ್ರಭಾವ ಕುರಿತು ಗುಂಪು ಚರ್ಚೆ ಮಾಡಿ.

✦ ನಿಮ್ಮ ಜಿಲ್ಲಾ ಕೇಂದ್ರ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳನ್ನು ಪಟ್ಟಿಮಾಡಿ, ಅವುಗಳು ಉತ್ಪಾದಿಸುವ ಸರಕುಗಳನ್ನು ಪಟ್ಟಿಮಾಡಿ.

# ಅಧ್ಯಾಯ-2

# ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳು

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಸಾಂಪ್ರದಾಯಿಕ ಮನಃಸ್ಥಿತಿ
- ಅನಕ್ಷರತೆ
- ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ
- ಪ್ರಾದೇಶಿಕ ಅಸಮತೋಲನ

**ಪೀಠಿಕೆ**

ಸಮಾಜವು ಸಾಮಾಜಿಕ ಬದಲಾವಣೆಯನ್ನು ಮೂರು ಮುಖ್ಯ ಕಾರಣಗಳಿಗಾಗಿ ಅಪೇಕ್ಷಿಸುವುದಿಲ್ಲ. ಆ ಕಾರಣಗಳನ್ನೇ ನಾವು ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳೆಂದು ಹೆಸರಿಸಬಹುದು. ಅವುಗಳೆಂದರೆ:

- ✦ ಬದಲಾವಣೆಯು ಒತ್ತಾಯಪೂರ್ವಕವಾದಾಗ
- ✦ ಏತಕ್ಕಾಗಿ ಈ ಬದಲಾವಣೆ ಎಂಬುದನ್ನು ಅರ್ಥಮಾಡಿಕೊಳ್ಳದಿದ್ದಾಗ
- ✦ ಬದಲಾವಣೆಯು ಸಂಪ್ರದಾಯ ವಿರೋಧಿಯಾದಾಗ.

ಈ ಮೂರು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳನ್ನು ಈ ಕೆಳಗಿನಂತೆ ವಿವರಿಸಬಹುದು.

## 2.1 ಸಾಂಪ್ರದಾಯಿಕ ಮನಃಸ್ಥಿತಿ

ಸಂಪ್ರದಾಯಬದ್ಧ ಮನಃಸ್ಥಿತಿ ಹೊಂದಿರುವ ಜನರು ಹೊಸದನ್ನು ಅನುಸರಿಸಲು ಅಥವಾ ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಜನರು ತಮ್ಮ ಪರಂಪರೆಗಳು, ಸಂಪ್ರದಾಯಗಳು, ತಲೆ ತಲಾಂತರದಿಂದ ಬಂದ ವಿಚಾರಗಳು ಮೊದಲಾದವುಗಳನ್ನು ಸಾಮಾನ್ಯವಾಗಿ ಗೌರವಿಸುತ್ತಾರೆ. ಅವುಗಳ ಬಗ್ಗೆ ಅವರಿಗೆ ಒಂದು ರೀತಿಯ ಭಾವನಾತ್ಮಕ ಬಾಂಧವ್ಯ ಬೆಳೆದು ಬಂದಿರುತ್ತದೆ. ಹೊಸ ವಿಧಾನಗಳನ್ನು ಅನುಸರಿಸಲು ಬದಲಾವಣೆಯನ್ನು ಒಪ್ಪಲು ಅವರ ಮನಸ್ಸು ಸಿದ್ದರಿರುವುದಿಲ್ಲ. ಅಂತಹ ಮನಸ್ಸನ್ನು ಸಿದ್ದಗೊಳಿಸಲು ಸಮಯಾವಕಾಶ ಬೇಕಾಗುತ್ತದೆ. ಇದರಿಂದ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆ ವಿಳಂಬವಾಗುತ್ತದೆ.

## 2.2 ಅನಕ್ಷರತೆ

ಅನಕ್ಷರತೆ, ಅಜ್ಞಾನ ಇವುಗಳು ಸಾಮಾಜಿಕ ಪರಿವರ್ತನೆಗೆ ಅಡ್ಡಿಯಾಗುತ್ತದೆ. ಹೊಸ ಆನ್ವೇಷಣೆ, ನೂತನ ತಂತ್ರಜ್ಞಾನ ಮೊದಲಾದ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದರೆ ಅಂತವರು ಬದಲಾವಣೆಗೆ ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ– ರಾಸಾಯನಿಕ ಗೊಬ್ಬರವನ್ನು ಬಳಸಿ ಹೆಚ್ಚಿನ ಬೆಳೆಯನ್ನು ಪಡೆಯುವುದು ಸಾಧ್ಯವೆಂಬುದನ್ನು ಕೃಷಿವಿಜ್ಞಾನಿಗಳು ತಮ್ಮ ಸಂಶೋಧನೆಯಿಂದ ತಿಳಿಸಿ ಹೇಳಿದರೂ ನಮ್ಮ ರೈತರು ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದರು. ಅದನ್ನು ಒಪ್ಪಿ ಅನುಸರಿಸಲು ಹಲವು ದಶಕಗಳ ಅವಧಿಯನ್ನು ತೆಗೆದುಕೊಂಡರು. ಅನಕ್ಷರತೆಯು ವಿಜ್ಞಾನ, ತಂತ್ರಜ್ಞಾನ, ಬದಲಾಗುತ್ತಿರುವ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಅಡ್ಡಿಬರುತ್ತದೆ. ಆದ್ದರಿಂದ ಸಾಮಾಜಿಕ ಬದಲಾವಣೆಯು ಮಂದಗತಿಯಲ್ಲಿ ಸಾಗುತ್ತದೆ.

## 2.3 ಸಾಮಾಜಿಕ–ಆರ್ಥಿಕ ಅಸಮಾನತೆ

ಸಮಾಜದಲ್ಲಿ ಕಂಡುಬರುವ ಸ್ತ್ರೀಪುರುಷ ಅಸಮಾನತೆ, ವರ್ಗಕಲಹ, ಜಾತಿಪದ್ಧತಿ, ಅಸ್ಪೃಶ್ಯತೆ, ಮುಂತಾದವುಗಳು ಸಾಮಾಜಿಕ ಬದಲಾವಣೆಗಿರುವ ದೊಡ್ಡ ಅಡ್ಡಿ ಆತಂಕಗಳು. ಉದಾಹರಣೆ– ನಮ್ಮ ದೇಶದಲ್ಲಿ ಬಾಲ್ಯವಿವಾಹ, ವಿಧವಾ ವಿವಾಹ, ಸತಿಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಮುಂತಾದವುಗಳನ್ನು ಕಾನೂನಿನ ಮೂಲಕ ತೆಗೆದುಹಾಕುವಾಗ ಬಹಳಷ್ಟು ಪ್ರತಿರೋಧ ವ್ಯಕ್ತವಾಗಿತ್ತು.

ಆರ್ಥಿಕ ಅಸಮಾನತೆಯು ಕೂಡ ಸಾಮಾಜಿಕ ಬದಲಾವಣೆಯ ಆತಂಕವಾಗಿದೆ. ಆರ್ಥಿಕ ಸಂಕಷ್ಟದಲ್ಲಿರುವ ಬಡವರು ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ. ಏಕೆಂದರೆ ಇದರಿಂದ ಆರ್ಥಿಕ ಸಂಕಷ್ಟಗಳು ಹೆಚ್ಚಾಗಬಹುದು ಎಂಬ ಕಾರಣಗಳಿಂದ ಅವರು ಹೊಸದನ್ನು ತಿರಸ್ಕರಿಸುತ್ತಾರೆ. **ಉದಾಹರಣೆಗೆ** ಕೃಷಿ ಉತ್ಪನ್ನಗಳನ್ನು ಹೆಚ್ಚಿಸಲು ನೀರೆತ್ತುವ ಪಂಪುಗಳು ಬಹಳ ಉಪಕಾರಿಯಾಗಿದ್ದರೂ ಅವು ದುಬಾರಿ ಎಂಬ ಕಾರಣಕ್ಕಾಗಿ ಭಾರತೀಯ ಅನೇಕ ರೈತರು ಬಳಸುತ್ತಿರಲಿಲ್ಲ. ಹಾಗೆಯೇ ಶ್ರೀಮಂತರು ತಮ್ಮ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವ ಸಲುವಾಗಿ ಯಾವುದೇ ಬದಲಾವಣೆ ಬಯಸುವುದಿಲ್ಲ.

ಸ್ವಾತಂತ್ರ್ಯ ಬಂದ ಕಾಲದಲ್ಲಿ, ನಮ್ಮ ದೇಶದ ವಿವಿಧ ಪ್ರದೇಶಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ಅಸಮತೋಲನ ಎದ್ದು ಕಾಣುತ್ತಿತ್ತು. ಆದುದರಿಂದ ಆರ್ಥಿಕ ಅಸಮತೋಲನವನ್ನು ಕಡಿಮೆ ಮಾಡಲು, ಸಮತೋಲನ ಅಭಿವೃದ್ಧಿ ಸಾಧಿಸಲು 1950ರ ಯೋಜನಾ ನೀತಿಯಲ್ಲಿ ಮುಖ್ಯ ಗುರಿಯಾಗಿ ಪರಿಗಣಿಸಲಾಗಿತ್ತು. ಈ ಗುರಿಯನ್ನು ಸಾಧಿಸಲು ಕೇಂದ್ರ ಸರ್ಕಾರವು ಅಭಿವೃದ್ಧಿಯಲ್ಲಿ ಸಾರ್ವಜನಿಕ ನೇರ ಬಂಡವಾಳ ಹೂಡಿಕೆ, ನಿಯಂತ್ರಿತ ಖಾಸಗಿ ಬಂಡವಾಳ ಹೂಡಿಕೆ ನೀತಿಯನ್ನು ಅನುಸರಿಸಿತು. ಇದನ್ನು ಅನುಷ್ಠಾನ ಮಾಡಿದ ನಂತರವೂ ಆರ್ಥಿಕ ಅಸಮತೋಲನ ಹೆಚ್ಚಾಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. 1992ರ ಜಾಗತೀಕರಣ, ಖಾಸಗೀಕರಣ, ಹಾಗೂ ಉದಾರೀಕರಣ ನೀತಿಗಳಿಂದ ಆರ್ಥಿಕ ಅಸಮತೋಲನ ಹೆಚ್ಚಾಗಿದೆ. ಮೂಲಭೂತ ಸೌಕರ್ಯಗಳನ್ನು ಹೊಂದಿರದ ಪ್ರದೇಶಗಳು ಖಾಸಗಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ ಸಮತೋಲನವನ್ನು ಕಾಯ್ದಿರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಎಲ್ಲಿ ಆರ್ಥಿಕ ಅಭಿವೃದ್ಧಿ ಕಡಿಮೆ ಇರುತ್ತದೆಯೋ ಅಲ್ಲಿ ಅನಕ್ಷರತೆ ಜಾಸ್ತಿ ಇರುತ್ತದೆ. ಪರಿಣಾಮವಾಗಿ ಜನರು ಬದಲಾವಣೆಯನ್ನು ಸ್ವೀಕರಿಸುವುದಿಲ್ಲ.

ಕಳೆದ ದಶಕಗಳಲ್ಲಿ ಸಾಮಾಜಿಕ ಅಭಿವೃದ್ಧಿಯಲ್ಲಿಯೂ ಕೂಡ ಅಸಮಾನತೆಯು ಹೆಚ್ಚಾಗಿದೆಯೆಂದು ಹೇಳಬಹುದು. ಆರ್ಥಿಕ ಅಭಿವೃದ್ಧಿ ಸುಧಾರಿಸಿರುವ ಪ್ರದೇಶಗಳಲ್ಲಿ ಅಕ್ಷರತೆಯ ಮಟ್ಟ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಕಂಡುಬರುತ್ತಿದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಹಣ ತೊಡಗಿಸುವಿಕೆಯು ಹೆಚ್ಚಾಗಿದೆ. ಉತ್ತಮ ಆಡಳಿತ, ಕಾನೂನು ಸುವ್ಯವಸ್ಥೆ, ಹಾಗೂ ಪರಿಪಾಲನೆ ಈ ವಿಷಯಗಳಲ್ಲಿಯೂ ಉತ್ತಮ ಸುಧಾರಣೆ ಕಂಡುಬಂದಿದೆ. ಆದುದರಿಂದ ಆರ್ಥಿಕ ಅಸಮತೋಲನವು ಸಾಮಾಜಿಕ ಬದಲಾವಣೆಗೆ ದೊಡ್ಡ ತೊಡಕಾಗಿದೆ ಎಂದು ಹೇಳಬಹುದು.

## 2.4 ಪ್ರಾದೇಶಿಕ ಅಸಮತೋಲನ

ಪ್ರಾದೇಶಿಕ ಅಸಮತೋಲನವೆಂದರೆ ಒಂದು ರಾಷ್ಟ್ರ ಅಥವಾ ರಾಜ್ಯದ ಎಲ್ಲ ಪ್ರದೇಶಗಳೂ ಸಮಾನವಾಗಿ ಅಭಿವೃದ್ಧಿ ಹೊಂದದೆ ಇರುವುದು. ಉದಾಹರಣೆಗೆ ಕರ್ನಾಟಕದಲ್ಲಿ ದಕ್ಷಿಣ ಕರ್ನಾಟಕವೂ ಸಾರಿಗೆ ಸಂಪರ್ಕ, ನೀರಾವರಿ ಸೌಲಭ್ಯ, ಕೈಗಾರಿಕೀಕರಣ ಮತ್ತು ನಗರೀಕರಣದಲ್ಲಿ ಹೆಚ್ಚಿನ ಪಾಲನ್ನು ಪಡೆದಿದೆ. ಆದರೆ ಉತ್ತರ ಕರ್ನಾಟಕವು ಇವುಗಳಿಂದ ಸ್ವಲ್ಪ ಮಟ್ಟಿಗೆ ವಂಚಿತವಾಗಿವೆ. ಕೈಗಾರಿಕೀಕರಣ ಮತ್ತು ನಗರೀಕರಣ ಕುಂಠಿತವಾದಷ್ಟೂ ಸಾಮಾಜಿಕ ಬದಲಾವಣೆಯು ನಿಧಾನವಾಗುತ್ತದೆ.

> ಜನಸಂಖ್ಯಾ ನಿಯಂತ್ರಣ ಯೋಜನೆಗೆ ಅನುಗುಣವಾಗಿ ಕುಟುಂಬ ಯೋಜನಾ ಪದ್ಧತಿಯು ಜಾರಿಗೆ ಬಂದಿತು. ಕುಟುಂಬ ಯೋಜನೆಯ ಮೂಲ ಉದ್ದೇಶ ಪ್ರತಿ ಕುಟುಂಬವು ಎರಡು ಮಕ್ಕಳನ್ನು ಪಡೆಯುವುದಾಗಿದೆ. ಏಕೆಂದರೆ ಕುಟುಂಬ ಯೋಜನೆಯು ಅಸ್ತಿತ್ವಕ್ಕೆ ಬರುವ ಮೊದಲು ಭಾರತೀಯ ಸಮಾಜದಲ್ಲಿ ಹೆಚ್ಚು ಮಕ್ಕಳನ್ನು ಪಡೆಯುವ ವಾಡಿಕೆ ಇತ್ತು. ನಗರ ಪ್ರದೇಶದ ಜನ ಬಹಳ ವೇಗವಾಗಿ ಕುಟುಂಬ ಯೋಜನಾ ಪದ್ಧತಿಗೆ ಒಗ್ಗಿಕೊಂಡರು. ಆದರೆ ಗ್ರಾಮೀಣ ಜನರು ಕುಟುಂಬಯೋಜನಾ ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳುವುದರಿಂದ ನಾವು ಶಕ್ತಿ ಹೀನರಾಗಬಹುದು ಕಠಿಣ ದುಡಿಮೆಯಲ್ಲಿ ತೊಡಗುವುದರಲ್ಲಿ ಸಾಧ್ಯವಾಗದೇ ಇರಬಹುದು. ಎಂದು ಭಯವನ್ನು ಪಟ್ಟರು. ಇದಕ್ಕೆ ಮೂಲ ಕಾರಣ ಗ್ರಾಮೀಣ ಜನತೆಯ ಬಡತನವೇ ಆಗಿತ್ತು.

ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿಯೂ ನಗರ– ಗ್ರಾಮೀಣ ಪ್ರದೇಶಗಳ ಅಸಮಾನತೆ ಪ್ರಮುಖ ಅಂಶವಾಗಿದೆ. ನಗರ ಪ್ರದೇಶಗಳು ಸುಧಾರಿತ ಪ್ರಗತಿ ಸಾಧಿಸುತ್ತಿದ್ದರೆ, ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಹಿಂದುಳಿದಿವೆ. ಜಾಗತೀಕರಣದ ಪ್ರಭಾವದಿಂದ ಜಾಗತಿಕ ಸ್ಪರ್ಧೆಗಳಿಗೆ ಸ್ಪಂದಿಸದೆ ನಮ್ಮ ರೈತರು ದೂರ ಸರಿದು ಸಂಕಷ್ಟಗಳಿಗೆ ಸಿಲುಕಿದ್ದಾರೆ. ಕೆಲಸಗಳನ್ನು ಹುಡುಕಿಕೊಂಡು ನಗರಕ್ಕೆ ವಲಸೆ ಹೋಗುವ ದೃಶ್ಯವು ಸಾಮಾನ್ಯವಾಗಿದೆ. ವಿಜ್ಞಾನ ತಂತ್ರಜ್ಞಾನವು ನಗರದ ಜನರ ಮೇಲೆ ಪ್ರಭಾವ ಬೀರುತ್ತವೆ. ಆದುದರಿಂದ ನಗರದ ಜನರು ಯಾವುದೇ ರೀತಿಯ ಬದಲಾವಣೆಗೆ ವೇಗವಾಗಿ ಸ್ಪಂದಿಸುತ್ತಾರೆ. ಗ್ರಾಮೀಣ ಜನತೆಯು ಯಾವುದೇ ಬದಲಾವಣೆಯನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಬದಲಾವಣೆಯನ್ನು ಒಪ್ಪಿಕೊಳ್ಳುವುದರ ಮೂಲಕ ತಮ್ಮ ಬದುಕಿನ ಮೇಲೆ ದುಷ್ಪರಿಣಾಮ ಉಂಟಾಗಬಹುದೆಂಬ ಭಯ ಅವರನ್ನು ಕಾಡುತ್ತದೆ. ಪ್ರಾದೇಶಿಕ ಅಸಮತೋಲನದಿಂದ ವಲಸೆಯು ಜಾಸ್ತಿಯಾಗುತ್ತದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜನರು ವಲಸೆ ಹೋಗುವುದರಿಂದ ಅನಕ್ಷರತೆ ಒಂದು ಸಮಸ್ಯೆಯಾಗಿಯೇ ಉಳಿಯುತ್ತದೆ. ಇದರಿಂದ ಸಾಮಾಜಿಕ ಬದಲಾವಣೆಯು ತಡವಾಗುತ್ತದೆ. ಮೇಲಿನ ಅಂಶಗಳಲ್ಲದೇ ಲಿಂಗ ಅಸಮಾನತೆ ಮತ್ತು ಸಾಮಾಜಿಕ ಅಂತರಗಳು ಸಾಮಾಜಿಕ ಬದಲಾವಣೆಯನ್ನು ತಡೆಗಟ್ಟುತ್ತವೆ.

**ಸಾಮಾಜಿಕ ಅಂತರ**

ಸ್ವಭಾವತಃ ಭಾರತೀಯ ಸಮಾಜವು ಜಾತಿ ಪದ್ಧತಿಯನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ಜನರ ಮೇಲೆ ಅಪರಾಧ ಕೃತ್ಯಗಳು ಹೆಚ್ಚುತ್ತಿರುವುದು ಕಂಡುಬಂದಿದೆ. ಪರಿಶಿಷ್ಟ ವರ್ಗದವರು ಶೇ೮ ರಷ್ಟಿದ್ದರೂ ಅವರು ಹೊಂದಿರುವ ಭೂಮಿಯ ನಿಕೃಷ್ಟವಾಗಿದೆ. ಅವರು ವಾಸಿಸುತ್ತಿರುವ ಪ್ರದೇಶದಲ್ಲಿ ಗಣಿಕಾರಿಕೆ, ಬೃಹತ್ ನೀರಾವರಿ ಯೋಜನೆಗಳನ್ನು ಹಮ್ಮಿಕೊಂಡಿರುವುದರಿಂದ ಅವರು ತಮ್ಮ ಪ್ರದೇಶದಿಂದ ಹೊರಬರಬೇಕಾಗಿದೆ. ಆ ಪ್ರದೇಶಗಳಲ್ಲಿ ಪರಿಶಿಷ್ಟ ವರ್ಗವಲ್ಲದ ಗುಂಪಿನ ಜನರು ಹೆಚ್ಚು ಪ್ರಾಬಲ್ಯವನ್ನು ಹೊಂದಿದ್ದಾರೆ.

**ಲಿಂಗ ಅಸಮಾನತೆ**

ಲಿಂಗ ಅಸಮಾನತೆಯು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ವಿಭಜಕವಾದ ಅಂಶವಾಗಿದೆ. ಪಿತೃಪ್ರಧಾನ ಸಮಾಜವಾದ ನಮ್ಮ ದೇಶದಲ್ಲಿ ಪುರುಷರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಮಾನವ ಅಭಿವೃದ್ಧಿ ವರದಿಯ ಪ್ರಕಾರ, ಅರಬ್ ದೇಶಗಳಿಗಿಂತ ಭಾರತದಲ್ಲಿ ಲಿಂಗ ಅಸಮಾನತೆಯು ತೀಕ್ಷ್ಣವಾಗಿದೆ. ೨೦೦೧ರ ಜನಗಣತಿಯಂತೆ ಕಾನೂನುಬಾಹಿರ ಲಿಂಗ ಪತ್ತೆಹಚ್ಚುವಿಕೆ ಭಾರತದಲ್ಲಿ ಹೆಚ್ಚಾಗಿದೆ. ಇದರಿಂದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ.

ಭಾರತೀಯ ಸಮಾಜವು ಸಾಮಾಜಿಕ ಬದಲಾವಣೆಯನ್ನು ಸಾಧಿಸುವುದು ಅವಶ್ಯಕವಾಗಿದೆಯೆಂದು ಸಮಾಜ ಶಾಸ್ತ್ರಜ್ಞರು ಭಾವಿಸುತ್ತಾರೆ. ಜಾತಿ ಪದ್ಧತಿ, ಸಾಂಪ್ರದಾಯಿಕ ಮನಸ್ಥಿತಿ, ಅನಕ್ಷರತೆ, ಸಾಮಾಜಿಕ, ಆರ್ಥಿಕ ಮತ್ತು ಪ್ರಾದೇಶಿಕ ಅಸಮತೋಲನ ಕಡಿಮೆಯಾಗದ ಹೊರತು ಭಾರತದ ಪ್ರಗತಿ ಸಾಧ್ಯವಿಲ್ಲ.

## ಅಭ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1. 1950ರ ಯೋಜನಾ ನೀತಿಯಲ್ಲಿ ----------------ನ್ನು ಮುಖ್ಯ ಗುರಿಯಾಗಿ ಪರಿಗಣಿಸಲಾಗಿತ್ತು.
2. ಮೂಲಭೂತ ಸೌಕರ್ಯಗಳನ್ನು ಹೊಂದಿರದ ಪ್ರದೇಶಗಳು -------- ಹೂಡಿಕೆಯನ್ನು ಆಕರ್ಷಿಸಿ ಸಮತೋಲನವನ್ನು ಕಾಯ್ದಿರಿಸಿಕೊಳ್ಳಲು ಪ್ರಯತ್ನಿಸುತ್ತಿವೆ.
3. ಕೇಂದ್ರ ಸರ್ಕಾರವು ಅಭಿವೃದ್ಧಿಯಲ್ಲಿ------------, ----------- ನೀತಿಯನ್ನು ಅನುಸರಿಸಿತು.
4. ಭಾರತ ಸರ್ಕಾರ ಜನಸಂಖ್ಯೆಯನ್ನು ನಿಯಂತ್ರಿಸಲು ಜಾರಿಗೆ ತಂದ ಯೋಜನೆ__________

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕುಟುಂಬ ಯೋಜನೆಯನ್ನು ಮೊದಲು ಜಾರಿಗೊಳಿಸಿದ ರಾಷ್ಟ್ರ ಯಾವುದು?
2. ಪ್ರಾದೇಶಿಕ ಅಸಮತೋಲನ ಎಂದರೇನು?
3. ಆರ್ಥಿಕ ಅಸಮತೋಲನ ಎಂದರೇನು?
4. ವಲಸೆಯ ಹೆಚ್ಚಳಕ್ಕೆ ಕಾರಣವಾದ ಅಂಶ ಯಾವುದು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳು ಯಾವುವು?
2. ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಹೇಗೆ ಅಡ್ಡಿ ಆತಂಕವಾಗಿದೆ, ತಿಳಿಸಿ.
3. ಪ್ರಾದೇಶಿಕ ಅಸಮತೋಲನದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
4. ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ವಿರೋಧಿಸಲು ಕಾರಣವೇನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ಆರ್ಥಿಕ ಅಭಿವೃದ್ಧಿಗೂ ಸಾಮಾಜಿಕ ಬದಲಾವಣೆಗೂ ನಿಕಟ ಸಂಬಂಧವಿದೆ ಹೇಗೆ? ಚರ್ಚಿಸಿ.
2. ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗಿರುವ ಅಸಮಾನತೆಗಳನ್ನು ವಿಶ್ಲೇಷಿಸಿ.

**ಸಲಹಾತ್ಮಕ ಚಟುವಟಿಕೆಗಳು :**

- ✦ ಭಾರತದಲ್ಲಿ ಲಿಂಗ ಅಸಮಾನತೆಯು ಸಾಮಾಜಿಕ ಅಭಿವೃದ್ಧಿಗೆ ವಿಭಜಕ ಅಂಶ – ಒಂದು ಪ್ರಬಂಧವನ್ನು ಮಂಡಿಸಿ.
- ✦ ನಗರ– ಗ್ರಾಮೀಣ ಅಸಮಾನತೆಯ ಬಗ್ಗೆ ವಿಷಯ ಸಂಗ್ರಹಣೆ ಮಾಡಿ.
- ✦ ಜಾಗತೀಕರಣವು ಸಮಾಜದಲ್ಲಿ ಬದಲಾವಣೆ ತರವಲ್ಲಿ ಅಡ್ಡಿ ತರುತ್ತದೆಯೇ? ಚರ್ಚಾಕೂಟ ಏರ್ಪಡಿಸಿ.

# ಅಧ್ಯಾಯ-3

# ಭಾರತದ ಜಾತಿವ್ಯವಸ್ಥೆಯಲ್ಲಿನ ಬದಲಾವಣೆ

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಜಾತಿ ಪದ್ಧತಿಯ ಸ್ವರೂಪ
- ಜಾತಿಯ ಗುಣಲಕ್ಷಣಗಳು
- ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿ ಜಾತಿ
- ಆಧುನಿಕ ಕಾಲದಲ್ಲಿ ಜಾತಿ ವ್ಯವಸ್ಥೆ

## 3.1 ಪೀಠಿಕೆ

ಜಾತಿ ವ್ಯವಸ್ಥೆಯು ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಗಿದೆ. ಭಾರತೀಯ ಸಮಾಜಶಾಸ್ತ್ರಜ್ಞರು ಜಾತಿಯ ಅಧ್ಯಯನವನ್ನು ಮಾಡದೆ ಹೋದರೆ, ಭಾರತೀಯ ಸಮಾಜದ ಅಧ್ಯಯನವು ಅಪೂರ್ಣವಾಗುತ್ತದೆ ಎಂಬ ಅಭಿಪ್ರಾಯವನ್ನು ಪಡುತ್ತಾರೆ. ಭಾರತೀಯರ ಜೀವನ, ಸಾಮಾಜಿಕ ಸ್ಥಾನಮಾನ, ಜೀವನದ ಅವಕಾಶಗಳು ಜೀವನಶೈಲಿ, ಶಿಕ್ಷಣ, ಉದ್ಯೋಗ, ರಾಜಕಾರಣ, ವರ್ತನೆ, ಸಂಪನ್ಮೂಲಗಳ ಹಂಚಿಕೆ, ತಾರತಮ್ಯ ಇವುಗಳ ಮೇಲೆ ಅಪಾರವಾದ ಪ್ರಭಾವವನ್ನು ಬೀರುತ್ತದೆ. ಆದುದರಿಂದ ಭಾರತೀಯ ಸಮಾಜವನ್ನು ಅಧ್ಯಯನ ಮಾಡಲು ಬಯಸುವ ಯಾವುದೇ ವ್ಯಕ್ತಿಯು ಜಾತಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

## 3.2 ಜಾತಿ ಪದ್ಧತಿಯ ಸ್ವರೂಪ

**ಜಾತಿ ಪದದ ಉಗಮ ಮತ್ತು ಅರ್ಥ :** ಜಾತಿ ಎನ್ನುವ ಪದವನ್ನು ಇಂಗ್ಲಿಷ್‌ನಲ್ಲಿ 'ಕ್ಯಾಸ್ಟ್' ಎಂದು ಕರೆಯುತ್ತಾರೆ. ಕ್ಯಾಸ್ಟ್ ಎನ್ನುವ ಪದವು ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಯ 'ಕ್ಯಾಸ್ಟಾ' ಎಂಬ ಪದದಿಂದ ಬಂದಿದೆ. ಕ್ಯಾಸ್ಟಾ ಎಂಬುದು ಜನಾಂಗ, ತಳಿ, ಅನುವಂಶೀಯತೆ ಮುಂತಾದ ಅರ್ಥ ಕೊಡುತ್ತದೆ. ಆದುದರಿಂದ ಭಾರತಕ್ಕೆ ಬಂದ ಪಾಶ್ಚಿಮಾತ್ಯರು ಇಲ್ಲಿಯ ಜಾತಿಪದ್ಧತಿಗಳನ್ನು ನೋಡಿ ಜಾತಿಗೆ ಕ್ಯಾಸ್ಟ್ ಎಂಬ ಪದವನ್ನು ಬಳಸಿದರು.

**ಮೆಕೈವರ್ ಮತ್ತು ಪೇಜ್‌ರವರ ಪ್ರಕಾರ :** ಜನರ ಸ್ಥಾನಮಾನವು ಮೊದಲೇ ಸಂಪೂರ್ಣವಾಗಿ ನಿರ್ಣಯಿಸಲ್ಪಟ್ಟಿರುತ್ತದೆ. ಅವರು ಹುಟ್ಟಿದಾಗಲೇ ಅವರ ಜೀವನದ ಸ್ಥಿತಿಗತಿಗಳು ಹೀಗೆಯೇ ಇರಬೇಕೆಂಬುದು ತೀರ್ಮಾನವಾಗಿರುತ್ತದೆ. ಅದನ್ನು ಬದಲಾಯಿಸಲು ಯಾವ ಭರವಸೆಯೂ ಇರುವುದಿಲ್ಲ. ಇಂತಹ ಭರವಸೆಯಿಲ್ಲದ ವರ್ಗವು ಜಾತಿಯ ಸ್ವರೂಪವನ್ನು ತಾಳುತ್ತದೆ.

**ಎಸ್.ವಿ. ಕೇತ್ಕರ್ ಅವರ ಪ್ರಕಾರ :** ಜಾತಿಯು ಒಂದು ಸಮೂಹವಾಗಿದೆ. ಅದು ಎರಡು ಗುಣಲಕ್ಷಣಗಳನ್ನು ಹೊಂದಿದೆ. ಅವು ಯಾವುವೆಂದರೆ, ಆ ಜಾತಿಯಲ್ಲಿ ಹುಟ್ಟಿದವನಿಗೆ ಮಾತ್ರ ಜಾತಿಯ ಸದಸ್ಯತ್ವ ಇರುತ್ತದೆ. ಜಾತಿಯಲ್ಲಿ

ಹುಟ್ಟಿದವರೆಲ್ಲರೂ ಆ ಜಾತಿಯಲ್ಲಿ ಸಹಜವಾಗಿಯೇ ಸೇರ್ಪಡೆಯಾಗಿರುತ್ತಾರೆ. ಎರಡನೆಯದು, ಜಾತಿಯ ಹೊರಗಡೆಯಿಂದ ವಿವಾಹವಾಗದಂತೆ ಸ್ವಜಾತಿಯ ಸದಸ್ಯರನ್ನು ಕಠೋರವಾದ ಸಾಮಾಜಿಕ ನಿಯಮಗಳಲ್ಲಿ ಬಂಧಿಸಲಾಗುತ್ತದೆ.

ಹೀಗೆ ಜಾತಿಯನ್ನು ಕುರಿತು ವಿವಿಧ ಸಮಾಜಶಾಸ್ತ್ರಜ್ಞರು ಬಗೆಬಗೆಯ ವಿವರಣೆಗಳನ್ನು ನೀಡುತ್ತಾರೆ. ಆದರೆ, ಯಾವ ವಿವರಣೆಯೂ ಸಂಪೂರ್ಣವಾಗಿ ಜಾತಿಯ ಗುಣಲಕ್ಷಣವನ್ನು ತಿಳಿಸುವುದಿಲ್ಲ.

## 3.3 ಜಾತಿಯ ಗುಣಲಕ್ಷಣಗಳು

**ಜಿ.ಎಸ್. ಗುರ್ರೆರವರು** ತಮ್ಮ 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಜಾತಿಯ ಎಂಟು ಗುಣಲಕ್ಷಣಗಳನ್ನು ತಿಳಿಸಿದ್ದಾರೆ. ಅವರ ಪ್ರಕಾರ ಜಾತಿಯು ಸಾಮಾಜಿಕ ಏಣಿ–ಶ್ರೇಣಿಯನ್ನು ಒಳಗೊಂಡಿರುತ್ತದೆ. ಜಾತಿಗಳನ್ನು ಪವಿತ್ರ–ಅಪವಿತ್ರ ಎಂದು ವಿಂಗಡಿಸಲಾಗಿದೆ. ಇದರ ಆಧಾರದ ಮೇಲೆ ಒಂದರ ಕೆಳಗೊಂದು ಏಣಿಯಂತೆ ಜಾತಿಗಳನ್ನು ಜೋಡಿಸಿ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂದು ವಿಂಗಡಿಸಲಾಗುತ್ತದೆ. ಬ್ರಾಹ್ಮಣರನ್ನು ಅತಿ ಉತ್ತಮರೆಂದು ಪರಿಗಣಿಸಿ ಅಸ್ಪೃಶ್ಯ ಜಾತಿಗಳನ್ನು ಕೀಳು ಎಂದು ಭಾವಿಸಲಾಗುತ್ತದೆ.

ಜಾತಿಯು ಹಿಂದೂ ಸಮಾಜದ ಭಾಗವಾಗಿದೆ. ಜಾತಿಯ ಸದಸ್ಯತ್ವವು ಹುಟ್ಟಿನಾಧಾರದ ಮೇಲೆಯೇ ನಿರ್ಧರಿತವಾಗುತ್ತದೆ. ಯಾವ ಅಧಿಕಾರ, ಆಸ್ತಿ, ಅಂತಸ್ತು, ಪ್ರತಿಷ್ಠೆಗಳಿಂದಲೂ ಜಾತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಪ್ರತಿಯೊಂದು ಜಾತಿಯು ತನ್ನದೇ ಆದ ಆಹಾರ ಕ್ರಮ, ರೂಢಿ ಸಂಪ್ರದಾಯ, ಆಚರಣೆ ಸಂಸ್ಕಾರಗಳನ್ನು ಒಳಗೊಂಡಿರುತ್ತದೆ. ಜಾತಿಯ ನಿಯಮಗಳನ್ನು ಮೀರುವಂತಿಲ್ಲ. ಉದಾಹರಣೆಗೆ ಇಂದಿಗೂ ಕೂಡ ತನ್ನ ಜಾತಿಯನ್ನು ಬಿಟ್ಟು ಇತರ ಜಾತಿಗಳೊಂದಿಗೆ ಮದುವೆಯಾದ ಮಕ್ಕಳನ್ನು ಮರ್ಯಾದೆ ಹತ್ಯೆ ಮಾಡಿರುವ ಉದಾರಣೆಗಳಿವೆ.

ಜಾತಿಯು ಊಟೋಪಚಾರದ ಮೇಲೆಯೂ ನಿರ್ಬಂಧ ವಿಧಿಸುತ್ತದೆ. ಬ್ರಾಹ್ಮಣರು ಕ್ಷತ್ರಿಯ, ವೈಶ್ಯ ಮುಂತಾದ ಮೇಲ್ಜಾತಿಯವರು ತಯಾರಿಸಿದ ಪಕ್ಕಾ ಆಹಾರವನ್ನು ಸೇವಿಸಬಹುದು. ಆದರೆ, ಬ್ರಾಹ್ಮಣರು ಬಿಟ್ಟು ಬೇರಾವ ಜಾತಿಯವರು ತಯಾರಿಸಿದ ಕಚ್ಚಾ ಆಹಾರವನ್ನು ಸೇವಿಸುವಂತಿಲ್ಲ. ಪಕ್ಕಾ ಆಹಾರ ಎಂದರೆ ತುಪ್ಪದಿಂದ ತಯಾರಿಸಿದ ಆಹಾರವಾಗಿದೆ. ಕಚ್ಚಾ ಆಹಾರವೆಂದರೆ ನೀರಿನಿಂದ ತಯಾರಿಸಿದ ಆಹಾರವಾಗಿದೆ. ಇದಕ್ಕೆ ಉದಾಹರಣೆ ಎಂದರೆ ನಮ್ಮ ದೇಶದಲ್ಲಿ ಜಾತಿಯ ಹೆಸರಿನಲ್ಲಿಯೇ ಹೋಟೆಲುಗಳಿರುವುದು. ಉದಾಹರಣೆಗೆ ಬ್ರಾಹ್ಮಣರ ಕಾಫೀಬಾರ್, ಉಡುಪಿ, ಅಡಿಗ ರೆಸ್ಟೋರೆಂಟ್, ವೀರಶೈವ ಖಾನಾವಳಿ, ಗೌಡರ ಮುದ್ದೇಮನೆ, ಹಿಂದೂ ಮಿಲಿಟರಿ ಹೋಟೆಲ್ ಮೊದಲಾದುವು.

ಸಾಮಾಜಿಕ ಸಂಬಂಧಗಳ ಮೇಲಿನ ನಿರ್ಬಂಧಗಳು: ಸಂಬಂಧಗಳೆಂದರೆ, ಯಾವ ವ್ಯಕ್ತಿಯು ಯಾರ ಜೊತೆ ವೈವಾಹಿಕ ಮತ್ತು ಸಾಮಾಜಿಕ ಸಂಪರ್ಕವನ್ನು ಇರಿಸಿಕೊಳ್ಳಬೇಕೆಂಬುದನ್ನು ನಿರ್ಧರಿಸುವುದಾಗಿದೆ. ಕೆಳಜಾತಿಯವರ ಜೊತೆ ಯಾವುದೇ ಸಂಪರ್ಕವನ್ನು ಇಟ್ಟುಕೊಳ್ಳಬಾರದು. ವೈವಾಹಿಕ ಸಂಬಂಧವನ್ನು ಇರಿಸಿಕೊಳ್ಳಬಾರದು ಎಂಬ ನಂಬಿಕೆ ಇದೆ. ಉದಾರಹಣೆಗೆ ಕೇರಳದಲ್ಲಿ ನಾಯರ್ ಜಾತಿಯವರು ನಂಬೂದರಿ ಬ್ರಾಹ್ಮಣರನ್ನು ನೋಡಬಹುದಿತ್ತು. ಆದರೆ ಸ್ಪರ್ಶಿಸುವಂತಿರಲಿಲ್ಲ.

ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಜಾತಿಗಳನ್ನು ಅನರ್ಹವೆಂದು ಪರಿಗಣಿಸಲಾಗತ್ತದೆ. ಈಗಲೂ ಕೂಡ ದಲಿತರು ಗ್ರಾಮ ಹಾಗೂ ಪಟ್ಟಣಗಳ ಹೊರವಲಯಗಳಲ್ಲಿ ವಾಸಿಸುವುದನ್ನು ಕಾಣಬಹುದು. ಅವರಿಗೆ ದೇವಾಲಯಗಳಿಗೆ ಪ್ರವೇಶವಿರುವುದಿಲ್ಲ. ಉದ್ಯೋಗಗಳ ಆಯ್ಕೆಯ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಯಾವ ಜಾತಿಗೆ ಯಾರು ಸೇರುತ್ತಾರೋ ಆ ಜಾತಿಯ ಜನರೇ ಉದ್ಯೋಗವನ್ನು ಮಾಡಬೇಕೆಂಬುದು ನಿರ್ಧಾರವಾಗಿತ್ತು. ಬ್ರಾಹ್ಮಣರು ಪೌರೋಹಿತ್ಯ, ಪೂಜೆ, ಅಧ್ಯಾಪನ ಮೊದಲಾದವುಗಳಲ್ಲಿ ತೊಡಗಿಕೊಂಡರೆ, ಅಸ್ಪೃಶ್ಯರು ಚರ್ಮ ಸಂಬಂಧಿ ವೃತ್ತಿಗಳಲ್ಲಿ ತೊಡಗಿಕೊಳ್ಳಬೇಕಿತ್ತು.

ವಿವಾಹದ ಮೇಲಿನ ನಿರ್ಬಂಧವು ಜಾತಿ ವ್ಯವಸ್ಥೆಯ ಬುನಾದಿಯಾಗಿದೆ. ಯಾವುದೇ ವ್ಯಕ್ತಿಯು ತನ್ನದೇ ಜಾತಿಯಲ್ಲಿ ಮದುವೆಯಾಗಬೇಕು. ಬೇರೆ ಜಾತಿಯಲ್ಲಿ ವಿವಾಹವಾದರೆ ಆತನನ್ನು ಅಥವಾ ಆಕೆಯನ್ನು ಜಾತಿಯಿಂದ ಹೊರಹಾಕಲಾಗುತ್ತದೆ. ಜೆ.ಎಸ್. ಗುರ‍್ರೆಯವರು ನೀಡಿರುವ ಜಾತಿಯ ಗುಣಲಕ್ಷಣಗಳು ಜಾತಿಯ ಪದ್ಧತಿಯನ್ನು ಕುರಿತು ನಮಗೆ ಪೂರ್ಣ ಚಿತ್ರಣವನ್ನು ನೀಡುತ್ತದೆ. ಇದರಿಂದಾಗಿ ನಾವು ಜಾತಿಯ ಗುಣಲಕ್ಷಣಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಮೇಲಿನ ಗುಣಲಕ್ಷಣಗಳಿಂದ ತಿಳಿದುಬರುವುದೇನೆಂದರೆ, ಜಾತಿ ಪದ್ಧತಿಯು ಅತಿ ಕಠಿಣವಾದ ಪದ್ಧತಿಯಾಗಿದೆ. ಅದರಲ್ಲಿ ಬದಲಾವಣೆ ತರುವುದು ಕಷ್ಟವಾಗಿದೆ. ಭಾರತೀಯ ಚರಿತ್ರೆಯನ್ನು ಗಮನಿಸಿದರೆ ಜಾತಿ ಪದ್ಧತಿಯನ್ನು ವಿರೋಧಿಸಿ ಅನೇಕ ಚಳುವಳಿಗಳು ನಡೆದಿವೆ ಮತ್ತು ಹೊಸ ಧರ್ಮಗಳು ಜನ್ಮತಾಳಿವೆ. ಇದನ್ನು ನಾವು (ಸಾಮಾಜಿಕ ಚಳುವಳಿಗಳು ಮತ್ತು ಬದಲಾವಣೆ) ಎಂಬ ಅಧ್ಯಾಯದಲ್ಲಿ ನೋಡುತ್ತೇವೆ.

ಗೌತಮಬುದ್ಧನು ಜಾತಿಪದ್ಧತಿಯನ್ನು, ಬ್ರಾಹ್ಮಣರ ದಬ್ಬಾಳಿಕೆಯನ್ನು ವಿರೋಧಿಸಿ ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಹನ್ನೆರಡನೇ ಶತಮಾನದ ಕರ್ನಾಟಕದಲ್ಲಿ ಬಸವಣ್ಣ ಮತ್ತು ವಚನಕಾರರು ವಚನ ಚಳುವಳಿಯನ್ನು ಹುಟ್ಟುಹಾಕಿದರು. ವಚನ ಚಳುವಳಿಯಲ್ಲಿ ಎಲ್ಲ ಜಾತಿಯ ಜನರೂ ಭಾಗವಹಿಸಿದರು. ಇದರಿಂದ ಬದಲಾವಣೆ ಉಂಟಾಯಿತು. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಕೈಗೆ ಸಿಕ್ಕಿ ಅದು ಲಿಂಗಾಯತ ಧರ್ಮವೆನಿಸಿಕೊಂಡಿತು.

ಮಹಾವೀರನು ಜೈನಧರ್ಮವನ್ನು ಸ್ಥಾಪಿಸಿದನು. ಪಂಜಾಬ್‌ನಲ್ಲಿ ಗುರುನಾನಕ್ ಅವರು ಜಾತಿಪದ್ಧತಿಯನ್ನು ವಿರೋಧಿಸಿ ಸಿಖ್ ಧರ್ಮವನ್ನು ಸ್ಥಾಪಿಸಿದರು. ಎಲ್ಲ ಧರ್ಮಗಳ ಸ್ಥಾಪನೆಯಾದರೂ ಕೂಡ ಜಾತಿಪದ್ಧತಿಯು ತನ್ನ ಪ್ರಭಾವವನ್ನು ಕಳೆದುಕೊಳ್ಳಲಿಲ್ಲ. ಆ ಧರ್ಮಗಳು ಬೇರೆ ಅಸ್ತಿತ್ವವನ್ನು ಪಡೆದವೇ ವಿನಃ ಭಾರತದ ಜಾತಿ ವ್ಯವಸ್ಥೆಯಲ್ಲಿ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಮೊಟ್ಟಮೊದಲ ಬಾರಿಗೆ ಜಾತಿ ಜನಗಣತಿಯನ್ನು ನಡೆಸಿದರು. ಜಾತಿಯ ಗುಣಲಕ್ಷಣಗಳನ್ನು ಅರಿತರು ಮತ್ತು ಅನೇಕ ಶಾಸನಗಳನ್ನು ಜಾರಿಗೆ ತಂದರು.

1850ರಲ್ಲಿ ಜಾತಿ ಅನರ್ಹತೆಗಳ ನಿರ್ಮೂಲನಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಜಾತಿಯ ಹೆಸರಿನಲ್ಲಿ ಯಾವುದೇ ವ್ಯಕ್ತಿಯ ಸಾಮಾಜಿಕ ಹಾಗೂ ಸಾರ್ವಜನಿಕ ಹಕ್ಕುಗಳನ್ನು ಕಸಿಯುವುದನ್ನು ನಿರ್ಬಂಧಿಸಿತು. ಆನಂತರ 1872ರಲ್ಲಿ ವಿಶೇಷ ವಿವಾಹ ಕಾಯಿದೆಯು ಜಾರಿಗೆ ಬಂದಿತು. ಆ ಕಾಲಕ್ಕೆ ಇದು ಕ್ರಾಂತಿಕಾರಿಯಾದ ಕಾಯಿದೆಯಾಗಿತ್ತು. ಇದು ಅಂತರ್ಜಾತೀಯ ವಿವಾಹಕ್ಕೆ ಅವಕಾಶವನ್ನು ಮಾಡಿಕೊಟ್ಟಿತು.

1856ರಲ್ಲಿ ಹಿಂದೂ ಪುನರ್ವಿವಾಹ ಕಾಯಿದೆಯು ಅಸ್ತಿತ್ವಕ್ಕೆ ಬಂದಿತು. ಈ ಕಾಯಿದೆಯು ವಿಧವೆಯರಿಗೆ ವಿವಾಹವಾಗುವ ಅವಕಾಶ ಕಲ್ಪಿಸಿತು. ಇದರಿಂದಾಗಿ ಭಾರತೀಯ ಜಾತಿ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾಗುವ ಲಕ್ಷಣಗಳು ತೋರಿದವು. ಜ್ಯೋತಿರಾವ್ ಫುಲೆ ಅವರ ಸತ್ಯಶೋಧಕ ಸಮಾಜ, ರಾಜಾರಾಮ್ ಮೋಹನ್‌ರಾಯ್, ದೇವೇಂದ್ರನಾಥ್ ಠಾಗೂರ್ ಹಾಗೂ ಕೇಶವಚಂದ್ರಸೇನ್ ಅವರ ಬ್ರಹ್ಮಸಮಾಜ, ದಯಾನಂದ ಸರಸ್ವತಿ ಅವರ ಆರ್ಯಸಮಾಜ, ವಿವೇಕಾನಂದರ ಶ್ರೀ ರಾಮಕೃಷ್ಣ ಮಿಷನ್ ಮೊದಲಾದವು ಜಾತಿಯಲ್ಲಿರುವ ಮೂಢನಂಬಿಕೆಗಳನ್ನು ವಿರೋಧಿಸಿ ಅದರಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದರು.

ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದರ ಮೂಲಕ ಅಸ್ಪೃಶ್ಯತೆಯ ಆಚರಣೆ ಪಾಪವೆಂದು ಸಾರಿದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಹಾಡ್ ಕೆರೆಯ ನೀರು ಮುಟ್ಟುವುದು ಮತ್ತು ದೇವಾಲಯ ಪ್ರವೇಶದಂತಹ ಚಳುವಳಿಗಳನ್ನು ಹಮ್ಮಿಕೊಂಡು ಅಸ್ಪೃಶ್ಯರ ಹಕ್ಕುಗಳನ್ನು ಎತ್ತಿಹಿಡಿದರು. ಸಂವಿಧಾನದ ಪ್ರಸ್ತಾವನೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಬೇಕೆಂದು ಪ್ರತಿಪಾದಿಸಿದರು. ಅವರ ಪ್ರಯತ್ನದ ಫಲವಾಗಿ ಮೀಸಲಾತಿ ಪದ್ಧತಿಯು ಜಾರಿಯಾಯಿತು. ಇದರಿಂದ ಅಸ್ಪೃಶ್ಯರು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳಲು ಅವಕಾಶ ಉಂಟಾಯಿತು.

ಕರ್ನಾಟಕದಲ್ಲಿ ಬ್ರಾಹ್ಮಣೇತರ ಚಳುವಳಿಯು ಆರಂಭವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮಿಲ್ಲರ್ ಅವರ ವರದಿಯನ್ನು ಆಧರಿಸಿ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡಿದರು. ಇದರಿಂದಾಗಿ ಬ್ರಾಹ್ಮಣೇತರರು ಕೂಡ ಸರ್ಕಾರಿ ಆಡಳಿತದಲ್ಲಿ ಪಾಲನ್ನು ಪಡೆದರು. ಈ ಎಲ್ಲ ಕಾರಣಗಳಿಂದ ಜಾತಿಪದ್ಧತಿಯಲ್ಲಿ ಸ್ವಲ್ಪಪ್ರಮಾಣದ ಬದಲಾವಣೆಗಳು ಕಂಡುಬಂದವು. ಸಾರ್ವಜನಿಕವಾಗಿ ಜಾತಿಯ ಚರ್ಚೆ ಮಾಡುವುದು ಸರಿಯಲ್ಲ ಎಂಬ ಅಭಿಪ್ರಾಯವು ನಿರ್ಮಾಣಗೊಂಡಿತು.

### 3.4 ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿ ಜಾತಿ

ಸಾಮಾಜಿಕ ಬದಲಾವಣೆಗೆ ಜಾತಿಯು ನಿರಂತರವಾಗಿ ಅಡ್ಡಿಯಾಗುತ್ತದೆ ಹೇಗೆಂದರೆ ಜಾತಿಯು ಭಾರತದ ಜೀವನ ದರ್ಶನ, ಧಾರ್ಮಿಕತೆ, ಕ್ರಿಯಾವಿಧಿಗಳು, ಸಂಸ್ಕಾರಗಳು, ಏಣಿಶ್ರೇಣಿ ವ್ಯವಸ್ಥೆ, ಸಾಮಾಜಿಕ ಸಂಬಂಧಗಳ ನಿರ್ಬಂಧದಲ್ಲಿ ಯಾವ ವ್ಯಕ್ತಿಯು ಯಾರ ಜೊತೆ ವೈವಾಹಿಕ ಮತ್ತು ಸಾಮಾಜಿಕ ಸಂಪರ್ಕವನ್ನು ಇರಿಸಿಕೊಳ್ಳಬೇಕೆಂಬುದನ್ನು ನಿರ್ಧರಿಸುವ, ಕೆಳಜಾತಿಯವರ ಜೊತೆ ಯಾವುದೇ ಸಂಪರ್ಕ ಮತ್ತು ವೈವಾಹಿಕ ಸಂಬಂಧವನ್ನು ಇರಿಸಿಕೊಳ್ಳಬಾರದೆಂಬ ನಂಬಿಕೆ ಇದೆ. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಜಾತಿಗಳನ್ನು ಅನರ್ಹವೆಂದು ಪರಿಗಣಿಸಲಾಗಿದೆ. ಆಹಾರ ಪದ್ಧತಿಗಳಲ್ಲಿರುವ ಪಕ್ಕಾ ಮತ್ತು ಕಚ್ಚಾ ಆಹಾರಗಳಲ್ಲಿನ ವ್ಯತ್ಯಾಸಗಳು, ವಿವಾಹದ ಮೇಲಿನ ನಿರ್ಬಂಧವು ಜಾತಿ ವ್ಯವಸ್ಥೆಯ ಬುನಾದಿಯಾಗಿದೆ. ಆಯಾ ಜಾತಿಗೆ ಸೇರಿದ ವ್ಯಕ್ತಿಯು ಆಯಾ ಜಾತಿಯಲ್ಲೇ ವಿವಾಹವಾಗಬೇಕು. ಬೇರೆ ಜಾತಿಯಲ್ಲಿ ವಿವಾಹವಾದರೆ ಆತನನ್ನು ಅಥವಾ ಆಕೆಯನ್ನು ಜಾತಿಯಿಂದ ಹೊರಹಾಕಲಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ ವಿವಿಧ ಪಕ್ಷಗಳು ಚುನಾವಣೆಗೆ ನಿಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡುವಾಗ ಆತನ ಜಾತಿಯನ್ನು ಪರಿಗಣಿಸುತ್ತಿವೆ. ಹಾಗೆಯೇ ಮತದಾರರು ಕೂಡ ತಮ್ಮ ಜಾತಿಯ ಅಭ್ಯರ್ಥಿಗೆ ಮತ ನೀಡುವುದನ್ನು ಕಾಣಬಹುದು.

ಪ್ರತಿಯೊಂದು ಜಾತಿಯು ತನ್ನ ಹೆಸರಿನಲ್ಲಿ ಮಠ–ಮಾನ್ಯಗಳನ್ನು ಸ್ಥಾಪಿಸಿಕೊಳ್ಳಲು ಬಯಸುತ್ತಿದೆ. ಮನೆಯನ್ನು ಬಾಡಿಗೆಗೆ ನೀಡುವಾಗ ಸಸ್ಯಾಹಾರಿಗಳೋ, ಮಾಂಸಾಹಾರಿಗಳೋ ಎಂದು ಕೇಳುವುದು ಹೀಗೆ ಜಾತಿಯು ವ್ಯಕ್ತಿಯ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವುದರಿಂದ ಸಮಾಜದ ಸಾಮಾಜಿಕ ಬದಲಾವಣೆಗೆ ಜಾತಿಯು ನಿರಂತರವಾಗಿ ಅಡ್ಡಿಯಾಗುತ್ತಿದೆ ಎಂದು ಹೇಳಬಹುದು. ಜಾತಿ ಪದ್ಧತಿ ಇರುವವರಿಗೆ ಪ್ರಜಾಪ್ರಭುತ್ವ ಸಾಮಾಜಿಕ ನ್ಯಾಯ, ಸಮಾನತೆ, ಸೋದರತ್ವವನ್ನು ಸಾಧಿಸಲು ಸಾಧ್ಯವಿಲ್ಲ.

## 3.5 ಆಧುನಿಕ ಕಾಲದಲ್ಲಿ ಜಾತಿವ್ಯವಸ್ಥೆ

### ಆಧುನಿಕ ಸ್ವತಂತ್ರ ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಾದ ಪರಿವರ್ತನೆಗಳು

ದೇಶಾದ್ಯಂತ ಹಲವು ಕ್ಷೇತ್ರಗಳಲ್ಲಿ ಪರಿವರ್ತನೆಗಳುಂಟಾದಂತೆ ಜಾತಿ ವ್ಯವಸ್ಥೆಯಲ್ಲಿಯೂ ಬದಲಾವಣೆಯಾಗಿದೆ. ಕೈಗಾರಿಕೀಕರಣ, ನಗರೀಕರಣ ಪಾಶ್ಚಾತ್ಯೀಕರಣ, ಸಂಸ್ಕೃತಾನುಕರಣ, ರಾಜ್ಯಗಳ ಪುನರ್ವಿಂಗಡನೆ, ಶಿಕ್ಷಣ, ಹೊಸ ಸಂವಿಧಾನ ಹಾಗೂ ಆಧುನಿಕ ನ್ಯಾಯಾಲಯ ಪದ್ಧತಿ, ಸಾಮಾಜಿಕ–ಧಾರ್ಮಿಕ ಚಳುವಳಿಗಳು, ವಲಸೆ ಮಾರುಕಟ್ಟೆ ಅರ್ಥವ್ಯವಸ್ಥೆಯ ಬೆಳವಣಿಗೆ ಈ ಅಂಶಗಳು ಜಾತಿ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿವೆ. ಇಂತಹ ಮಹತ್ತರವಾದ ಅಂಶಗಳು ಜಾತಿ ಪದ್ಧತಿಯ ಮೇಲೆ ಗಾಢವಾದ ಪ್ರಭಾವ ಬೀರಿದವು.

ಜಾತಿಗಳನ್ನು ನಿಯಂತ್ರಿಸುತ್ತಿದ್ದ ಜಾತಿ ಪಂಚಾಯಿತಿಗಳು ಇಂದು ಮರೆಯಾಗಿವೆ ಇಲ್ಲವೇ ನಿಷ್ಕ್ರಿಯವಾಗಿವೆ. ನಗರ ಪ್ರದೇಶಗಳಲ್ಲಂತೂ ಅವು ಕಾಣಬರುತ್ತಿಲ್ಲ. ಹಿಂದುಳಿದ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಜಾತಿಗಳ ವಲಯಗಳಲ್ಲಿ ಅವು ಪ್ರಭಾವಶಾಲಿಯಾಗಿವೆ. ಅಂತರ್ಜಾತಿ ವಿವಾಹವಾದ ವಧು–ವರರನ್ನು ಕುಟುಂಬ ಗೌರವದ ಹೆಸರಿನಲ್ಲಿ ಮರ್ಯಾದ ಹತ್ಯೆ ಮಾಡಿರುವ ಉದಾಹರಣೆಗಳು ಇವೆ. ಆಧುನಿಕ ಕಾನೂನು, ಪೋಲಿಸು ಹಾಗೂ ನ್ಯಾಯಾಲಯ ವ್ಯವಸ್ಥೆಗಳು ಹಾಗೂ ಜಾತಿ ಪಂಚಾಯಿತಿಯ ಕಾರ್ಯಾಚರಣೆಯನ್ನು ತಡೆಗಟ್ಟುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿವೆ.

ಹೋಟೆಲ್ ಉದ್ಯಮದ ಮೇಲೆ ಬ್ರಾಹ್ಮಣರಿಗಿದ್ದ ಪ್ರಭುತ್ವ ಕಡಿಮೆಯಾಗಿದ್ದು ಇತರೆ ಕೆಳಜಾತಿಗಳವರೂ ಈ ಉದ್ಯಮಕ್ಕೆ ಇಳಿದಿದ್ದಾರೆ. ಆಹಾರವನ್ನು ಯಾವ ಜಾತಿಯವರು ಹೇಗೆ ತಯಾರಿಸುತ್ತಾರೆ? ಯಾವ ಜಾತಿಯವರು ಬಡಿಸುತ್ತಾರೆ? ಎಂಬುದಕ್ಕಿಂತ ಶುಚಿತ್ವ, ಸೇವೆ, ರುಚಿ ಇವುಗಳಿಗೆ ಇಂದು ಹೆಚ್ಚಿನ ಮಹತ್ವ ಲಭಿಸುತ್ತಿದೆ. ಆದರೂ ಕೂಡ ಬಾಡಿಗೆ ಮನೆಯನ್ನು ನೀಡುವಾಗ ಉನ್ನತ ಜಾತಿಗಳು ಸಸ್ಯಹಾರಿಗಳಿಗೆ ಮಾತ್ರ ಬಾಡಿಗೆ ಮನೆನೀಡುವ ನೆಪದಲ್ಲಿ ಕೆಳಜಾತಿಗಳಿಗೆ ಬಾಡಿಗೆ ಮನೆ ನೀಡುವುದಿಲ್ಲ.

ಕಾನೂನಿನ ಎದುರು ಎಲ್ಲರೂ ಹಾಗೂ ಎಲ್ಲಾ ಜಾತಿಗಳವರು ಸಮಾನ ಎಂಬ ನಂಬಿಕೆ ಬೆಳೆಯುತ್ತಿದೆ. ಯುವಜನರು ಜಾತಿಯನ್ನು ಮೀರಿ ಉದ್ಯೋಗ ಮತ್ತು ಜೀವನ ಸಂಗಾತಿಯನ್ನು ಆಯ್ಕೆ ಮಾಡುತ್ತಾರೆ. ಊಟೋಪಚಾರಗಳ ಮೇಲಿನ ನಿರ್ಬಂಧಗಳು ದುರ್ಬಲಗೊಂಡಿವೆ. ಜಾತಿಯೊಂದಿಗೆ ಸೇರಿಹೋಗಿದ್ದ ನಂಬುಗೆಗಳು, ಆಚರಣೆಗಳು, ಸಂಸ್ಕಾರಗಳು, ಹವ್ಯಾಸಗಳು, ಉಡುಪಿನ ಶೈಲಿ, ಭಾಷೆಯನ್ನಾಡುವ ಕ್ರಮ, ಇತ್ಯಾದಿ ಸಂಸ್ಕೃತಾನುಕರಣ ಪ್ರಕ್ರಿಯೆಯಿಂದ ಬದಲಾಗಿವೆ.

ಅಸ್ಪೃಶ್ಯತೆ ಎಂದರೆ ಹಿಂದೂ ಧರ್ಮದ ಅತ್ಯಂತ ಕೆಳಹಂತದಲ್ಲಿರುವ ಜಾತಿಯ ಜನರನ್ನು ಇತರ ಜನರು ಸ್ಪರ್ಶಿಸದೇ ಇರುವುದು. ಸಾರ್ವಜನಿಕ ನೀರು, ದೇವಾಲಯ, ಆಟದ ಮೈದಾನ, ರಸ್ತೆ ಮೊದಲಾದವುಗಳನ್ನು ಬಳಸದಂತೆ ತಡೆಯುವುದು. ಹೆಣ್ಣು ಮಕ್ಕಳು ಅಲಂಕಾರದ ವಸ್ತುಗಳನ್ನು ತೊಡದಂತೆ ನಿರ್ಬಂಧಿಸುವುದು. ಈ ಆಚರಣೆಯಿಂದ ಅಸ್ಪೃಶ್ಯರೆನಿಸಿಕೊಂಡವರಿಗೆ ತುಂಬಾ ತೊಂದರೆಯಾಗುತ್ತಿತ್ತು. ಆದುದರಿಂದ ಅಸ್ಪೃಶ್ಯತೆಯ ಆಚರಣೆಯನ್ನು ಸಾಂವಿಧಾನಿಕ ನಿಯಮಗಳ 17ನೇ ವಿಧಿ ಮೂಲಕ ತೊಡೆದು ಹಾಕಲಾಗಿದೆ. ಉದಾ : " ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ(1955)ಯು 1976ರಲ್ಲಿ " ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ" ಎಂಬುದಾಗಿ ಮಾರ್ಪಾಡುಗೊಂಡಿರುವುದಲ್ಲದೆ ಅಸ್ಪೃಶ್ಯತಾ ಆಚರಣೆಯನ್ನು ಕಾನೂನಿನ ಮೂಲಕ ತೊಡೆದು ಹಾಕಿದೆ ಹಾಗೂ ಅದರ ಆಚರಣೆಯನ್ನು ಈಗ ಅದೊಂದು ಶಿಕ್ಷಾರ್ಹ ಅಪರಾಧವಾಗಿದೆ. ನಗರ ಪ್ರದೇಶದಲ್ಲಿ "ಸ್ಪೃಶ್ಯ" ಮತ್ತು "ಅಸ್ಪೃಶ್ಯ" ಎಂಬ ವ್ಯತ್ಯಾಸ ಈಗ ಮೊದಲಿನಷ್ಟು ಕಂಡುಬರುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಮೀಸಲಾತಿ ನೀತಿಯಿಂದಾಗಿ ಸಣ್ಣ ಪ್ರಮಾಣದಲ್ಲಿ ಅಸ್ಪೃಶ್ಯಜಾತಿಗಳು ಸಮಾನ ಅವಕಾಶಗಳನ್ನು ಪಡೆಯಲು ಸಾಧ್ಯವಾಗಿದೆ.

ನಗರಗಳ ಬೆಳವಣಿಗೆ ಹಾಗೂ ಕೈಗಾರಿಕೆಗಳ ಹೆಚ್ಚಳ ಇವು ಜಾತಿ ಸದಸ್ಯರಿಗೆ ಹೊಸ ಉದ್ಯೋಗಾವಕಾಶಗಳನ್ನು ಕಲ್ಪಿಸಿವೆ. ಉತ್ಕೃಷ್ಟ ಮಾದರಿಯ ಆಧುನಿಕ ಉದ್ಯೋಗಗಳನ್ನು ದೊರಕಿಸಿಕೊಳ್ಳಲು ಶಿಕ್ಷಣ, ಸಾಮರ್ಥ್ಯ, ತರಬೇತಿ ವಿಶೇಷ ಅನುಭವ ಇಂತಹ ಅರ್ಹತಾ ಗುಣಗಳ ಅವಶ್ಯಕತೆ ಇದೆಯೇ ವಿನಃ ವ್ಯಕ್ತಿಯ ಜಾತಿ ಸದಸ್ಯತ್ವವಲ್ಲ. 1990ರ ದಶಕದಲ್ಲಿ ಜಾರಿಗೆ ಬಂದಂತಹ ಹೊಸ ಆರ್ಥಿಕ ನೀತಿಯ ಫಲವಾಗಿ ಚಲಾವಣೆಯಲ್ಲಿರುವ ಆರ್ಥಿಕ "ಉದಾರೀಕರಣ" "ಖಾಸಗೀಕರಣ", ಹಾಗೂ "ಜಾಗತೀಕರಣ"ದ ಪ್ರಕ್ರಿಯೆಗಳಿಂದಾಗಿ ಜಾತಿಯ ಕಟ್ಟುಪಾಡುಗಳಿಗೆ ತೀರಾ ವಿರುದ್ಧವಾದ ಹೊಸ ಆರ್ಥಿಕ ಜಗತ್ತೊಂದು ನಿರ್ಮಾಣಗೊಂಡಂತಾಗಿದೆ.

1954ರ 'ವಿಶೇಷ ವಿವಾಹ ಕಾಯ್ದೆ'ಯು ಅಂತರ್ಜಾತೀಯ, ಅಂತರ್ಮತೀಯ ಹಾಗೂ ನೋಂದಾಯಿತ ವಿವಾಹಗಳಿಗೆ ಅವಕಾಶ ನೀಡುವುದು.

ಸ್ವಾತಂತ್ರ್ಯಾನಂತರ ಸಂವಿಧಾನವು ಜಾತಿಪದ್ಧತಿಯನ್ನು ಖಂಡಿಸಿತು. ಜೊತೆಗೆ ಎಲ್ಲಾ ಜಾತಿಯವರಿಗೂ ಅವರ ಹುಟ್ಟನ್ನು ಪರಿಗಣಿಸದೆ ಸಮಾನ ಅವಕಾಶವನ್ನು ನೀಡಬೇಕೆಂಬುದು ಮೂಲಭೂತ ಹಕ್ಕುಗಳನ್ನು ನೀಡಲಾಯಿತು. ಇದರಿಂದ ಜಾತಿಪದ್ಧತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬಂದವು. ಇದರ ಜೊತೆಗೆ ಇತ್ತೀಚೆಗೆ ಜಾತಿಪದ್ಧತಿಯಲ್ಲಿ ನಗರೀಕರಣ, ಕೈಗಾರಿಕೀಕರಣ, ಶಿಕ್ಷಣ, ಹೊಸ ಉದ್ಯೋಗಾವಕಾಶಗಳಿಂದಾಗಿ ಅನೇಕ ಪರಿವರ್ತನೆಗಳು ಉಂಟಾಗಿವೆ. ನಗರೀಕರಣದಿಂದಾಗಿ ಊಟೋಪಚಾರಗಳ ಮೇಲಿನ ನಿರ್ಬಂಧವು ಸಡಿಲಗೊಂಡಿದೆ. ಶಿಕ್ಷಣ ಮತ್ತು ತರಬೇತಿಯಿಂದಾಗಿ ಯಾವುದೇ ವ್ಯಕ್ತಿಯು ಕೂಡ ತಾನು ಬಯಸಿದ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತದೆ.

ನಗರೀಕರಣದಿಂದಾಗಿ ಅನಿವಾರ್ಯವಾಗಿ ಅಂತರ್ಜಾತೀಯ ವಿವಾಹಗಳು ಏರ್ಪಡುತ್ತಿವೆ. ನಗರಪ್ರದೇಶಗಳಲ್ಲಿ ಜಾತಿಯ ಪ್ರಭಾವವು ಕುಗ್ಗಿದಂತೆ ತೋರುತ್ತದೆ. ಆದರೂ ಕೂಡ ಜಾತಿಪದ್ಧತಿಯು ಸಂಪೂರ್ಣ ಬದಲಾವಣೆ ಆಗಿದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ, ಅದು ಬೇರೆ ಬೇರೆಯ ಅವತಾರ ಅಥವಾ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ಸಮಾಜಶಾಸ್ತ್ರಜ್ಞರಾದ ಎಂ.ಎನ್. ಶ್ರೀನಿವಾಸ್‌ರವರು ಅಭಿಪ್ರಾಯಪಡುತ್ತಾರೆ.

ಚುನಾವಣೆಯ ಸಂದರ್ಭದಲ್ಲಿ ವಿವಿಧ ಪಕ್ಷಗಳು ಚುನಾವಣೆಗೆ ನಿಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡುವಾಗ ಆತನ ಜಾತಿಯನ್ನು ಪರಿಗಣಿಸುತ್ತವೆ. ಹಾಗೆಯೇ ಮತದಾರರು ಕೂಡ ತಮ್ಮ ಜಾತಿಯ ಅಭ್ಯರ್ಥಿಗೆ ಮತ ನೀಡುವುದನ್ನು ಕಾಣಬಹುದು. ಇಂದಿಗೂ ಕೂಡ ಭೂಮಿಯು ಹೆಚ್ಚಾಗಿ ಮೇಲ್ಜಾತಿಯ ಒಡೆತನದಲ್ಲೇ ಇದೆ. ಪ್ರತಿಯೊಂದು ಜಾತಿಯು ತನ್ನ ಹೆಸರಿನಲ್ಲಿ ಮಠ–ಮಾನ್ಯಗಳನ್ನು ಸ್ಥಾಪಿಸಿಕೊಳ್ಳಲು ಬಯಸುತ್ತವೆ. ಮನೆಯನ್ನು ಬಾಡಿಗೆಗೆ ನೀಡುವಾಗ ಸಸ್ಯಾಹಾರಿಗಳೋ, ಮಾಂಸಾಹಾರಿಗಳೋ ಎಂದು ಕೇಳುವುದು ಸಾಮಾನ್ಯವಾಗಿಬಿಟ್ಟಿದೆ.

ಹೀಗೆ ಏಕಕಾಲದಲ್ಲಿ ಜಾತಿಯು ಕೆಲವು ಅಂಶಗಳಲ್ಲಿ ಬದಲಾವಣೆಯನ್ನು ಹೊಂದಿದ್ದರೂ ಸಹ ಮತ್ತೆ ಕೆಲವು ವಿಚಾರಗಳಲ್ಲಿ ಹಾಗೆಯೇ ಉಳಿದಿದೆ.

**ಪದದ ಅರ್ಥ**

**ಜಾತಿ :** ಜಾತಿಯು ಒಂದು ನಿರ್ಬಂಧಿತ ಅಥವಾ ಮುಚ್ಚಿದ ಸಮೂಹವಾಗಿದೆ. ಮುಚ್ಚಿದ ಅಥವಾ ನಿರ್ಬಂಧಿತ ಸಮೂಹವೆಂದರೆ, ಯಾವುದೇ ಕಾರಣಕ್ಕೂ ಒಂದು ಜಾತಿಗೆ ಸೇರಿದ ವ್ಯಕ್ತಿಯು ಮತ್ತೊಂದು ಜಾತಿಗೆ ಸೇರಿಕೊಳ್ಳಲು ಸಾಧ್ಯವಿಲ್ಲ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಬೌದ್ಧ ಧರ್ಮದ ಸ್ಥಾಪಕ ________

   ಅ) ಮಹಾವೀರ ಆ) ಗೌತಮ ಬುದ್ಧ

   ಇ) ಅಶೋಕ ಈ) ತೀರ್ಥಂಕರ

2. ಹಿಂದೂ ಪುನರ್ ವಿವಾಹ ಕಾಯ್ದೆ ಜಾರಿಗೆ ಬಂದ ವರ್ಷ ________

   ಅ) 1856 ಆ) 1865

   ಇ) 1956 ಈ) 1986

3. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು ________

   ಅ) ಜಿ.ಎಸ್.ಗುರ್ರೆ ಆ) ಗಾಂಧೀಜಿ

   ಇ) ನೆಹರು ಈ) ದಯಾನಂದ ಸರಸ್ವತಿ

4. ಕ್ಯಾಸ್ಟ್ ಎನ್ನುವ ಪದ ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಯ ________ ಪದದಿಂದ ಬಂದಿದೆ.

   ಅ) ಪ್ರಾಂತ್ಯ ಆ) ಕ್ಯಾಸ್ಟಾ

   ಇ) ಕಮ್ಯೂನಿಟಿ ಈ) ಜಾತಿ

**II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಭಾರತೀಯ ಸಮಾಜದ ಅವಿಭಾಜ್ಯ ಅಂಗ ______________

2) ಜಾತಿ ಎಂಬ ಪದವನ್ನು ಇಂಗ್ಲೀಷ್‌ನಲ್ಲಿ ______________ ಎಂದು ಕರೆಯುತ್ತಾರೆ.

3) ಜೈನ ಧರ್ಮದ ಸ್ಥಾಪಕ ______________

4) ಅಸ್ಪೃಶ್ಯತೆಯ ಆಚರಣೆ ಪಾಪವೆಂದು ಸಾರಿದವರು ______________

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಜಾತಿ ಎಂಬ ಪದದ ಉಗಮನ್ನು ತಿಳಿಸಿ.

2) ಪಕ್ಕಾ ಮತ್ತು ಕಚ್ಚಾ ಆಹಾರಕ್ಕಿರುವ ವ್ಯತ್ಯಾಸವೇನು?

3) ಜಾತಿ ಪದ್ಧತಿಯ ಗುಣಲಕ್ಷಣಗಳನ್ನು ತಿಳಿಸಿ.

4) 1856ರ ಹಿಂದೂ ಪುನರ್‌ವಿವಾಹ ಕಾಯ್ದೆಯ ಪ್ರಮುಖ ಅಂಶಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1) ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿ ಜಾತಿ ಎಂಬುದನ್ನು ವಿಷಾದಪಡಿಸಿ.

2) ಆಧುನಿಕ ಕಾಲದಲ್ಲಿ ಜಾತಿವ್ಯವಸ್ಥೆ ಬಗ್ಗೆ ಟಿಪ್ಪಣಿ ಬರೆಯಿರಿ.

**ಸಲಹಾತ್ಮಕ ಚಟುವಟಿಕೆಗಳು**

✦ ವಿವಿಧ ಜಾತಿಗಳ ಸ್ನೇಹಿತರ ಮನೆಗಳಿಗೆ ಭೇಟಿ ನೀಡಿ ಒಟ್ಟಿಗೆ ಊಟಮಾಡುವುದು.

✦ ಯಾವುದೇ ಜಾತಿಯ ಸಂಘಟನೆಗಳಿಗೆ ಸೇರದೇ ಇರುವುದು.

✦ ಅಸ್ಪೃಶ್ಯತೆಯನ್ನು ಆಚರಿಸದಂತೆ ಸಂವಿಧಾನ ಬದ್ಧವಾಗಿ ಪ್ರಚಾರ ಮಾಡುವುದು.

✦ ಭಾರತೀಯರಾದ ನಾವೆಲ್ಲರೂ ಜಾತಿಭಾವನೆಯನ್ನು ಮರೆತು ಒಗ್ಗಟ್ಟಾಗಿ ಅಭಿವೃದ್ಧಿಹೊಂದುವುದನ್ನು ಕುರಿತು ನಾಟಕ, ಹಾಡು, ಮೊದಲಾದವುಗಳನ್ನು ರಚಿಸುವುದು.

# ಅಧ್ಯಾಯ-4

# ಸಾಮಾಜಿಕ ಬದಲಾವಣೆಯಲ್ಲಿ ಚಳುವಳಿಗಳ ಪಾತ್ರ

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಸಾಮಾಜಿಕ ಚಳುವಳಿಗಳ ಅರ್ಥ ಮತ್ತು ಉದ್ದೇಶಗಳು
- ಭಾರತದಲ್ಲಿ ಪ್ರಮುಖ ಸಾಮಾಜಿಕ ಚಳುವಳಿಗಳು
- ಪ್ರತಿಭಟನಾತ್ಮಕ ಚಳುವಳಿಗಳು
- ಸುಧಾರಣಾ ಚಳುವಳಿಗಳು
- ಕ್ರಾಂತಿಕಾರಕ ಚಳುವಳಿಗಳು

**ಪೀಠಿಕೆ**

ಸಾಮಾಜಿಕ ಚಳುವಳಿಗಳು ಸಾಮಾಜಿಕ ಬದಲಾವಣೆಗಳನ್ನು ತರುತ್ತವೆ. ಕ್ರಿ.ಶ 18ನೇ ಶತಮಾನದ ನಂತರ ನಡೆದ ಸಾಮಾಜಿಕ ಚಳುವಳಿಗಳು ಮಾನವರ ಸಾಮಾಜಿಕ ವ್ಯವಸ್ಥೆ ಹಾಗೂ ಜೀವನ ರೀತಿ ನೀತಿಗಳಲ್ಲಿ ಅಪಾರ ಬದಲಾವಣೆಗಳನ್ನುಂಟುಮಾಡಿವೆ. ಸಾಮಾಜಿಕ ವ್ಯವಸ್ಥೆ ಒಂದರ ಸಾಂಸ್ಕೃತಿಕ ಅಥವಾ ಸಾಮಾಜಿಕ ಬದಲಾವಣೆಯೇ ಸಾಮಾಜಿಕ ಚಳುವಳಿಗಳ ಮುಖ್ಯ ಗುರಿಯಾಗಿರುತ್ತದೆ. ಮಾನವ ಇತಿಹಾಸದ ಎರಡು ಮಹತ್ವದ ಘಟನೆಗಳೆಂದು ಅಮೇರಿಕ ಹಾಗೂ ಫ್ರಾನ್ಸ್‌ನ ಮಹಾಕ್ರಾಂತಿಗಳನ್ನು ಪರಿಗಣಿಸಲಾಗಿದೆ. ಇದೇ 18ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಮೆಥಡಿಸಂ ಎಂಬ ಧಾರ್ಮಿಕ ಚಳುವಳಿ ಹಾಗೂ ಇಟಲಿ, ಸ್ಪೇನ್‌ಗಳಲ್ಲಿ ನಡೆದ ರೈತದಂಗೆಗಳೂ ಸಾಮಾಜಿಕ ಚಳುವಳಿಯ ಪ್ರಮುಖ ಘಟನೆಗಳಾಗಿವೆ. ಫ್ರೆಂಚ್ ಮಹಾಕ್ರಾಂತಿಯನ್ನು ಅನುಸರಿಸಿ, ಯೂರೋಪ್ ಖಂಡದ ಅನೇಕ ರಾಷ್ಟ್ರಗಳಲ್ಲಿ ನಡೆದ ಅನೇಕ ರಾಜಕೀಯ ಚಳುವಳಿಗಳು ಆ ದೇಶಗಳಲ್ಲಿ ರಾಷ್ಟ್ರೀಯತೆಯು ನೆಲೆಗೊಳ್ಳಲು ಸಹಕಾರಿಯಾದವು. 19ನೇ ಶತಮಾನದಲ್ಲಿ ಕಾರ್ಮಿಕ ಚಳುವಳಿಯು ಆರಂಭಗೊಂಡಿತು. ಸಾಮಾಜಿಕ ವ್ಯವಸ್ಥೆಯಲ್ಲಿ ಚಳುವಳಿಗಳ ಪ್ರಾಮುಖ್ಯತೆ ಮತ್ತು ಪಾತ್ರಗಳನ್ನು 20ನೇ ಶತಮಾನದ ಅನೇಕ ಘಟನೆಗಳು ಸೂಚಿಸಿದೆನ್ನಬಹುದು. ಹೀಗಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿಯೂ ವಿವಿಧ ರೀತಿಯ ಚಳುವಳಿಗಳು ಪ್ರಾರಂಭಗೊಂಡರೆ, ಇಂಗ್ಲೆಂಡಿನಲ್ಲಿ ಕಾರ್ಮಿಕ ಚಳುವಳಿ ಹರಳುಗಟ್ಟಿಕೊಂಡಿತ್ತು. ಸಾಮಾಜಿಕ ಚಳುವಳಿಗಳು ಭಾರತೀಯ ಸಮಾಜದಲ್ಲಿ ಸಾಮಾಜಿಕ ಬದಲಾವಣೆಗಳನ್ನು ತಂದು, ಸಾಮಾಜಿಕ ಸಂಚಲನೆಗೆ ಕಾರಣವಾಗಿವೆ.

ಸಾಮಾಜಿಕ ಚಳುವಳಿಗಳು ಸಂಸ್ಥೆಗಳಲ್ಲ. ಸಂಸ್ಕೃತಿಯೊಂದರ ಶಾಶ್ವತವಾದ, ದೃಢವಾದ ಅಂಶಗಳನ್ನು ಸಂಸ್ಥೆಗಳು ಹೊಂದಿರುತ್ತವೆ. ಸಾಮಾಜಿಕ ಚಳುವಳಿಗಳು ಚಲನಾತ್ಮಕವಾದವುಗಳೂ, ಅನಿಶ್ಚಿತ ಜೀವಿತಾವಧಿಯನ್ನು ಹೊಂದಿರುವಂತಹ ಚಟುವಟಿಕೆಗಳಾಗಿವೆ. ಆದರೆ, ಸಂಸ್ಥೆಗಳು ಸಂಸ್ಕೃತಿಯೊಂದರ ಅಮೂಲ್ಯವಾದ, ಅವಶ್ಯಕವಾದ ಅಂಶಗಳೆಂದೇ ಪರಿಗಣಿಸಲಾಗುತ್ತದೆ. ಇಂತಹ ಸಾಂಸ್ಥಿಕ ಅಸ್ತಿತ್ವವನ್ನು ಚಳುವಳಿಯೊಂದು ಹೊಂದಿರುವುದಿಲ್ಲ. ಬಹಳಷ್ಟು ಜನರು ಚಳುವಳಿಯೊಂದನ್ನು ನಿರ್ಲಕ್ಷದಿಂದಲೋ, ಆಗ್ರಹದಿಂದಲೂ ವೀಕ್ಷಿಸುತ್ತಾರೆ.

ಆದರೆ ಚಳುವಳಿಯೊಂದು ಸಾರ್ವತ್ರಿಕ ಬೆಂಬಲ ಪಡೆದಾಗ ಅದರ ಸಂಪೂರ್ಣವಾಗಿ ಚಳುವಳಿಯು ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಚಳುವಳಿಯೊಂದು, ಮಾದರಿ ಘಟನೆಯಾಗಿ, ಸಾಮಾಜಿಕ ವಾಸ್ತವಿಕತೆಯ ಬಗ್ಗೆ ನೂತನ ಮತ್ತು ದಿಕ್ಕುತಪ್ಪಿದ ನಡವಳಿಕೆಗಳನ್ನು ಸರಿಪಡಿಸಬಹುದು. ಸಮಾಜದ ಸದಸ್ಯರೊಬ್ಬರ ನಡವಳಿಕೆಗಳು, ತಾರ್ಕಿಕ ಆಲೋಚನೆಗಳು, ನಂಬಿಕೆ, ಮೌಲ್ಯಗಳು ಬದಲಾಗಿ ಇಡೀ ಸಮಾಜವೇ ಬದಲಾವಣೆಗೆ ಒಳಪಡಬಹುದು.

**ಸಾಮಾಜಿಕ ಚಳುವಳಿಗಳ ಅರ್ಥ :**

ಸಾಮಾಜಿಕ ಚಳುವಳಿಗಳ ಬಗ್ಗೆ **ಹರ್ಬರ್ಟ್ ಬ್ಲೂಮರ್**ರವರು ಈ ರೀತಿ ಹೇಳಿದ್ದಾರೆ. "ಸಾಮಾಜಿಕ ಚಳುವಳಿಗಳು ಹೊಸ ಜೀವನ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಸಾಮೂಹಿಕ ಸಂಘಟನೆಗಳು ಅಥವಾ ಸಂಸ್ಥೆಗಳು ಆಗಿರುತ್ತವೆ".

ಸಾಮಾಜಿಕ ಚಳುವಳಿಗಳನ್ನು **ವಿಕ್ಟರ್ ಬಾಲ್ಡ್‌ರಿಜ್** ಎಂಬ ಲೇಖಕರು ಹೀಗೆ ಬಣ್ಣಿಸಿದ್ದಾನೆ. "ಒಂದು ನಿರ್ದಿಷ್ಟವಾದ ಸಮೂಹದ ಜನರು ನಿರ್ದಿಷ್ಟವಾದ ಆದರ್ಶ ಮತ್ತು ಗುರಿಗಳನ್ನು ಒಪ್ಪಿಕೊಳ್ಳಲು ಅಥವಾ ಜಾರಿಗೆ ತರಲು ತಮ್ಮನ್ನು ತಾವೇ ಅರ್ಪಿಸಿಕೊಂಡು ನಿರ್ಮಾಣಮಾಡುವ ಪರಿಸರ ಅಥವಾ ವಾತಾವರಣವೇ ಸಾಮಾಜಿಕ ಚಳುವಳಿಯಾಗಿರುತ್ತದೆ."

**ಸಾಮಾಜಿಕ ಚಳುವಳಿಗಳ ಲಕ್ಷಣಗಳು**

- ಸಾಮಾಜಿಕ ಚಳುವಳಿಗಳು ಒಂದು ಸಮುಷ್ಠಿಯಿಂದ ರೂಪಗೊಳ್ಳುವ ಕ್ರಿಯೆಗಳಾಗಿರುತ್ತವೆ.
- ಸಮುದಾಯದ ದೀರ್ಘ ಪ್ರಕ್ರಿಯೆಯಾಗಿ ಅದು ಆಚರಿಸಲ್ಪಟ್ಟಾಗ ಮತ್ತು ಆಕಸ್ಮಿಕ ಘಟನೆಗಳಿಗಾಗಿ ಭಿನ್ನವಾದ ಪರಿಣಾಮ ಬೀರಿದಾಗ ಮಾತ್ರ ಗುರುತಿಸಲ್ಪಡುತ್ತದೆ.
- ಔಪಚಾರಿಕವಾಗಿಯೇ ಆಗಲೀ, ಅನೌಪಚಾರಿಕವಾಗಿಯೇ ಆಗಲಿ, ಸಾಮಾಜಿಕ ಚಳುವಳಿಗಳು ಸಮಗ್ರ ರೀತಿಯ ಚಲನೆಗಳನ್ನುಂಟು ಮಾಡುವ ಪ್ರಕ್ರಿಯೆಗಳಾಗಿರುತ್ತವೆ.
- ಸಾಮಾಜಿಕ ಚಳುವಳಿಗಳು ವ್ಯವಸ್ಥೆಯೊಂದರಲ್ಲಿ ಸಮಗ್ರ ಇಲ್ಲವೇ ಭಾಗಶಃ ಬದಲಾವಣೆ ಉಂಟುಮಾಡುವ ಶಕ್ತಿಯನ್ನು ಹೊಂದಿರುತ್ತದೆ.
- ಪ್ರತಿ ಚಳುವಳಿಗೂ ಒಂದು ನಿರ್ದಿಷ್ಟ ಆದರ್ಶ ಮತ್ತು ದೃಷ್ಟಿಕೋನವಿರುತ್ತದೆ.
- ದೃಢವಾದ ಮತ್ತು ಪ್ರಬಲವಾದ ಸಂಘಟಿತ ಭಾವನೆ ಮತ್ತು ತತ್ವಗಳಿರುತ್ತವೆ.
- ಕ್ರಿಯೆಯನ್ನುಂಟುಮಾಡಲು ಪ್ರಚೋದನೆ ಮತ್ತು ತರಬೇತಿಗಳಿರುತ್ತವೆ.

ಉದಾಹರಣೆಗೆ ಕರ್ನಾಟಕದ ರೈತಚಳುವಳಿ ಮತ್ತು ದಲಿತ ಚಳುವಳಿಗಳನ್ನು ಕುರಿತು ಅಧ್ಯಯನ ಮಾಡಬಹುದು.

**ಸಾಮಾಜಿಕ ಚಳುವಳಿಯ ಉದ್ದೇಶಗಳು**

ಸಾಮಾಜಿಕ ಚಳುವಳಿಗಳು ಕೆಳಕಂಡ ಉದ್ದೇಶವನ್ನು ಹೊಂದಿರುತ್ತವೆ.

1. **ಅಧಿಕಾರ ಬದಲಾವಣೆ :** ರಾಜಕೀಯ ಶಕ್ತಿ ಅಥವಾ ಅಧಿಕಾರ ಬಳಸಿ ಬದಲಾವಣೆ ತರುವುದು ಇಲ್ಲವೇ

ಅಧಿಕಾರದ ಸ್ವರೂಪದಲ್ಲಿಯೇ ಬದಲಾವಣೆ ಉಂಟುಮಾಡಿ ಸಾಮಾಜಿಕ ಬದಲಾವಣೆ ತರುವಂತಹ ಗುರಿಗಳನ್ನು ಚಳುವಳಿ ಹೊಂದಿರುತ್ತದೆ. ಉದಾಹರಣೆಗೆ ಫ್ರೆಂಚ್ ಮಹಾಕ್ರಾಂತಿ.

2. **ಮೌಲ್ಯ ಬದಲಾವಣೆ :** ಸಾಂಸ್ಕೃತಿಕ ಮೌಲ್ಯಗಳು, ಸಾಮಾಜಿಕ ನಿಯಮ, ನಂಬಿಕೆ ವ್ಯವಸ್ಥೆಗಳಲ್ಲಿ–ಪ್ರಚಾರ ಸಹಮತ ಮುಂತಾದ ವಿಧಾನಗಳ ಮೂಲಕ ಬದಲಾವಣೆ ಉಂಟುಮಾಡಲು ಚಳುವಳಿಯೊಂದು ಪ್ರಯತ್ನಿಸುತ್ತದೆ. ಉದಾಹರಣೆಗೆ ಕೇರಳದ ಶ್ರೀ ನಾರಾಯಣ ಗುರುರವರ ಧರ್ಮ ಪರಿಪಾಲನಾ ಚಳುವಳಿ.

3. **ವ್ಯಕ್ತಿಗತ ಭಾವನೆಗಳ ಹೇಳುವಿಕೆಗೆ ತರಬೇತಿ :** ಜನರ ವ್ಯಕ್ತಿಗತ ಭಾವನೆಗಳನ್ನು ಸಮರ್ಥವಾಗಿ ಹೇಳುವಿಕೆಗೆ ಚಳುವಳಿಗಳು ತರಬೇತಿ ನೀಡುತ್ತವೆ. ಚಳುವಳಿಯಲ್ಲಿ ನೇರವಾಗಿ ಭಾಗವಹಿಸುವವರನ್ನು ಬದಲಾವಣೆಗೆ ಸಜ್ಜುಗೊಳಿಸಿದರೆ, ಅದರಿಂದ ಸಮಾಜದ ಇತರ ಅಂಗಗಳಲ್ಲೂ ಬದಲಾವಣೆ ತರುವುದು ಸುಲಭವಾಗುತ್ತದೆ. ಉದಾಹರಣೆಗೆ ಗಾಂಧಿಜೀಯವರ ನೇತೃತ್ವದ ಸ್ವಾತಂತ್ರ್ಯ ಚಳುವಳಿ.

4. **ಬದಲಾವಣೆ ವಿರೋಧಿಸುವ ತರಬೇತಿ :** ಸಾಮಾಜಿಕ ಬದಲಾವಣೆಯನ್ನು ಉತ್ತೇಜಿಸುವ ಬದಲು, ಅದನ್ನು ವಿರೋಧಿಸಲು ತರಬೇತಿ ನೀಡಲು ಚಳುವಳಿಯು ಮುಂದಾಗಬಹುದು. ಪ್ರಸ್ತುತ ಪರಿಸ್ಥಿತಿಯನ್ನು ಕಾಯ್ದುಕೊಳ್ಳಲು ಅಥವಾ ಹಿಂದಿದ್ದ ಪರಿಸ್ಥಿತಿಗಳನ್ನು ಪುನರ್ ಪ್ರತಿಷ್ಠಾಪಿಸಲು ಚಳುವಳಿಯೊಂದು ನೆರವಾಗುತ್ತದೆ. ಉದಾಹರಣೆಗೆ ಆರ್ಯ ಸಮಾಜ, ಪ್ರಾರ್ಥನಾ ಸಮಾಜಗಳು, ವೇದ ತತ್ವಗಳನ್ನು ಪುನರ್ ಪ್ರತಿಷ್ಠಾಪಿಸಲು ನೆರವಾದುದನ್ನು ಇಲ್ಲಿ ಸ್ಮರಿಸಬಹುದು.

## 4.2 ಭಾರತದಲ್ಲಿ ಪ್ರಮುಖ ಸಾಮಾಜಿಕ ಚಳುವಳಿಗಳು

ಭಾರತದಲ್ಲಿ ಹಲವು ಸಾಮಾಜಿಕ ಚಳುವಳಿಗಳು ನಡೆದಿವೆ. ಅವುಗಳನ್ನು ನಾವು ಹಲವು ರೀತಿಯಲ್ಲಿ ವಿಚಾರಿಸಬಹುದಾಗಿದೆ. ಅವುಗಳೆಂದರೆ ಪ್ರತಿಭಟನಾತ್ಮಕ ಚಳುವಳಿಗಳು, ಸುಧಾರಣಾ ಚಳುವಳಿಗಳು, ಕ್ರಾಂತಿಕಾರಕ ಚಳುವಳಿಗಳು ಇತ್ಯಾದಿ. ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

### 4.2.1 ಪ್ರತಿಭಟನಾತ್ಮಕ ಚಳುವಳಿಗಳು

ಪ್ರತಿಭಟನಾ ಚಳುವಳಿಗಳು ಕಾಲಾಂತರದಲ್ಲಿ ರೂಪುಗೊಳ್ಳುತ್ತವೆ. ಹೀಗಾಗಿ ಅವುಗಳು ಸನ್ನಿವೇಶಗಳ ಒತ್ತಡಕ್ಕೆ ಸಿಕ್ಕಿಯಾಗಲೀ, ವ್ಯಾಪಕವಾದ ಪ್ರಚೋದನೆಗೊಳಗಾಗಿಯಾಗಲೀ ದಿಢೀರನೆ ಹೊರಹೊಮ್ಮುವುದಿಲ್ಲ. ಜನತೆ ಅಥವಾ ಜನನಾಯಕರ ಮನಸ್ಸಿನಲ್ಲಿ ಉಂಟಾದ ಗೊಂದಲ, ನಿರಾಶೆ, ನಿರಾಕರಣೆ, ಬಿಗುವಿನ ಸನ್ನಿವೇಶಗಳೆಲ್ಲದರ ಸಮುಷ್ಠಿ ರೂಪದಲ್ಲಿ ಪ್ರತಿಭಟನಾ ಚಳುವಳಿಗಳು ಹೊರಹೊಮ್ಮಲ್ಪಡುತ್ತವೆ. ಇಂತಹ ಉತ್ಕಟ ಪರಿಸ್ಥಿತಿ ಏರ್ಪಡಲು, ಚಳುವಳಿಯೊಂದಕ್ಕೆ ವರ್ಷಗಳೇ ಏಕೆ, ದಶಕಗಳ ಕಾಲಾವಧಿಯೂ ಬೇಕಾಗಬಹುದು. ನಂತರ ಚಳುವಳಿಯೊಂದು ಸಾಂಸ್ಥೀಕರಣಗೊಂಡು ವ್ಯವಸ್ಥಿತ ರೂಪಪಡೆದುಕೊಳ್ಳುತ್ತದೆ. ಸಂಘಟಿತವಾಗಿ ರೂಪುಗೊಂಡ ಪ್ರತಿಭಟನಾ ಚಳುವಳಿಯೊಂದು 'ಒತ್ತಡಗುಂಪು' ಆಗಿ ಪರಿವರ್ತಿತವಾಗಬಹುದು.

ಪ್ರತಿಭಟನಾತ್ಮಕ ಚಳುವಳಿಗಳು ಆದರ್ಶಗಳನ್ನು ಹೊಂದಿರುತ್ತವೆ. ಈ ಆದರ್ಶಗಳನ್ನು ಎಲ್ಲ ಸದಸ್ಯರೂ ಪಾಲಿಸಲು ಉಪಯೋಗಿಸುತ್ತಾರೆ. ಅಲ್ಲದೆ ಸದಸ್ಯರೆಲ್ಲರಿಗೆ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ಬಾಹ್ಯ ಒತ್ತಡಗಳಿಂದ ಇಲ್ಲವೇ ಪರಿಸ್ಥಿತಿಯೊಂದಿಗೆ ಪ್ರತಿಭಟಿಸುವ ಶಕ್ತಿಯನ್ನು ಒದಗಿಸುತ್ತದೆ ಜೊತೆಗೆ ಆದರ್ಶವು ಚಳುವಳಿಯಲ್ಲಿ

ಪಾಲ್ಗೊಳ್ಳುವ ಸದಸ್ಯರಿಗೆ ಸ್ಫೂರ್ತಿ ಮತ್ತು ಆಶಾಭಾವನೆಯನ್ನು ದೊರಕಿಸಿಕೊಡುತ್ತದೆ. ಭಾರತದಲ್ಲಿನ ಪ್ರತಿಭಟನಾತ್ಮಕ ಚಳುವಳಿಗಳ ಲಕ್ಷಣಗಳನ್ನು ಕೆಳಕಂಡಂತೆ ನೀಡಬಹುದು.

1) ಚಳುವಳಿಯು ರೂಪುಗೊಳ್ಳುವ ಸ್ಥಳ ಕುರಿತು ಚಳುವಳಿಗಳು ಸ್ಪಷ್ಟವಾದ ಉದ್ದೇಶವನ್ನು ಹೊಂದಿರುತ್ತವೆ.

2) ಬದಲಾವಣೆಗೆ ಒಳಪಡಬೇಕಾಗಿರುವ ಸಮಾಜವನ್ನು ಟೀಕಿಸಿ ಬದಲಾವಣೆಯಾಗಬೇಕಾಗಿರುವ ಅಂಶವನ್ನು ಪ್ರಚಾರಮಾಡುತ್ತವೆ.

3) ತನ್ನ ಉದ್ದೇಶಗಳನ್ನು ಸಮರ್ಥವಾಗಿ ಬೆಂಬಲಿಸಿ, ಅದನ್ನು ಮುಂದುವರೆಸಿಕೊಂಡು ಹೋಗುವಂತಹ ತತ್ವ ಪ್ರತಿಪಾದನೆ ಮಾಡುತ್ತವೆ.

4) ಚಳುವಳಿಯೊಂದನ್ನು ಪ್ರಾಯೋಗಿಕವಾಗಿ ಮುನ್ನೆಡೆಸುವಂತಹ, ತಂತ್ರಗಳು ಮತ್ತು ನಂಬಿಕೆಗಳನ್ನು ಹೊಂದಿರುತ್ತವೆ.

5) ಸಾಮಾಜಿಕ ಚಳುವಳಿಗಿರಬೇಕಾದ ಪೌರಾಣಿಕ ಹಿನ್ನೆಲೆ, ಈ ಹಿನ್ನೆಲೆಯಲ್ಲಿ ಮತಧರ್ಮ ಚಳುವಳಿಗಳು ಹಾಗೂ ಪ್ರತಿಭಟನಾ ಚಳುವಳಿಗಳು ಅನೇಕ ಸಾಮ್ಯಗಳನ್ನು ಹೊಂದಿವೆ. ಮತಧರ್ಮ ಚಳುವಳಿಗಳಾದ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ ಮತ್ತು ವೀರಶೈವ ಧರ್ಮಗಳು ಪ್ರತಿಭಟನಾ ಚಳುವಳಿಗಳಾಗಿಯೂ ರೂಪುಗೊಂಡು ಸಾಮಾಜಿಕ ಪರಿವರ್ತನೆಗೆ ಸಹಾಯಮಾಡಿವೆ.

### 4.2.2 ಸುಧಾರಣಾ ಚಳುವಳಿಗಳು

ಸುಧಾರಣಾ ಚಳುವಳಿಗಳಲ್ಲಿ ಅಹಿಂಸೆ, ಮನಃ ಪರಿವರ್ತನೆ, ಅನುಕರಣೆ ಮುಂತಾದ ವಿಧಾನಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಈ ಪರಿವರ್ತನಾ ಚಳುವಳಿಗೆ ನಾಯಕನೊಬ್ಬನಿದ್ದು, ಅವನ ನೇತೃತ್ವದಲ್ಲಿ ಚಳುವಳಿ ನಡೆಯುತ್ತದೆ. ಪರಿವರ್ತನಾ ಚಳುವಳಿಗಳಲ್ಲಿ ಮುಖ್ಯವಾದವುಗಳೆಂದರೆ,

- ಬ್ರಹ್ಮ ಸಮಾಜ
- ಆರ್ಯ ಸಮಾಜ
- ಸತ್ಯಶೋಧಕ ಸಮಾಜ
- ಕಬೀರ್ ಪಂಥ
- ಪ್ರಾರ್ಥನಾ ಸಮಾಜ

**ಬ್ರಹ್ಮ ಸಮಾಜ**

18ನೇ ಶತಮಾನದ ಕೊನೆಯ ಭಾಗದ ಭಾರತದಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಆವರಿಸಿದ್ದ ಅಜ್ಞಾನದ ಅಂಧಕಾರವನ್ನು ತೊಲಗಿಸಿದವರಲ್ಲಿ ರಾಜಾರಾಮ್ ಮೋಹನ್‌ರಾಯ್ ರವರು ಪ್ರಮುಖರು. ರಾಯ್ ಅವರನ್ನು ಭಾರತದ ನವೋದಯ ಪಿತಾಮಹ ಎಂದೇ ಗುರುತಿಸಲಾಗಿದೆ. ರಾಜಾರಾಮ್ ಮೋಹನ್‌ರಾಯ್‌ರವರಿಗೆ 30 ವರ್ಷಗಳಿದ್ದಾಗ ಫ್ರೆಂಚ್ ಮಹಾಕ್ರಾಂತಿ ಸಂಭವಿಸಿತು. ಫ್ರೆಂಚ್ ಮಹಾಕ್ರಾಂತಿಯ ಧ್ಯೇಯ ವಾಕ್ಯಗಳಾದ ಸ್ವಾತಂತ್ರ, ಸಮಾನತೆ, ಭ್ರಾತೃತ್ವಗಳು ಅವರ ಮೇಲೆ ಅಗಾಧ ಪರಿಣಾಮ ಬೀರಿದವು. ಫ್ರೆಂಚ್ ಮಹಾಕ್ರಾಂತಿ ಯುರೋಪಿನಾದ್ಯಂತ ಅನೇಕ ಸ್ವತಂತ್ರ ಚಳುವಳಿಗೆ ನಾಂದಿಯಾಯಿತು.

ಲಾರ್ಡ್ ಬ್ರೋಹನ್ ಮಹಾಶಯನಿಗೆ ಸಹಾಯ ಹಸ್ತ ನೀಡಿದ ಮೋಹನ್‌ರಾಯ್ ಬ್ರಿಟೀಷ್ ಚಕ್ರಾಧಿಪತ್ಯದಲ್ಲಿ ಗುಲಾಮಗಿರಿ ಪದ್ಧತಿಯನ್ನು ತೊಡೆದು ಹಾಕಲು ನೆರವಾದರು.

ಬ್ರಹ್ಮ ಸಮಾಜದ ಸ್ಥಾಪನೆ ಬಗ್ಗೆ ರಾಜಾರಾಮ್ ಮೋಹನ್‌ರಾಯ್‌ರವರು ಸ್ಪಷ್ಟಗೊಳಿಸುತ್ತಾ, "ಪ್ರಸಕ್ತ ಇರುವ ಹಿಂದೂಶಾಸ್ತ್ರ, ಗ್ರಂಥಗಳು, ಸಮುದಾಯ ಹಾಗೂ ವ್ಯಕ್ತಿಗಳ ರಾಜಕೀಯ ಆಸಕ್ತಿಗಳನ್ನು ಪೂರೈಸುವಂತೆ ರಚಿಸಲಾಗಲಿಲ್ಲ. ಹೀಗಾಗಿ ಅವರ ರಾಜಕೀಯ ಅನುಕೂಲಗಳನ್ನು ಪಡೆಯಲು ಹಿಂದೂ ಮತ ಧರ್ಮದಲ್ಲಿರುವ ನಿಯಮಗಳನ್ನು ಪುನರ್ ರೂಪಿಸುವುದಕ್ಕೋಸ್ಕರ ಈ ಸಮಾಜ ಸ್ಥಾಪನೆಯಾಗಿದೆ" ಎಂದಿದ್ದಾರೆ.

**ಆರ್ಯ ಸಮಾಜ**

19ನೇಯ ಶತಮಾನದ ಕೊನೆಯ ಭಾಗದಲ್ಲಿ ಭಾರತದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಜೀವನದ ಮೇಲೆ ಪ್ರಬಲ ಪ್ರಭಾವ ಬೀರಿದ ಸಂಘಟನೆಗಳಲ್ಲಿ ಆರ್ಯಸಮಾಜ ಪ್ರಮುಖವಾದದ್ದು. ದಯಾನಂದ ಸರಸ್ವತಿರವರು ಕ್ರಿ.ಶ. 1875ನೇ ಏಪ್ರಿಲ್ 10ರಂದು ಆರ್ಯಸಮಾಜ ಎಂಬ ಸಂಘಟನೆಯನ್ನು ರೂಪಿಸಿದರು. ಮುಂಬೈ ನಗರದಲ್ಲಿ ಆರಂಭಗೊಂಡ ಈ ಸಂಘಟನೆಯ ಹಲವಾರು ಮೂಲ ತತ್ವಗಳನ್ನು ಹೊಂದಿ ಚಳವಳಿಯಲ್ಲಿ ಧುಮುಕಿತು. ಆರ್ಯಸಮಾಜದ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರು ಪಾಶ್ಚಾತ್ಯ ಚಿಂತನೆಯಿಂದ ಪ್ರಭಾವಿತರಾಗದೇ, ವೇದಗಳ ಬಗ್ಗೆ ಅಪಾರ ಗೌರವ, ವಿಶ್ವಾಸಗಳನ್ನು ಹೊಂದಿ **'ವೇದಗಳಿಗೆ ಹಿಂತಿರುಗಿ'** ಎಂದು ಘೋಷಣೆ ಮಾಡಿದರು. ಹಾಗೆಯೇ ಹಿಂದುಗಳಿಗೆ ಯಾವುದೇ ನೂತನ ಧರ್ಮತತ್ವಗಳ, ವ್ರತಾಚರಣೆಗಳ ಅವಶ್ಯಕತೆ ಇಲ್ಲವೆಂದು ನುಡಿದರು. ಧರ್ಮಜ್ಞಾನವನ್ನು ಪಡೆಯಲು ವೇದಗಳನ್ನು ಆಶ್ರಯಿಸಬೇಕೆಂದರು.

**ಸತ್ಯಶೋಧಕ ಸಮಾಜ**

18ನೇ ಶತಮಾನದ ಪ್ರಾರಂಭವು ಭಾರತಾದ್ಯಂತ ಒಂದು ರೀತಿಯ ಕತ್ತಲು, ಶೂನ್ಯತಾಭಾವನೆ ಆವರಿಸಿತ್ತೆಂದು ಹೇಳಬಹುದು. ಕೆಳವರ್ಗದ ಜನರು, ಸ್ತ್ರೀಯರು, ಅಸ್ಪೃಶ್ಯರ ಜೀವನ ಅಸಹನೀಯವಾಗಿತ್ತು. ಇವರನ್ನೆಲ್ಲಾ ಮುನ್ನಡೆಸಬಲ್ಲ ಮಹಾನ್ ನಾಯಕರೂ ಇರಲಿಲ್ಲ. ಬಡರೈತರನ್ನು ಸಿರಿವಂತ ಭೂಮಾಲೀಕರು ಶೋಷಿಸುತ್ತಿದ್ದರು. ಸನಾತನ ಬ್ರಾಹ್ಮಣರು ಚಾತುರ್ವರ್ಣ್ಯ ಪದ್ಧತಿಯನ್ನು ಕಠೋರವಾಗಿ ಆಚರಿಸುತ್ತಾ ಉಳಿದ ವರ್ಗಗಳನ್ನು ಅಜ್ಞಾನದಲ್ಲಿರಿಸಿದರು. ಇತರೆ ವರ್ಗದವರು ವಿದ್ಯೆ ಕಲಿಯುವುದನ್ನು ನಿಷೇಧಿಸಲಾಗಿತ್ತು. ವಿಧವೆಯರ ಪರಿಸ್ಥಿತಿಯಂತೂ ಶೋಚನೀಯವಾಗಿತ್ತು. ಸತಿಪದ್ಧತಿಯು ಉತ್ತರ ಭಾರತದಾದ್ಯಂತ ವ್ಯಾಪಕವಾಗಿ ಪ್ರಚಾರಗೊಂಡು ಸ್ತ್ರೀಯರ ಜೀವನ ಪರಿಸ್ಥಿತಿ ಕಠೋರವೆನಿಸಿತ್ತು. ಇಂತಹ ದುಸ್ಥಿತಿಯಲ್ಲಿ ಬ್ರಿಟೀಷರು ಜಾರಿಗೊಳಿಸಿದ ಇಂಗ್ಲೀಷ್ ಶಿಕ್ಷಣ ಪದ್ಧತಿಯು ಕೆಲವು ಮುಖ್ಯ ಬದಲಾವಣೆಗಳನ್ನುಂಟು ಮಾಡಿತೆನ್ನಬಹುದು. ಬ್ರಿಟಿಷರ ಆಡಳಿತದಲ್ಲಿ ಅನೇಕ ಕ್ರಿಶ್ಚಿಯನ್ ಮಿಷಿನರಿಗಳು ಭಾರತದಲ್ಲಿ ಶಿಕ್ಷಣ ಪ್ರಚಾರ ಮಾಡಲು ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದರು. ಅಜ್ಞಾನ, ಅಸಹಾಯಕತೆಗಳ ವಿರುದ್ಧ ಅನೇಕ ಚಳುವಳಿಗಳು ಆರಂಭವಾದವು. ಈ ಚಳುವಳಿಗಳಲ್ಲಿ ಬ್ರಹ್ಮ ಸಮಾಜ, ಆರ್ಯಸಮಾಜಗಳಂತೆ ಸತ್ಯಶೋಧಕ ಸಮಾಜವೂ ಪ್ರಧಾನ ಪಾತ್ರವಹಿಸಿತು. ಬ್ರಾಹ್ಮಣರ ದಬ್ಬಾಳಿಕೆ, ಅರ್ಥವಿಲ್ಲದ ಅಂಧ ಆಚರಣೆಗಳು ಜನಸಾಮಾನ್ಯರ ಜೀವನವನ್ನು ದುರ್ಬಲಗೊಳಿಸಿದವು. ಸಾಮಾಜಿಕ ಪರಿವರ್ತನಾ ಚಳುವಳಿಗಳನ್ನು ರೂಪಿಸಿ, ಯಶಸ್ಸುಗಳಿಸಿದವರಲ್ಲಿ ಬ್ರಾಹ್ಮಣರಲ್ಲದ ಜ್ಯೋತಿರಾವ್ ಫುಲೆ ಮೊದಲಿಗರೆಂದು ಹೇಳಬಹುದು.

**ಕಬೀರ್‌ಪಂಥ**

ಸ್ವತಃ ಕವಿ, ಯೋಗಿ, ವಿಮರ್ಶಕ, ಸಂತನೂ, ಮಾನವೀಯತೆಯನ್ನು ಪ್ರೀತಿಸುವವನೂ ಆಗಿದ್ದ ಕಬೀರ್, ಸಾಮಾಜಿಕ ಪರಿವರ್ತಕರಲ್ಲಿ ವಿಶೇಷ ಮನ್ನಣೆಗಳಿಸಿದ್ದಾನೆ. ಸಾಧು-ಸಂತರ ಸಹವಾಸದಲ್ಲಿಯೇ ಸದಾಕಾಲಕಳೆದರೂ ಕಬೀರ್ ಗೃಹಸ್ಥ ಧರ್ಮವನ್ನು ತ್ಯಜಿಸಲಿಲ್ಲ. ಅಕ್ಷರ ವಿದ್ಯೆಯನ್ನು ರೂಢಿಸಿಕೊಳ್ಳದಿದ್ದರೂ, ತಾನು ಗಳಿಸಿದ್ದ ಸುಂದರ ಭಕ್ತಿಗೀತೆಗಳಿಂದ ಪಂಡಿತಪಾಮರರೆಲ್ಲರ ಗಮನವನ್ನು ಮನ್ನಣೆಯನ್ನು ಕಬೀರ್ ಗಳಿಸಿಕೊಂಡಿದ್ದ. ಸನಾತನ ಬ್ರಾಹ್ಮಣಧರ್ಮ ಮತ್ತು ಇಸ್ಲಾಂ ಧರ್ಮಗಳ ವಿರುದ್ಧ ಹೋರಾಟ ಆರಂಭಿಸಿದ ಕಬೀರನನ್ನು ಎರಡು ಧರ್ಮಗಳು ಹೊರಗಿಟ್ಟವು. ಬ್ರಾಹ್ಮಣ ಜಾತಿಪದ್ಧತಿಯನ್ನು ಕಟುವಾದ ಪದಗಳಲ್ಲಿ ಖಂಡಿಸಿದ ಕಬೀರ್, ಅಸ್ಪೃಶ್ಯತಾಚರಣೆಯನ್ನು ಖಂಡಖಂಡವಾಗಿ ವಿರೋಧಿಸಿದ. ಅದೊಂದು ಕ್ರೂರ ಪದ್ಧತಿ ಎಂದು ಜರಿದ. ತನ್ನ ಕಾಲದಲ್ಲಿ ಜನರು ಅನುಸರಿಸುತ್ತಿದ್ದ ಅರ್ಥವಿಲ್ಲದ ಅಭ್ಯಾಸಗಳು, ಅಂಧಶ್ರದ್ಧೆಗಳು, ಅಂಧ ಸಂಪ್ರದಾಯಗಳು, ಅಜ್ಞಾನದಿಂದ ಮನನೊಂದ ಕಬೀರ್ ಎರಡೂ ಧರ್ಮಗಳನ್ನು ಒಂದಾಗಿಸಲು ಶ್ರಮಿಸಿದ. ಕಬೀರ್ ಎರಡೂ ಧರ್ಮಗಳಲ್ಲಿದ್ದ ಶ್ರೇಷ್ಠ ಅಂಶಗಳನ್ನು ಗುರುತಿಸಿದನಲ್ಲದೆ, ಅವುಗಳಲ್ಲಿನ ಕನಿಷ್ಠ ಅಂಶಗಳನ್ನು ಬಯಲುಮಾಡಿದ. ಇದರಿಂದ ಕಬೀರ್ ಎರಡು ಧರ್ಮದವರ ಕೋಪಕ್ಕೂ ತುತ್ತಾಗಬೇಕಾಗಿ ಬಂದಿತು.

**ಪ್ರಾರ್ಥನಾ ಸಮಾಜ**

ಪ್ರಾರ್ಥನಾ ಸಮಾಜವು ಪ್ರಾರಂಭದಲ್ಲಿ ಪರಮಹಂಸ ಸಭೆ ಎಂದು ಕರೆಯಲ್ಪಡುತ್ತಿತ್ತು. ಬ್ರಹ್ಮ ಸಮಾಜದಿಂದ ಪ್ರೇರಿತಗೊಂಡ ಈ ಸಂಸ್ಥೆ 1884ರಲ್ಲಿ ಹುಟ್ಟಿಕೊಂಡಿತು. ರಹಸ್ಯವಾಗಿದ್ದ ಈ ಸಭೆಯು ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಿಂತಿಸಿ ಅವುಗಳಿಗೆ ಪರಿಹಾರ ಹುಡುಕುವುದರಲ್ಲಿ ನಿರತವಾಗಿದ್ದಿತು. ಆದರೆ 1867ರಲ್ಲಿ ಡಾ. ಆತ್ಮಾರಾಂ ಪಾಂಡುರಂಗ ಎಂಬುವರ ನೇತೃತ್ವದಲ್ಲಿ ಪ್ರಾರ್ಥನಾ ಸಮಾಜವೆಂದು ನಾಮಕರಣಗೊಂಡಿತು. ಆಧ್ಯಾತ್ಮ ಚಳುವಳಿಯು ವರ್ಧಿಸಲು ನೆರವಾಯಿತು. 1868ರಲ್ಲಿ ಕೇಶವ ಚಂದ್ರಸೇನ್‌ರವರು ಮುಂಬೈಗೆ ಭೇಟಿ ಮಾಡಿ ಪ್ರಾರ್ಥನಾ ಸಮಾಜವನ್ನು ಮತ್ತಷ್ಟು ಬಲಪಡಿಸಿದರು. ಆಜಿ ಭಂಡಾರ್‌ಕರ್ ಮತ್ತು ಮಹಾದೇವ ಗೋವಿಂದ ರ‍್ಯಾನಡೆಯಂತಹ ಪ್ರತಿಷ್ಠಿತರು ಪ್ರಾರ್ಥನಾ ಸಮಾಜದ ಸದಸ್ಯರಾಗಿದ್ದರು. ನಾಮದೇವ್, ತುಕಾರಾಂ, ರಾಮದಾಸ್, ಜ್ಞಾನೇಶ್ವರ್ ಮುಂತಾದ ಪ್ರಖ್ಯಾತ ಭಕ್ತರ, ಸನ್ಯಾಸಿಗಳ ಆರಾಧನಾ ವಿಧಾನಗಳು, ತತ್ವಗಳು ಪ್ರಾರ್ಥನಾ ಸಮಾಜಕ್ಕೆ ಮಾರ್ಗದರ್ಶಿಯಾಗಿದ್ದೀತು. ಹೀಗಾಗಿ ಪ್ರಾರ್ಥನಾ ಸಮಾಜವು ಮತಧರ್ಮದ ಜಿಜ್ಞಾಸೆಯನ್ನು ಬಿಟ್ಟು ಸಾಮಾಜಿಕ ದುಷ್ಟಪದ್ಧತಿಗಳನ್ನು ದೂರಮಾಡಲು ತನ್ನ ಗಮನವನ್ನು ಕೇಂದ್ರೀಕರಿಸಿತು. ಮಾನವ ಸಮಾಜದ ಸೇವೆಯೇ ಪರಮಾತ್ಮನ ಸೇವೆಯಾಗಿರುತ್ತದೆ. ಪರಮಾತ್ಮನ ಪ್ರೀತಿಯನ್ನು ಸಮಾಜಸೇವೆಯ ಮುಖಾಂತರ ಗಳಿಸಿಕೊಳ್ಳಬಹುದು ಎಂದು ನಂಬಿದ ಸಮಾಜವು ಹಲವಾರು ಚಟುವಟಿಕೆಗಳನ್ನು ಕೈಗೊಂಡಿತ್ತು. ಒಟ್ಟಿನಲ್ಲಿ ಭಕ್ತಿಪಂಥವನ್ನು ಗೌರವಿಸಿದ ಪ್ರಾರ್ಥನಾ ಸಮಾಜ ಹಿಂದೂ ಧರ್ಮದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡ ಚಳುವಳಿ ಎನ್ನಬಹುದು.

### 4.2.3 ಕ್ರಾಂತಿಕಾರಕ ಚಳುವಳಿಗಳು

ಕ್ರಾಂತಿ ಅಥವಾ ಕ್ರಾಂತಿಕಾರಿ ಚಳುವಳಿಯೆಂದರೆ ಮೂಲಭೂತವಾದ ಬದಲಾವಣೆಯನ್ನು ತರುವ ಪ್ರಯತ್ನಗಳು. ಅವುಗಳ ಪರಿಣಾಮದಿಂದ ಸಮಾಜ ರಚನೆಯಲ್ಲಿ ಬಹು ಮಹತ್ವದ ಮಾರ್ಪಾಟುಗಳು ಉಂಟಾಗುತ್ತವೆ. ಉದಾಹರಣೆಗೆ, ಸಾಮಾಜಿಕ ವರ್ಗಗಳ ಅಧಿಕಾರ ಹಸ್ತಾಂತರವಾಗುವುದು ಕ್ರಾಂತಿಯ ತತ್ವಾದರ್ಶವನ್ನು ಹೆದರಿಕೆಯಿಂದಲೋ, ಲಾಭದ ಆಸೆಯಿಂದಲೋ, ಬೇರೆ ಉಪಾಯವಿಲ್ಲದ ಕಾರಣಕ್ಕಾಗಿಯೋ ಕ್ರಾಂತಿಯ

ಹೊರವಲಯದಲ್ಲಿದ್ದವರು ಕಾಲಕ್ರಮೇಣ ತಮ್ಮದಾಗಿಸಿಕೊಳ್ಳುವರು. ಸಾಮಾಜಿಕ ವಿಕಾಸದ ಪ್ರಕ್ರಿಯೆಯೊಡನೆ ಹೋಲಿಸಿದರೆ ಕ್ರಾಂತಿಯು ತೀವ್ರಗತಿಯ ಪ್ರಕ್ರಿಯೆ. ಒಂದಿಷ್ಟು ಹಿಂಸೆ ಕ್ರಾಂತಿಯ ಸಹಜ ಲಕ್ಷಣ. ಕ್ರಾಂತಿಕಾರಕ ಬದಲಾವಣೆಗಳು ಶಾಂತಿಯಿಂದ ಒಗ್ಗಿಸಿಕೊಳ್ಳುವಷ್ಟು ನಮ್ರವಾಗಿರುವುದಿಲ್ಲ. ಕ್ರಾಂತಿಗಳು ಫ್ರೆಂಚ್ ಕ್ರಾಂತಿಯಂತೆ, ಚೀನಾದ ಅಥವಾ ಸೋವಿಯತ್ ಕ್ರಾಂತಿಯಂತೆ ಅನೇಕ ವರ್ಷಗಳ ಕಾಲ ನಡೆಯಬಹುದಾದರೂ ಕ್ರಾಂತಿಯ ಕೊನೆಯ ಘಟ್ಟ ಕ್ಷಿಪ್ರವಾದದ್ದು, ಈ ಎಲ್ಲಾ ದೃಷ್ಟಿಯಿಂದ ನೋಡಿದರೆ ಸೋವಿಯತ್ ರಷ್ಯಾದಲ್ಲಿ ಝಾರ್ ಕಾಲದ ಊಳಿಗಮಾನ್ಯ ಜಹಗೀರು ಪದ್ಧತಿಯಿಂದ ರೋಸಿಹೋದ ರೈತರು ನಡೆಸಿದ ಚಳುವಳಿ ಕ್ರಾಂತಿಕಾರಕವಾದದ್ದು. ಅಧ್ಯಕ್ಷ ಮಾವೋ ನೇತೃತ್ವದಲ್ಲಿ ನಡೆದ ಚೀನಾ ಹೋರಾಟವು ಅದೇ ರೀತಿಯದು.

ಆದರೆ ಗಾಂಧೀಜಿ ನೇತೃತ್ವದ ಚಂಪಾರಣ್ಯ ಸತ್ಯಾಗ್ರಹ, ಖೇಡಾ ಸತ್ಯಾಗ್ರಹ, ಸರ್ದಾರ ಪಟೇಲರ ನೇತೃತ್ವದಲ್ಲಿ ನಡೆದ ಬಾರ್ಡೋಲಿ ಸತ್ಯಾಗ್ರಹ ಮುಂತಾದವುಗಳ ಸ್ವರೂಪವೇ ಬೇರೆ. ಈ ಹೋರಾಟಗಳು ಅಲ್ಲಿಯ ರೈತಾಪಿ ಜನರ ಸ್ಥಾನಮಾನ, ವರ್ಗ ರಚನೆಗಳಲ್ಲಿ ಮೂಲಭೂತ ಸ್ವರೂಪದ ಬದಲಾವಣೆಗಳನ್ನು ಉದ್ದೇಶಿಸಿರಲಿಲ್ಲ. ಅಸಹಕಾರದ ಮಾರ್ಗ ಹಿಡಿದಿದ್ದರೇ ಹೊರತು ಹಿಂಸೆ ಮತ್ತು ಬಲಪ್ರಯೋಗದ ಮಾರ್ಗವನ್ನಲ್ಲ. ಸಮಕಾಲೀನ ಸಮಾಜ ರಚನೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ ಹೊಸ ರಚನೆಯನ್ನು ಹೇಗಾದರೂ ತರಲೇಬೇಕು ಎಂದು ಅವರು ಒತ್ತಾಯಿಸಲಿಲ್ಲ. ಸದ್ಯ ಇರುವ ರಚನೆಯಲ್ಲಿ ಕೆಲವು ಮಾರ್ಪಾಟು ಮಾಡುವುದರೊಂದಿಗೆ, ಕೆಲವು ಬೇಡಿಕೆಗಳು ಈಡೇರುವುದುರೊಂದಿಗೆ, ಕೆಲವು ಅನ್ಯಾಯಗಳನ್ನು ಸರಿಪಡಿಸುವುದರೊಂದಿಗೆ ಈ ಸತ್ಯಾಗ್ರಹಗಳು ಕೊನೆಗೊಂಡವು. ಎಲ್ಲ ಸತ್ಯಾಗ್ರಹಗಳ ರೀತಿಯೂ ಇದೇ ಎನ್ನಬಹುದು. ಕಾರ್ಮಿಕರ, ಸಾರ್ವಜನಿಕರ, ವಿದ್ಯಾರ್ಥಿಗಳ, ಮಹಿಳೆಯರ ಅಥವಾ ಬೇರೆ ಜನಸಮೂಹಗಳ ಸತ್ಯಾಗ್ರಹ ಇದೇ ರೀತಿಯದು.

ದಂಗೆ ಅಥವಾ ಬಂಡಾಯಗಳು ಸ್ವರೂಪದಲ್ಲಿ ಸತ್ಯಾಗ್ರಹಕ್ಕಿಂತ ಭಿನ್ನವಾದುವು. ಅವು ಬಲಪ್ರಯೋಗಕ್ಕೆ ಹಿಂದೇಟು ಹಾಕುವುದಿಲ್ಲ. ಆದರೆ ಇಂತಹ ಹೋರಾಟಗಳು ಕ್ರಾಂತಿಯಷ್ಟು ವ್ಯಾಪಕವಾಗಿರುವುದಿಲ್ಲ. ಕ್ರಾಂತಿಗಳಿಗೆ ವೈಚಾರಿಕ ಅಥವಾ ಸೈದ್ಧಾಂತಿಕ ತತ್ವಾದರ್ಶಗಳಿಂದ ಅಥವಾ ಸಿದ್ಧಾಂತಗಳಿಂದ ಸಿಗುವ ಪ್ರೇರಣೆ ಅತ್ಯಲ್ಪ. ದಂಗೆ, ಬಂಡಾಯಗಳಲ್ಲಿ ಸಮಗ್ರ ಸಮಾಜ ವ್ಯವಸ್ಥೆಯ ಬಗೆಗೆ ಚಿಂತನೆ ಇರುವುದಿಲ್ಲ. ಜನರು ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಾರೆ. ತಮ್ಮ ವೈರಿಗಳೆಂದು ತಿಳಿದ ಜನರ ವಿರುದ್ಧ ಮತಪ್ರದರ್ಶನ, ಬಹಿಷ್ಕಾರ, ಲೂಟಿ, ಕೊಳ್ಳೆ, ಹಿಂಸಾಚಾರದಲ್ಲಿ ತೊಡಗಬಹುದು. ತಮ್ಮ ಕ್ರೋಧವನ್ನು ತೋರಿಸಿ, ಪ್ರತೀಕಾರ ಮಾಡಿದರೆ ಅಥವಾ ಅಧಿಕಾರಯುತವಾಗಿ ಬಲವಂತವಾಗಿ ವೈರಿಗಳಿಂದ ಅಧಿಕಾರವನ್ನು ಕಸಿದುಕೊಂಡರೆ ಈ ದಂಗೆಕಾರರ ಕೆಲಸ ಮುಗಿಯಿತು. ದಂಗೆಯಾದ ಪ್ರದೇಶಗಳಲ್ಲಿ ಸ್ಥಳೀಯವಾಗಿ ಕೆಲವುಗಳಿಗೆ ಇಲ್ಲಿ ತಾತ್ಕಾಲಿಕ ಪರಿಹಾರ ಸಿಕ್ಕರೂ ಆಮೂಲಾಗ್ರ ಬದಲಾವಣೆ ಇಲ್ಲ. ಹೀಗೆ ದಂಗೆ, ಬಂಡಾಯಗಳು ಕ್ರಾಂತಿಗಳಂತೆಯೇ ಕ್ಷಿಪ್ರವಾಗಿ ಸಂಭವಿಸಿದರೂ, ಹಿಂಸೆ ಸೀಮಿತವಾಗಿರುತ್ತವೆ. ಭಾರತದ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ, ಬಂಗಾಲದ ನೀಲಿ ಬೆಳೆಗಾರರು, ಸಂತಾಲ ಆದಿವಾಸಿಗಳು, ಡೆಕ್ಕನ್ ಪ್ರದೇಶದ ರೈತರು ನಡೆಸಿದ ಹೋರಾಟಗಳು ಕ್ರಾಂತಿಗಳೂ ಅಲ್ಲ, ಸತ್ಯಾಗ್ರಹಗಳೂ ಅಲ್ಲ, ಅವು ದಂಗೆ ಅಥವಾ ಬಂಡಾಯಗಳು.

**ಪ್ರಮುಖ ಪದಗಳ ಅರ್ಥ** : ಹೋರಾಟಗಳು–ಬಂಡಾಯ–ದಂಗೆಗಳು

**ಸಾಮಾಜಿಕ ಬದಲಾವಣೆ** : ಸಮಾಜದಲ್ಲಿ ಪರಿವರ್ತನೆ

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಸಾಮಾಜಿಕ ಚಳುವಳಿಗಳು ________ ಬದಲಾವಣೆ ತರುತ್ತವೆ.

   ಅ) ರಾಜಕೀಯ ಆ) ಸಾಮಾಜಿಕ

   ಇ) ಆಂತರಿಕ ಈ) ಆರ್ಥಿಕ

2. **ವೇದಗಳಿಗೆ ಹಿಂತಿರುಗಿ** ಎಂಬ ಘೋಷಣೆಯನ್ನು ನೀಡಿದವರು________

   ಅ) ದಯಾನಂದ ಸರಸ್ವತಿ ಆ) ಜ್ಯೋತಿ ಬಾಪುಲೆ

   ಇ) ಆತ್ಮರಾಮ ಪಾಂಡುರಂಗ ಈ) ರಾಜಾರಾಮ್ ಮೋಹನ್‌ರಾಯ್

3. ಚಂಪಾರಣ್ಯ ಸತ್ಯಾಗ್ರಹದ ನೇತೃತ್ವ ವಹಿಸಿದವರು ________

   ಅ) ಮಹಾತ್ಮ ಗಾಂಧೀಜಿ ಆ) ಬಾಲ ಗಂಗಾಧರ ತಿಲಕ್

   ಇ) ನೆಹರು ಈ) ಲಾಲ್ ಬಹದ್ದೂರ್ ಶಾಸ್ತ್ರಿ

4. ಪ್ರಾರ್ಥನಾ ಸಮಾಜ ಸ್ಥಾಪನೆಯಾದ ವರ್ಷ ________

   ಅ) 1867 ಆ) 1928

   ಇ) 1857 ಈ) 1942

**II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಭಾರತದ ನವೋದಯದ ಪಿತಾಮಹ ________
2) ಬಾರ್ದೋಲಿ ಸತ್ಯಾಗ್ರಹದ ನೇತಾರ ________
3) ರೈತರು ನಡೆಸಿದ ಹೋರಾಟಗಳಿಗೆ ________ ಎನ್ನುವರು.
4) ಕ್ರಾಂತಿಕಾರಿ ಚಳುವಳಿಯ ಧ್ಯೇಯ ________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಸಾಮಾಜಿಕ ಚಳುವಳಿಯ ಮುಖ್ಯ ಗುರಿ ಏನು?
2) ಆರ್ಯ ಸಮಾಜದ ಸ್ಥಾಪಕರು ಯಾರು?
3) ಫ್ರೆಂಚ್ ಮಹಾಕ್ರಾಂತಿಯ ಪ್ರಮುಖ ಧ್ಯೇಯಗಳು ಯಾವುವು?
4) ಭಾರತದಲ್ಲಿ ನಡೆದ ಎರಡು ಸುಧಾರಣಾ ಚಳುವಳಿಗಳನ್ನು ಹೆಸರಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಬದಲಾವಣೆಯನ್ನು ವಿರೋಧಿಸುವ ಚಳುವಳಿ ಎಂದರೇನು?

2) ಭಾರತದ ಪ್ರಮುಖ ಸಾಮಾಜಿಕ ಚಳುವಳಿಗಳು ಯಾವುವು?

3) ಪ್ರತಿಭಟನಾತ್ಮಕ ಚಳುವಳಿಯ ನಾಲ್ಕು ಲಕ್ಷಣಗಳನ್ನು ಪಟ್ಟಿಮಾಡಿ.

4) ಸಮಾಜ ಸುಧಾರಣೆಯಲ್ಲಿ ಕಬೀರ್ ಪಂಥದ ಪ್ರಮುಖ ಅಂಶಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾಮಾಜಿಕ ಚಳುವಳಿಯ ಅರ್ಥ ಮತ್ತು ಉದ್ದೇಶಗಳನ್ನು ತಿಳಿಸಿ.
2. ಭಾರತದಲ್ಲಿನ ಪ್ರತಿಭಟನಾತ್ಮಕ ಚಳುವಳಿಗಳ ಸ್ವರೂಪವನ್ನು ವಿವರಿಸಿ.
3. ಭಾರತದಲ್ಲಿ ಸುಧಾರಣಾ ಚಳುವಳಿಗಳ ಇತಿಹಾಸವನ್ನು ತಿಳಿಸಿ.
4. ಸಾಮಾಜಿಕ ಚಳುವಳಿಗಳು ಹೇಗೆ ಸಾಮಾಜಿಕ ಬದಲಾವಣೆಗಳನ್ನು ತರುತ್ತವೆ ಎಂಬುದನ್ನು ವಿವರಿಸಿ.

**ಸಲಹಾತ್ಮಕ ಚಟುವಟಿಕೆಗಳು :**

- ✦ ವಿದ್ಯಾರ್ಥಿಗಳೊಡನೆ ವಿವಿಧ ಚಳುವಳಿಗಳ ಸಂಘಟನೆ ಕುರಿತು ಚರ್ಚಿಸುವುದು.
- ✦ ಕರ್ನಾಟಕದಲ್ಲಿ ಕನ್ನಡ ಹೋರಾಟಗಾರರು ರೈತನಾಯಕರು ಮತ್ತು ದಲಿತ ಸಂಘಟಿತ ಸದಸ್ಯರನ್ನು ಭೇಟಿ ಮಾಡುವುದು.

# ಅಧ್ಯಾಯ-5

# ಬದಲಾಗುತ್ತಿರುವ ಮಹಿಳೆಯರ ಸ್ಥಾನ-ಮಾನ

ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.

- ಪೀಠಿಕೆ
- 19 ಮತ್ತು 20 ನೇ ಶತಮಾನದಲ್ಲಿ ಮಹಿಳೆಯರ ಸ್ಥಾನಮಾನ
- ಸ್ವಾತಂತ್ರ್ಯಾ ನಂತರದಲ್ಲಿ ಮಹಿಳಾ ಚಳುವಳಿ
- ಮಹಿಳಾ ಸಬಲೀಕರಣ ಅರ್ಥ ಮತ್ತು ಕಾರಣವಾಗುತ್ತಿರುವ ಅಂಶಗಳು.

## 5.1 ಪೀಠಿಕೆ

ಸಮಾಜಶಾಸ್ತ್ರದಲ್ಲಿ ಈಗ ಮಹಿಳೆಯರ ಸ್ಥಾನಮಾನವನ್ನು ಕುರಿತು ಹೆಚ್ಚಿನ ಚರ್ಚೆಗಳು ಕಂಡುಬರುತ್ತಿವೆ. ಏಕೆಂದರೆ, ಇತ್ತೀಚೆಗೆ ಮಹಿಳೆಯರ ಮೇಲೆ ಹೆಚ್ಚಿನ ದೌರ್ಜನ್ಯಗಳು ಜರುಗುತ್ತಿವೆ. ಲೈಂಗಿಕ ದೌರ್ಜನ್ಯ, ದಿನನಿತ್ಯ ನಡೆಯುತ್ತಿರುವ ಅತ್ಯಾಚಾರ, ವರದಕ್ಷಿಣೆಗಾಗಿ ಹೆಂಡತಿಯ ಹತ್ಯೆ, ಮರ್ಯಾದಾ ಹತ್ಯೆ, ಹೆಣ್ಣುಮಕ್ಕಳ ಅಪಹರಣ ಕಂಡುಬರುತ್ತಿವೆ. ಹೆಣ್ಣುಶಿಶುವಿನ ಭ್ರೂಣಹತ್ಯೆಯಿಂದಾಗಿ ಪುರುಷ ಮತ್ತು ಸ್ತ್ರೀಯರ ನಡುವಿನ ಸಮತೋಲನ ಕಡಿಮೆಯಾಗಿದೆ. ಸ್ತ್ರೀಯರ ಶಿಕ್ಷಣ ಮಟ್ಟದಲ್ಲಿಯೂ ಸಾಕ್ಷರತೆಯ ಪ್ರಮಾಣವು ಕಡಿಮೆ ಇರುವುದನ್ನು ನಾವು ಕಾಣಬಹುದು.

ಇಷ್ಟರ ನಡುವೆಯೂ ಜೊತೆಗೆ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಶಿಕ್ಷಣ ಕ್ಷೇತ್ರದಿಂದ ಹಿಡಿದು ಸಾಫ್ಟ್‌ವೇರ್ ಕ್ಷೇತ್ರದವರೆಗೆ ಮಹಿಳೆಯರು ಶಿಕ್ಷಕಿಯರಾಗಿ, ಕಂಪ್ಯೂಟರ್ ಇಂಜಿನಿಯರ್‌ಗಳಾಗಿ ದುಡಿಯುತ್ತಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆಯು ಗಮನಾರ್ಹವಾಗಿವೆ.

ಕೆಲವು ಸಮಾಜಶಾಸ್ತ್ರಜ್ಞರ ಪ್ರಕಾರ ಪ್ರಾಚೀನ ಅಥವಾ ಸ್ವಾತಂತ್ರ್ಯಪೂರ್ವ ಮಹಿಳೆಯರ ಸ್ಥಾನಮಾನಕ್ಕೆ ಹೋಲಿಸಿದರೆ ಈಗಿನ ಮಹಿಳೆಯರ ಸ್ಥಾನಮಾನವು ಉತ್ತಮವಾಗಿದೆ. ಆದರೆ ವಾಸ್ತವ ಪರಿಸ್ಥಿತಿಯಲ್ಲಿ ಮಹಿಳೆಯರನ್ನು ಶೋಷಿಸುವ ಪ್ರಮಾಣ ಹೆಚ್ಚಾಗಿರುವಂತೆ ಕಾಣುತ್ತದೆ. ಭಾರತವು ವಿಶಾಲವಾದ ದೇಶವಾಗಿದ್ದು, ವಿವಿಧ ರೀತಿಯಲ್ಲಿ ಮಹಿಳಾ ಗುಂಪುಗಳು ಮತ್ತು ಸಮುದಾಯಗಳು ಕಂಡುಬರುತ್ತವೆ. ಪ್ರತಿಯೊಬ್ಬರ ಸಮಸ್ಯೆಯೂ ಬೇರೆ ಬೇರೆ ರೀತಿಯಲ್ಲಿಯೇ ಇದೆ. ಭಾರತದ ಆದಿವಾಸಿ ಮಹಿಳೆಯರಿಗೆ ಇಂಧನ ಮತ್ತು ಕುಡಿಯುವ ನೀರಿನದೇ ಪ್ರಮುಖ ಸಮಸ್ಯೆಯಾಗಿದೆ. ಗ್ರಾಮೀಣ ಮಹಿಳೆಯರಿಗೆ ಕೃಷಿ, ಕೂಲಿ, ಶೌಚಾಲಯ, ಭೂಮಾಲೀಕರ ಶೋಷಣೆ ದೊಡ್ಡ ಸಮಸ್ಯೆಯಾಗಿದೆ. ಕೆಳಜಾತಿಯ ಹೆಣ್ಣುಮಕ್ಕಳ ಮೇಲೆ ಕೆಲವು ಮೇಲುಜಾತಿಯಿಂದ ಅತ್ಯಾಚಾರ, ಅನ್ಯಾಯ ಸಂಭವಿಸುತ್ತಿದೆ. ದೇವದಾಸಿ ಪದ್ಧತಿ, ಋತುಮತಿಯಾದಾಗ ಹೊರಗಿಡುವಿಕೆ ಮೊದಲಾದ ಅನಿಷ್ಟ

ಸಂಪ್ರದಾಯಗಳು ಜಾರಿಯಲ್ಲಿವೆ. ಹೀಗೆ ಭಾರತೀಯ ಮಹಿಳೆಯ ಚಿತ್ರಣವು ವಿವಿಧ ರೀತಿಯ ಚಿತ್ರಗಳನ್ನು ಅಂಟಿಸಿದ ಕೋಲಾಜ್‌ನಂತೆ ಕಂಡುಬರುತ್ತದೆ.

ಇಂತಹ ಸಂಕೀರ್ಣ ಚಿತ್ರಣಗಳ ನಡುವೆಯೂ ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಾನಮಾನ ಕುರಿತು ಚರ್ಚಿಸಬಹುದು. ಭಾರತೀಯ ಸಮಾಜವು ಪುರುಷ ಪ್ರಧಾನ ಸಮಾಜವಾಗಿದೆ. ಆದುದರಿಂದ ಮಹಿಳೆಯರನ್ನು ಪುರುಷನಿಗಿಂತ ಕಡಿಮೆ ಎಂದು ಭಾವಿಸಲಾಗುತ್ತಿದೆ. ಕಡಿಮೆ ಎಂದು ಭಾವಿಸಿ ಅವರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಆದುದರಿಂದ ಮಹಿಳೆಯ ಸ್ಥಾನಮಾನವು ಪ್ರಾಚೀನ ಕಾಲದಿಂದಲೂ ಕಡಿಮೆ ಇರುವುದನ್ನು ಗಮನಿಸಬಹುದು.

ಪ್ರಾಚೀನ ಭಾರತದ ವೇದಗಳ ಕಾಲದಲ್ಲಿ ಸ್ತ್ರೀಯರು ಪುರುಷರಂತೆಯೇ ಸ್ಥಾನಮಾನಗಳನ್ನು ಹೊಂದಿದ್ದರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗುತ್ತದೆ. ಅದಕ್ಕೆ ಉದಾಹರಣೆಯಾಗಿ ಗಾರ್ಗಿ, ಮೈತ್ರೇಯಿ ಮತ್ತು ಲೋಪಮುದ್ರ ಅವರ ಹೆಸರುಗಳನ್ನು ಉಲ್ಲೇಖಿಸಲಾಗುತ್ತದೆ. ಸಮಾಜಶಾಸ್ತ್ರಜ್ಞ **ಪಂಡರಿನಾಥ ಪ್ರಭು** ಅವರ ಅಭಿಪ್ರಾಯದಂತೆ, ವೇದಗಳ ಕಾಲದಲ್ಲಿ ಸ್ತ್ರೀಯರು ಕೂಡ ಪುರುಷರಂತೆ ಶಿಕ್ಷಣ ಪಡೆಯುತ್ತಿದ್ದರು. ಪುರುಷರಂತೆಯೇ ಅವರಿಗೆ ಸಮಾನವಾದ ಸಾಮಾಜಿಕ ಅಂತಸ್ತು ಇತ್ತು. ಗಾರ್ಗಿಯರಂತಹ ಮಹಿಳೆಯರು ಯಾಜ್ಞವಲ್ಕ್ಯ ಋಷಿಯೊಂದಿಗೆ ಸಮಾನವಾದ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಯೋಗಾಭ್ಯಾಸವನ್ನು ಮಾಡುತ್ತಿದ್ದರು. ಇದರಿಂದ ಸಮಾನತೆಯಿತ್ತು ಎಂಬ ಅಭಿಪ್ರಾಯಕ್ಕೆ ಬರಲಾಗುತ್ತದೆ. ಆದರೆ, **ಆಲ್‌ಟೇಕರ್** ಅವರು ಈ ಅಭಿಪ್ರಾಯವನ್ನು ಪರಿಶೀಲಿಸಿ ಕೇವಲ ಉನ್ನತ ಜಾತಿಯ ಮತ್ತು ಶ್ರೀಮಂತ ಕುಟುಂಬದ ಮಹಿಳೆಯರಿಗೆ ಮಾತ್ರ ಸಮಾನಾವಕಾಶವಿತ್ತು ಎಂದು ಹೇಳುತ್ತಾರೆ. ಇತರ ಮಹಿಳೆಯರಿಗೂ ಸಮಾನ ಸ್ಥಾನಮಾನ ಇತ್ತೆಂಬುದಕ್ಕೆ ಯಾವುದೇ ಪುರಾವೆಗಳು ದೊರೆಯುವುದಿಲ್ಲ.

ಮಹಾಭಾರತದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಬದಲಾವಣೆ ಉಂಟಾಯಿತು. ಕೆಲವು ಸಂದರ್ಭಗಳಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಇನ್ನಿತರ ಸಂದರ್ಭಗಳಲ್ಲಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗುತ್ತಿತ್ತು. ಉದಾಹರಣೆಗೆ ದ್ರೌಪದಿಯು ಸ್ವಯಂವರದ ಪದ್ಧತಿಯ ಮೂಲಕ ತನಗೆ ಬೇಕಾದ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳಲು ಅವಕಾಶವನ್ನು ನೀಡಲಾಗುತ್ತದೆ. ಆದರೆ, ಅದೇ ದ್ರೌಪದಿಯನ್ನು ಪಾಂಡವರು ವಸ್ತುವಿನಂತೆ ಜೂಜಿನಲ್ಲಿ ಪಣವಾಗಿಡುತ್ತಾರೆ.

ರಾಮಾಯಣದಲ್ಲಿಯೂ ಇದೇ ರೀತಿಯ ಚಿತ್ರಣವು ಕಂಡುಬರುತ್ತದೆ. ಅಪಹರಣವಾದ ಸೀತೆಯನ್ನು ಹುಡುಕಿಕೊಂಡು ಲಂಕೆಗೆ ಹೋಗುವ ರಾಮ ಮತ್ತು ಲಕ್ಷ್ಮಣ ಆಕೆಯ ಜೀವವನ್ನು ರಕ್ಷಿಸಲು ಶ್ರಮಪಡುತ್ತಾರೆ. ಆದರೆ, ಅದೇ ಸೀತೆಯ ಶೀಲವನ್ನು ಶಂಕಿಸಿ ರಾಮನು ಕಾಡಿಗೆ ಕಳುಹಿಸುತ್ತಾನೆ. ಸೀತೆಯ ಬಗ್ಗೆ ಅಪಾರ ಗೌರವ ತೋರುವ ರಾಮ-ಲಕ್ಷ್ಮಣರು ರಾವಣನ ತಂಗಿಯಾದ ಶೂರ್ಪನಖಿಯನ್ನು ವಿರೂಪಗೊಳಿಸುತ್ತಾರೆ. ಆದುದರಿಂದ ರಾಮಾಯಣ ಹಾಗೂ ಮಹಾಭಾರತದ ಕಾಲದಲ್ಲಿ ಮಹಿಳೆಯರ ಸ್ಥಾನವು ಉತ್ತಮವಾಗಿತ್ತು ಎಂದು ಹೇಳಲು ಕಷ್ಟವಾಗುತ್ತದೆ. ಸಂದರ್ಭಾನುಸಾರವಾಗಿ ಆಕೆಯ ಸ್ಥಾನಮಾನವನ್ನು ಪುರುಷರು ತಮ್ಮ ಇಷ್ಟಬಂದ ಹಾಗೆ ನಿರ್ಧರಿಸುವುದು ಗೋಚರಿಸುತ್ತದೆ.

ಮನುಸ್ಮೃತಿಯಲ್ಲಿ ಇದೇ ರೀತಿಯ ಗೊಂದಲವು ಮುಂದುವರೆಯುತ್ತದೆ. ಮನುಸ್ಮೃತಿಯನ್ನು ರಚಿಸಿದ ಮನು ಎಂಬ ವ್ಯಕ್ತಿಯು ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂದು ಹೇಳುತ್ತಾನೆ. ದೇವರು ಸ್ತ್ರೀಯರಿಗೆ ಆಭರಣದ ಮೇಲಿನ ವ್ಯಾಮೋಹ, ಅಸತ್ಯ ಮತ್ತು ದುರ್ನಡತೆಗಳನ್ನು ಕೊಡುಗೆಯಾಗಿ ನೀಡಿದ್ದಾನೆ ಎಂದು ಹೇಳುವುದರ ಜೊತೆಗೆ ಕೆಲವು ಕಡೆ ಎಲ್ಲಿ ಮಹಿಳೆಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವರು ಇರುತ್ತಾನೆ ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾನೆ. ಅಂದರೆ ಪರಸ್ಪರ ವಿರುದ್ಧವಾದ ನಿಲುವುಗಳನ್ನು ತೆಗೆದುಕೊಳ್ಳುತ್ತಾನೆ. ಅದರಿಂದ ಒಟ್ಟಾರೆಯಾಗಿ ಮನುಸ್ಮೃತಿಯು ಮಹಿಳೆಯರ ಅಧೋಗತಿಗೆ ಕಾರಣವಾಗುತ್ತದೆ ಎಂದು ಅಭಿಪ್ರಾಯಪಡಲಾಗುತ್ತದೆ.

ಬೌದ್ಧರ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನವು ಸ್ವಲ್ಪ ಉತ್ತಮವಾಯಿತು ಎಂದು ಹೇಳಬಹುದು. ಗೌತಮಬುದ್ಧನ ಸಂಘಗಳಲ್ಲಿ ಮಹಿಳೆಯರಿಗೆ ಸದಸ್ಯತ್ವವನ್ನು ನಿರಾಕರಿಸುತ್ತಾರೆ. ಆದರೂ ಕೂಡ ಬೌದ್ಧ ಧರ್ಮದ ಆಚಾರ ವಿಚಾರಗಳು ಸಮಾನತೆಯನ್ನು ಪ್ರತಿಪಾದಿಸುವುದರಿಂದ ಮಹಿಳೆಯರ ಸ್ಥಾನಮಾನ ಸ್ವಲ್ಪಮಟ್ಟಿಗೆ ಉತ್ತಮವಾಯಿತು ಎಂದು ಹೇಳಬಹುದು. ಬೌದ್ಧ ರಾಜರುಗಳು ಮಹಿಳೆಯರಿಗೆ ಪ್ರಾಮುಖ್ಯತೆಯನ್ನು ನೀಡಿರುವುದು ಗೋಚರವಾಗುತ್ತದೆ. ಬೌದ್ಧ ದೊರೆ ಅಶೋಕನು ತನ್ನ ಮಗಳು ಸಂಘಮಿತ್ರೆಯನ್ನು ಬೌದ್ಧ ಮತ ಪ್ರಚಾರಕ್ಕಾಗಿ ಶ್ರೀಲಂಕಾ ದೇಶಕ್ಕೆ ಕಳುಹಿಸಿಕೊಡುತ್ತಾನೆ. ರಾಜ ಹರ್ಷವರ್ಧನನು ತನ್ನ ಸೋದರಿ ರಾಜ್ಯಶ್ರೀ ವಿಧವೆಯಾದರೂ ಸಹ ತನ್ನ ಆಸ್ಥಾನದಲ್ಲಿ ಆಕೆಗೆ ಪ್ರಮುಖ ಸ್ಥಾನ ನೀಡುತ್ತಾನೆ. ಚೀನಾದ ಯಾತ್ರಿಕ ಹ್ಯೂ ಯೆನ್ ತ್ಸಾಂಗ್‌ನನ್ನು ಆಕೆ ಗುರುವಾಗಿ ಸ್ವೀಕರಿಸಿ ಕಾನೂನು ಶಾಸ್ತ್ರವನ್ನು ಅಧ್ಯಯನ ಮಾಡಲು ಅವಕಾಶ ಮಾಡಿಕೊಡುತ್ತಾನೆ.

ಮಧ್ಯಯುಗೀನ ಭಾರತದ ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನವು ಮತ್ತಷ್ಟು ಅಧೋಗತಿಗೆ ಇಳಿಯಿತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಏಕೆಂದರೆ, ಇಸ್ಲಾಂನ ಧರ್ಮಗ್ರಂಥಗಳಲ್ಲಿಯೇ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆಯೆಂದು ಪರಿಗಣಿಸಲಾಗಿದೆ. ಇದರ ಪರಿಣಾಮವಾಗಿ ಭಾರತೀಯ ಮಹಿಳೆಯರಲ್ಲಿ ಬುರ್ಖಾ ಪದ್ಧತಿಯು ಜಾರಿಗೆ ಬಂದಿತು. ಸಾರ್ವಜನಿಕ ಪ್ರದೇಶದಲ್ಲಿ ಮಹಿಳೆಯರು ಮುಕ್ತವಾಗಿ ಸಂಚರಿಸದಂತೆ ನಿರ್ಬಂಧಿಸಲಾಯಿತು.

ಇಷ್ಟರಮಧ್ಯೆಯೂ ಮುಸ್ಲಿಂ ಮಹಿಳೆಯರಿಗೆ ಎರಡನೆಯ ವಿವಾಹವಾಗಲು ಅವಕಾಶವಿತ್ತು. ಆದರೆ, ಒಟ್ಟಾರೆಯಾಗಿ ಇಸ್ಲಾಂ ಧರ್ಮವು ಪುರುಷ ಪ್ರಧಾನ ಮೌಲ್ಯಗಳನ್ನೇ ಎತ್ತಿಹಿಡಿಯುವುದರಿಂದ ಸ್ತ್ರೀಯರ ಸ್ಥಾನಮಾನವು ಗಣನೀಯ ಪ್ರಗತಿಯನ್ನು ಸಾಧಿಸಲಿಲ್ಲ ಎಂದು ಹೇಳಬಹುದು. ಆದರೂ ಶ್ರೀಮಂತ ಕುಟುಂಬದ ಮಹಿಳೆಯರು, ರಾಜರ ಹೆಂಡತಿಯರು, ಕುಲೀನ ಸ್ತ್ರೀಯರು ರಾಜ್ಯ ಆಳಿರುವ ನಿದರ್ಶನಗಳೂ ಇವೆ. ಈ ಉದಾಹರಣೆಗಳನ್ನು ಇಟ್ಟುಕೊಂಡು ಮಹಿಳೆಯರ ಸ್ಥಾನಮಾನವು ಉತ್ತಮವಾಗಿತ್ತೆಂಬ ನಿರ್ಧಾರಕ್ಕೆ ಬರಲಾಗುವುದಿಲ್ಲ.

## 5.2 19 ಮತ್ತು 20 ನೇ ಶತಮಾನದಲ್ಲಿ ಮಹಿಳೆಯರ ಸ್ಥಾನಮಾನ

### ಜೀವನದ ಬಗೆಗಿನ ದೃಷ್ಟಿಕೋನದಲ್ಲಾದ ಬದಲಾವಣೆ

ಬ್ರಿಟೀಷರು ಭಾರತದಲ್ಲಿ ತಳವೂರಿದಾಗ ಪಾಶ್ಚಾತ್ಯ ಸಂಸ್ಕೃತಿ ತನ್ನ ಪ್ರಭಾವ ಬೀರತೊಡಗಿತು. ಪಾಶ್ಚಾತ್ಯರ ಜೀವನ

ಮೌಲ್ಯಗಳು ಭಾರತೀಯರ ಜೀವನ ಕ್ರಮದ ಮೇಲೆ ಪ್ರಭಾವ ಬೀರಿದವು. ಉದಾರ ತತ್ವಗಳು, ಜೀವನ ಮತ್ತು ಅದರ ಸಮಸ್ಯೆಗಳ ಕುರಿತು ಮಾತನಾಡುವ, ಟೀಕೆ – ವಿಮರ್ಶೆ ಮಾಡುವ ಸ್ವಾತಂತ್ರ್ಯ, ಇವು ಶಿಕ್ಷಿತ ಭಾರತೀಯರ ಮೇಲೆ ಪ್ರಭಾವ ಬೀರಿದವು. ಸಾಮಾಜಿಕ ಸ್ಥಾನಮಾನವು ದೈವದತ್ತವಾದುದು ಮತ್ತು ಅಪರಿವರ್ತನೀಯವಾದುದು ಎಂಬ ನಂಬಿಕೆಯ ಸ್ಪಷ್ಟ ನಿರಾಕರಣೆ ಹಾಗೂ ವ್ಯಕ್ತಿಯ ಕರ್ತವ್ಯಗಳ ಜೊತೆಗೆ ಹಕ್ಕುಗಳಿಗೂ ಸಮಾನ ಮಾನ್ಯತೆ ನೀಡಬೇಕೆಂಬ ಪಾಶ್ಚಾತ್ಯರ ನಿಲುವು–ಭಾರತೀಯರು ಸ್ತ್ರೀಯರ ಬಗೆಗೆ ಹೊಂದಿದ್ದ ಧೋರಣೆಯನ್ನು ಬದಲಿಸಿದವು.

**ಮಹಿಳೆಯರ ಸಮಾನತೆಗಾಗಿ ನಡೆದ ಸಮಾಜ ಸುಧಾರಕರ ಮತ್ತು ಸಮಾಜ ಸುಧಾರಣಾ ಚಳುವಳಿಗಳು.**

ರಾಜಾರಾಮ್ ಮೋಹನ್‌ರಾಯ್ ರವರು ಉಪನಿಷತ್ತುಗಳ ತತ್ವಗಳನ್ನು ಪ್ರಚಾರಮಾಡಲು "ಬ್ರಹ್ಮಸಮಾಜ"ವನ್ನು ಸ್ಥಾಪಿಸಿದರು. ಸತಿ ಪದ್ಧತಿ, ಪರದಾ ಪದ್ಧತಿ ಹಾಗೂ ಬಾಲ್ಯ ವಿವಾಹ ಪದ್ಧತಿಗಳ ವಿರುದ್ಧ ದನಿ ಎತ್ತಿದರು. ಇದರಿಂದ "1829ರ ಸತೀ ನಿಷೇಧ ಕಾಯ್ದೆ" ಜಾರಿಗೆ ಬರಲು ಸಾಧ್ಯವಾಯಿತು.

ಈಶ್ವರಚಂದ್ರ ವಿದ್ಯಾಸಾಗರರು ವಿಧವೆಯರ ಪುನರ್ವಿವಾಹ ನಿಷೇಧ ರದ್ಧತಿ ಹಾಗೂ ಸ್ತ್ರೀ ಶಿಕ್ಷಣದ ಬಗ್ಗೆ ಒತ್ತು ಕೊಟ್ಟರು, "1856ರ ವಿಧವಾ ಪುನರ್ವಿವಾಹ ಕಾಯ್ದೆ" ಜಾರಿಗೆ ಬರಲು ಕಾರಣರಾದರು.

ಮಹರ್ಷಿ ದಯಾನಂದ ಸರಸ್ವತಿ ಮತ್ತು ಅವರು ಸ್ಥಾಪಿಸಿದ "ಆರ್ಯ ಸಮಾಜ"ದ ಅನುಯಾಯಿಗಳು ವೇದಗಳಕಾಲದಲ್ಲಿದ್ದಂತೆ ಸ್ತ್ರೀ ಪುರುಷ ಸಮಾನತೆಯ ಬಗ್ಗೆ ಶ್ರಮಿಸಿದರು.

ಮಹರ್ಷಿ ಕರ್ವೆಯವರು ವಿಧವಾ ಪುನರ್ವಿವಾಹ ಹಾಗೂ ಸ್ತ್ರೀ ಶಿಕ್ಷಣದ ಬಗ್ಗೆ ಶ್ರಮಿಸಿದ್ದಲ್ಲದೆ "ಎಸ್. ಎನ್.ಡಿ.ಟಿ." ಮಹಿಳಾ ವಿಶ್ವವಿದ್ಯಾಲಯವನ್ನು ಪೂನಾದಲ್ಲಿ ಆರಂಭಿಸಿದರು.

ಸ್ವಾಮಿ ವಿವೇಕಾನಂದರು ಮತ್ತು ಅವರು ಸ್ಥಾಪಿಸಿದ "ಶ್ರೀ ರಾಮಕೃಷ್ಣ ಮಿಷನ್"ದ ಅನುಯಾಯಿಗಳು ಪುರುಷ –ಸ್ತ್ರೀಯರ ಸಮಾನತೆ ಸಾಧ್ಯವಾಗದೆ, ಮತ್ತು ಸ್ತ್ರೀಯರಿಗೆ ಸೂಕ್ತ ಶಿಕ್ಷಣ ನೀಡದೆ ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗುವುದಿಲ್ಲವೆಂದು ತಿಳಿದಿದ್ದರು.

ಮಹಾತ್ಮ ಜ್ಯೋತಿಬಾ ಫುಲೆ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಬದ್ರುದ್ದಿನ್ ತ್ಯಾಯಬ್ಜಿ ಮತ್ತು ರಾಷ್ಟ್ರಪಿತ ಗಾಂಧೀಜಿಯವರು ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಸಹಭಾಗಿತ್ವ ಹಾಗೂ ಸ್ತ್ರೀ ಶಿಕ್ಷಣದ ಹೆಚ್ಚಳದ ಬಗ್ಗೆ ಪರಿಶ್ರಮಿಸಿದರು.

ಭಾರತದ ಮೊದಲ ಶಿಕ್ಷಕಿ ಸಾವಿತ್ರಿ ಬಾ ಫುಲೆ, ನಿವೇದಿತಾ, ಆ್ಯನಿ ಬೆಸೆಂಟ್ ಮತ್ತು ಮಾರ್ಗರೇಟ್ ಕಸಿನ್ಸ್ ಹಾಗೂ ಭಾರತೀಯ ಮೂಲದ ಸರೋಜಿನಿ ನಾಯ್ಡು, ಪಂಡಿತತೆ ರಮಾಬಾಯಿ, ರಾನಡೆ, ತೋರುದತ್ ಮುಂತಾದವರು ಮಹಿಳೆಯರನ್ನು ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಲು ಯತ್ನಿಸಿದರು.

**ಮಹಿಳಾ ಶಿಕ್ಷಣಕ್ಕಾಗಿ ಕೈಗೊಂಡ ಕ್ರಮಗಳು**

ಬ್ರಿಟಿಷ್ ಸರ್ಕಾರದ ಆಡಳಿತದ ಅವಧಿಯಲ್ಲಿ ಮಹಿಳಾ ಶಿಕ್ಷಣದಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಕಾಣಲು ಸಾಧ್ಯವಾಯಿತು. ಬ್ರಿಟಿಷ್ ವೈಸ್‌ರಾಯ್ ಲಾರ್ಡ್‌ಡಾಲ್‌ಹೌಸಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಸೂಚಿಸಿದ್ದರು. 1882ರ "ಹಂಟರ್ ಶಿಕ್ಷಣ ಆಯೋಗ"ವು ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿತು. ಹೆಣ್ಣು ಮಕ್ಕಳಿಗೆ ಹೊಸ ಶಾಲೆಗಳನ್ನು ಆರಂಭಿಸಲು, 12 ವರ್ಷಕ್ಕಿಂತಲೂ ಹೆಚ್ಚು ವಯಸ್ಸಿನ ಹೆಣ್ಣು ಮಕ್ಕಳನ್ನು ಶಾಲೆಗಳಿಗೆ ಆಕರ್ಷಿಸಲು, ಶಾಲೆಗಳಿಗೆ ಮಹಿಳಾ ಅಧ್ಯಾಪಕಿಯರನ್ನು ನೇಮಕಮಾಡಲು, ಅಧ್ಯಾಪಕ ವೃತ್ತಿಯ ಶಿಕ್ಷಣಕ್ಕಾಗಿ ವಿಧವೆಯರು ಬರುವುದಿದ್ದರೆ ಅವರಿಗೆ ವಿಶೇಷ ವಿದ್ಯಾರ್ಥಿವೇತನ ನೀಡಲು ಈ ಆಯೋಗವು ಶಿಫಾರಸ್ಸು ಮಾಡಿತ್ತು. ಕಲ್ಕತ್ತಾ, ಮದ್ರಾಸ್ ಹಾಗೂ ಬೊಂಬಾಯಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶ ನೀಡದೇ ಇದ್ದರೂ 1882ರ ನಂತರ ಉನ್ನತ ಶಿಕ್ಷಣದ ಅವಕಾಶ ಅವರುಗಳಿಗೂ ಲಭ್ಯವಾಯಿತು.

ಕ್ರಿ.ಶ. 1882ರಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಅಧ್ಯಯನ ಮಾಡುವ ಕೇವಲ 6 ಮಂದಿ ವಿದ್ಯಾರ್ಥಿನಿಯರು ಮಾತ್ರ ಭಾರತದಲ್ಲಿದ್ದರು. ಆ ಬಳಿಕ ಶಿಕ್ಷಿತ ಸ್ತ್ರೀಯರ ಸಂಖ್ಯಾಪ್ರಮಾಣವು ನಿರಂತರವಾಗಿ ಏರುತ್ತಲೇ ಹೋಗಿದೆ ಎನ್ನಬಹುದು. 1854ರಲ್ಲಿ ದೇಶಾದಾದ್ಯಂತ ಕೇವಲ 25,000 ಹುಡುಗಿಯರು ಶಾಲೆಗಳಲ್ಲಿ ಸೇರ್ಪಡೆಗೊಂಡಿದ್ದರೆ, 1902ರಲ್ಲಿ ಈ ಸಂಖ್ಯೆ 2,56,000ಕ್ಕೆ ಏರಿತು. ಕ್ರಿ.ಶ.1901ರಲ್ಲಿ ಶಿಕ್ಷಿತ ಸ್ತ್ರೀಯರ ಸಂಖ್ಯಾ ಪ್ರಮಾಣವು ಶೇ.0.6ರಷ್ಟಿದ್ದು, 1941ರಲ್ಲಿ ಶೇ. 7.30ಕ್ಕೆ ಹೀಗೆ ಏರುತ್ತಲೇ ಹೋಗಿದೆ. ಕ್ರಿ.ಶ. 2001ರಲ್ಲಿ ಅದು ಶೇ.54ಕ್ಕೆ ಏರಿದೆ.

ಮಹಿಳಾ ಶಿಕ್ಷಣ ಹಾಗೂ ಮಹಿಳಾ ಉತ್ಕರ್ಷದ ದೃಷ್ಟಿಯಿಂದ ಹಲವಾರು ಮಹಿಳಾ ನೇತಾರರು ಪರಿಶ್ರಮಿಸಿದ್ದಾರೆ. ಮಹಿಳಾ ಏಳ್ಗೆಯ ದೃಷ್ಟಿಯಿಂದ ಮಹಿಳೆಯರೆ ನೇತೃತ್ವ ವಹಿಸಿ ದುಡಿದವರಲ್ಲಿ ಈ ಮುಂದಿನ ಹೆಸರುಗಳು ಸ್ಮರಣೀಯವಾಗಿವೆ. ಕರ್ನಾಟಕದ ಪಂಡಿತ ದಾದಾಬಾಯಿ, ಮಹಾರಾಷ್ಟ್ರದ ರಮಾಬಾಯಿ ರಾನಡೆ [ಎಂ.ಜಿ.ರ್‍ಯಾನಡೆಯವರ ಪತ್ನಿ]. ಭಾರತದ ಮೊದಲ ಶಿಕ್ಷಕಿ ಜ್ಯೋತಿ ಬಾ ಫುಲೆ ಬಂಗಾಳಿ ಬರಹಗಾರ್ತಿ ತೋರುದತ್, ಸ್ತ್ರೀಯರ ರಾಜಕೀಯ ನೇತಾರಳಾಗಿ ಆತ್ಮ ವಿಶ್ವಾಸ ಮೂಡಿಸಿದ ಕಮಲಾಬಾಯಿ ಚಟ್ಟೋಪಾಧ್ಯಾಯ, ಠಾಗೂರ್ ಕುಟುಂಬದ ಕಾದಂಬರಿಕಾರ್ತಿ ಸ್ವರ್ಣ ಕುಮಾರಿ ದೇವಿ, ಗಾಂಧೀಜಿಯರ ಅನುಯಾಯಿ ರಾಜಕುಮಾರಿ ಅಮೃತ್‌ಕೌರ್, "ಹೋಂ ರೂಲ್" ಚಳುವಳಿಯ ಆ್ಯನಿ ಬೆಸೆಂಟ್ ಬಹಳ ಮುಖ್ಯರು.

ಮಹಿಳೆಯರ ಜಾಗೃತಿ ಹಾಗೂ ಪ್ರಗತಿಗಾಗಿ ಹಲವಾರು ಮಹಿಳಾ ಸಂಘಟನೆಗಳು ಬ್ರಿಟಿಷರ ಕಾಲದಲ್ಲಿ ಮಹತ್ವದ ಪಾತ್ರ ವಹಿಸಿದವು. ಅವುಗಳೆಂದರೆ;

1) "ಆರ್ಯ ಮಹಿಳಾ ಸಮಾಜ" ಮತ್ತು "ಶಾರದ ಸದನ" – 1887,

2) "ಭಾರತ ಮಹಿಳಾ ಪರಿಷತ್" – 1904,

3) "ಭಾರತ ಸ್ತ್ರೀ ಮಹಾಮಂಡಲ" – 1910,

4) "ಸ್ತ್ರೀಯರ ಭಾರತೀಯ ಸಂಘ" – 1917

5) "ಅಖಿಲ ಭಾರತೀಯ ಮಹಿಳಾ ಪರಿಷತ್" – 1927

(6) "ಕಸ್ತೂರಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಪ್ರತಿಷ್ಠಾನ"– ಇವು ಮುಖ್ಯವಾದುವು.

ಮೇಲಿನ ಸಂಘಟನೆಗಳು ಮಹಿಳೆಯರ ಶಿಕ್ಷಣ, ಉದ್ಯೋಗ ಮತ್ತು ಸಾರ್ವಜನಿಕ ಭಾಗವಹಿಸುವಿಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದವು.

**ಉದ್ಯೋಗಗಳ ಕ್ಷೇತ್ರದಲ್ಲಿ ಸ್ತ್ರೀಯರು**

19ನೇ ಶತಮಾನದಲ್ಲಿ ಅಂತ್ಯದ ವೇಳೆಗೆ ಶಿಕ್ಷಿತ ಸ್ತ್ರೀಯರು ಕುಟುಂಬದ ಹೊರಗಿನ ಉದ್ಯೋಗಗಳ ಕ್ಷೇತ್ರಕ್ಕೆ ಮೊಟ್ಟಮೊದಲ ಬಾರಿಗೆ ಕಾಲಿರಿಸಿದರು. 1882ರ ಶಿಕ್ಷಣ ಆಯೋಗವು ಮಹಿಳಾ ಅಧ್ಯಾಪಕಿಯರನ್ನು ಸೃಷ್ಟಿಸಲು ಮಹಿಳಾ ತರಬೇತಿ ಸಂಸ್ಥೆಗಳನ್ನು ಆರಂಭಿಸಲು ಶಿಫಾರಸ್ಸು ಮಾಡಿತ್ತು. ಅಂತಹ ಸಂಸ್ಥೆಗಳ ಸ್ಥಾಪನೆಯೊಂದಿಗೆ ಹಲವಾರು ಸ್ತ್ರೀಯರು [ಬಾಲ ವಿಧವೆಯರೂ ಕೂಡ] ಅಧ್ಯಾಪಕ ವೃತ್ತಿಗೆ ಸೇರಿಕೊಂಡರು. ಕಾಲಕ್ರಮೇಣ ಶಿಕ್ಷಿತ ಸ್ತ್ರೀಯರು ಆಸ್ಪತ್ರೆಗಳಲ್ಲಿ ದಾದಿಯರಾಗಿ [ಅಪರೂಪಕ್ಕಾದರೂ ವೈದ್ಯರಾಗಿ] ಕಾರ್ಖಾನೆ ಕಛೇರಿಗಳಲ್ಲಿ ಲೆಕ್ಕಿಗರಾಗಿ, ಕಾರಕೂನರುಗಳಾಗಿ, ಬೆರಳಚ್ಚುದಾರರಾಗಿ, ಶಾಲಾಕಾಲೇಜುಗಳಲ್ಲಿ ಶಿಕ್ಷಕಿಯರಾಗಿ, ಕೈಗಾರಿಕೋದ್ಯಮದಲ್ಲಿ ಉದ್ಯೋಗಿಗಳಾಗಿ ಮತ್ತು ನಾನಾ ತೆರನಾದ ವೃತ್ತಿಗಳಲ್ಲಿ ದುಡಿಯತೊಡಗಿದರು. ಇದರಿಂದ ಸ್ತ್ರೀಯರ ಆರ್ಥಿಕ ಸ್ವಾವಲಂಬನೆಯ ಯುಗ ಮಂದಗತಿಯಲ್ಲಿ ಆರಂಭವಾದಂತಾಯಿತು.

**ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರ ಸಹಭಾಗಿತ್ವ**

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟೀಷರ ವಿರುದ್ಧ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಮತ್ತು ಕರ್ನಾಟಕದ ಕಿತ್ತೂರಿನ ರಾಣಿ ಚೆನ್ನಮ್ಮ ಮುಂತಾದವರು ನಡೆಸಿದ ಸಶಸ್ತ್ರ ಹೋರಾಟಗಳು ಇತಿಹಾಸ ಪ್ರಸಿದ್ಧವಾಗಿವೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಸಾಮಾನ್ಯ ಸ್ತ್ರೀಯರ ಸಮರ್ಥ ಸಹಭಾಗಿತ್ವ ಲಭಿಸುವಂತೆ ಮಾಡಿದ ಸಾಧನೆ ಗಾಂಧೀಜಿಯವರದು. ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಸತ್ಯಾಗ್ರಹಗಳಲ್ಲಿ ಮೆರವಣಿಗೆಗಳಲ್ಲಿ, ಪ್ರತಿಭಟನಾ ಸಭೆಗಳಲ್ಲಿ, ಧರಣಿ ಸತ್ಯಾಗ್ರಹಗಳಲ್ಲಿ ಮಹಿಳೆಯರು ಬಹುದೊಡ್ಡ ಸಂಖ್ಯೆಯಲ್ಲಿ ಭಾಗಿಗಳಾಗುತ್ತಿದ್ದರು. 1930ರಲ್ಲಿ ಅವರು ನಡೆಸಿದ "ಉಪ್ಪಿನ ಸತ್ಯಾಗ್ರಹ" [ಸುಮಾರು 17,000 ಮಂದಿ]ದಲ್ಲಿ 1942ರ "ಕ್ವಿಟ್ ಇಂಡಿಯಾ" ಆಂದೋಲನದಲ್ಲಿ, "ಸೇವಾದಳ ಶಿಬಿರಗಳಲ್ಲಿ ಸಹಸ್ರಾರು ಮಂದಿ ಸ್ತ್ರೀಯರೂ ಭಾಗವಹಿಸಿ ಬಂಧಿತರಾಗಿದ್ದರು.

"ಸ್ತ್ರೀಯರ ಭಾರತೀಯ ಸಂಘ"ದ ಸಂಸ್ಥಾಪಕಿಯರಲ್ಲಿ ಓರ್ವರಾದ ಶ್ರೀಮತಿ ಆ್ಯನಿಬೆಸೆಂಟ್ "ಹೋಂ ರೂಲ್ ಚಳುವಳಿ"ಯನ್ನು ಹೂಡಿ ಬಂಧಿತರಾದಾಗ ಅವರ ಬಿಡುಗಡೆಗಾಗಿ ಭಾರತೀಯ ಮಹಿಳೆಯರು ಮೆರವಣಿಗೆಯಲ್ಲಿ ದೇವಾಸ್ಥಾನಗಳಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿದ್ದರು. ಸಾರ್ವಜನಿಕ ಉದ್ದೇಶವೊಂದರ ಹಿನ್ನೆಲೆಯಲ್ಲಿ ಸ್ತ್ರೀಯರು ಸಾಮೂಹಿಕವಾಗಿ ಬೀದಿಗಿಳಿದ ಮೊಟ್ಟಮೊದಲನೆಯ ಪ್ರಕರಣವದು. "ಸ್ತ್ರೀಯರು ಭಾಗಿಗಳಾಗುತ್ತಿದ್ದರಿಂದಲೇ 'ಹೋಂ ರೂಲ್ ಚಳುವಳಿ'ಯು ಮೊದಲಿಗಿಂತ ಹತ್ತರಷ್ಟು ಬಲವಾಗಿದೆ" ಎಂದು 1917ರ ಕಾಂಗ್ರೆಸ್ ಅಧಿವೇಶನದಲ್ಲಿ (ಕಲ್ಕತ್ತಾ) ಅಧ್ಯಕ್ಷೀಯ ಭಾಷಣ ಮಾಡುತ್ತಾ ಆ್ಯನಿಬೆಸೆಂಟ್ ಸಾರಿ ಹೇಳಿದ್ದರು.

ಬ್ರಿಟೀಷರ ವಿರುದ್ಧದ ಸ್ವಾತಂತ್ರ್ಯಾಂದೋಲನದಲ್ಲಿ ಶ್ರೀಮತಿ ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ವಿಜಯಲಕ್ಷ್ಮೀ ಪಂಡಿತ್, ಲೀಲಾದೇವಿ ಮುನ್ಸಿ, ವೈಯಲೆಟ್ ಆಳ್ವ, ಮಣಿಬೆನ್ ಪಟೇಲ್, ಸುಶೀಲಾ ನಾಯರ್, ಶ್ರೀಮತಿ ಅವಂತಿಕಾ ಬಾಯಿ ಗೋಖಲೆ, ದುರ್ಗಾಬಾಯಿ, ಶ್ರೀಮತಿ ವೇದಾಂತ, ಕಮಲಮ್ಮ

ಸತ್ಯವತಿ–ಮುಂತಾದ ಅದೆಷ್ಟೋ ಮಹಿಳಾ ನಾಯಕಿಯರು ಭಾಗವಹಿಸಿ ಮಹಿಳೆಯರಿಗೆ ಪ್ರೇರಣೆ ನೀಡಿದ್ದಾರೆ. ಕರ್ನಲ್ ಲಕ್ಷ್ಮೀ ಎಂಬುವರಂತೂ ಸುಬಾಷ್‌ಚಂದ್ರಭೋಸ್‌ರವರ "ಭಾರತ ರಾಷ್ಟ್ರೀಯ ಸೈನ್ಯ"ದ ಮಹಿಳಾ ಘಟಕವೊಂದನ್ನು ಸಂಘಟಿಸಿದ್ದರು.

**ಮಹಿಳಾ ಸಮಾನತೆಯಲ್ಲಿ ಸಾಮಾಜಿಕ ಶಾಸನಗಳ ಪ್ರಭಾವ**

ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಯಾವುದೇ ಹಸ್ತಕ್ಷೇಪ ನಡೆಸದೆ ಕೇವಲ ತಮ್ಮ ರಾಜಕೀಯ ಪ್ರಭುತ್ವವನ್ನು ಉಳಿಸಿಕೊಳ್ಳಲು ಅಗತ್ಯವಿದ್ದಷ್ಟು ಕಾನೂನು ಕಾಯ್ದೆಗಳನ್ನು ಮಾತ್ರ ಕೈಗೊಳ್ಳುವುದು ಬ್ರಿಟೀಷ್ ಆಳರಸರ ಅಪ್ರಕಟಿತ ಧೋರಣೆಯಾಗಿತ್ತು. ಆದರೂ ಕೆಲವು ಸಾಮಾಜಿಕ ವಿಚಾರಗಳಲ್ಲಿ ಸ್ಥಳೀಯರ ಒತ್ತಾಯ ಹಾಗೂ ಆಗ್ರಹಗಳಿಗೆ ಮಣಿದು ಕೆಲವು ಸಾಮಾಜಿಕ ಶಾಸನಗಳನ್ನು ಜಾರಿಗೆ ತಂದರು.

ಸತಿ ಪದ್ಧತಿ, ವಿವಾಹದ ವಯಸ್ಸು, ಪುನರ್ವಿವಾಹ, ವಿವಾಹದಲ್ಲಿ ಸಂಗಾತಿಗಳ ಆಯ್ಕೆಯ ಸ್ವಾತಂತ್ರ್ಯ, ಅಂತರ್ಜಾತೀಯ ವಿವಾಹ, ವಿವಾಹದ ರೂಪ, ವಿವಾಹ ವಿಚ್ಛೇದನ, ವಿವಾಹವೊಂದರಲ್ಲಿ ಭಾಗಿಗಳಾಗಿರುವ ಸಂಗಾತಿಗಳ ಸಂಖ್ಯೆ, ವಿಧವಾ ಪುನರ್ವಿವಾಹ –ಇವೇ ಮುಂತಾದ ವಿಷಯಗಳನ್ನು ಒಳಗೊಂಡಿವೆ.

**ವಿವಾಹಕ್ಕೆ ಸಂಬಂದ ಪಟ್ಟ ಕಾನೂನುಗಳು**

1. 1829ರ "ಸತಿ ನಿಷೇಧ ಕಾಯ್ದೆ"
2. 1856ರ "ವಿಧವಾ ಪುನರ್ವಿವಾಹ ಕಾಯ್ದೆ"
3. 1872ರ ನಾಗರೀಕ ವಿವಾಹ ಕಾಯ್ದೆ,
4. 1929ರ ಬಾಲ್ಯ ವಿವಾಹ ನಿಷೇಧ ಕಾಯ್ದೆ, ಇತ್ಯಾದಿ.

**ಆಸ್ತಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳು**

1. ವಿವಾಹಿತ ಸ್ತ್ರೀಯರ ಆಸ್ತಿಯ ಕಾಯ್ದೆ– 1874
2. ಹಿಂದೂ ಮಹಿಳೆಯರ ಆಸ್ತಿ ಹಕ್ಕಿನ ಶಾಸನ – 1939.

ಒಟ್ಟು 19 ಮತ್ತು 20 ನೇ ಶತಮಾನದಲ್ಲಿ ಭಾರತೀಯ ಮಹಿಳೆಯರ ಸ್ಥಾನಮಾನದಲ್ಲಿ ಉಂಟಾದ ಬದಲಾವಣೆಗಳನ್ನು ಕೆಳಕಂಡಂತೆ ಸಾರಾಂಶ ರೂಪದಲ್ಲಿ ವಿವರಿಸಬಹುದು.

ಬ್ರಿಟೀಷರು ಭಾರತಕ್ಕೆ ಬಂದ ಮೇಲೆ ಸ್ತ್ರೀಯರ ಜೀವನದ ಮೇಲೆ ಪರಿಣಾಮ ಬೀರುವ ಅವರ ಸ್ಥಾನಮಾನಗಳನ್ನು ಉತ್ತಮಪಡಿಸುವಂತಹ ಕೆಲವು ಕಾನೂನುಗಳು ಜಾರಿಗೆ ಬಂದವು. ಇಂಗ್ಲಿಷ್ ಶಿಕ್ಷಣ ಪಡೆದ ಮಹಾತ್ಮ ಗಾಂಧೀಜಿ, ರಾಜಾರಾಂ ಮೋಹನ್‌ರಾಯ್, ಕೇಶವಚಂದ್ರ ವಿದ್ಯಾಸಾಗರ, ಡಾ. ಬಿ.ಆರ್. ಅಂಬೇಡ್ಕರ್, ಪಂಡಿತೆ ರಮಾಬಾಯಿ, ಮಹಾದೇವ ಗೋವಿಂದ ರ‍್ಯಾನಡೆ ಮೊದಲಾದವರು ಮಹಿಳೆಯರ ಸ್ಥಾನಮಾನ ಕುರಿತು ಚಿಂತಿಸಿದರು. ಬ್ರಿಟೀಷ್ ಸರ್ಕಾರದ ಮೇಲೆ ಒತ್ತಡ ತಂದು ಮಹಿಳಾಪರವಾದ ಕಾನೂನುಗಳನ್ನು ಜಾರಿಗೆ ತರಲು ಶ್ರಮಿಸಿದರು.

ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರು ಮಹಿಳೆಯರ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಭಾರತದ ಇತಿಹಾಸವು ಮರೆಯುವಂತಿಲ್ಲ. ಪಾಶ್ಚಿಮಾತ್ಯ ಶಿಕ್ಷಣ, ಚಿಂತನೆ, ಬ್ರಿಟೀಷ್ ಆಡಳಿತಗಾರರ ಬೆಂಬಲದಿಂದಾಗಿ ಮಹಿಳೆಯರ ಪರವಾಗಿ ಅನೇಕ ಶಾಸನಗಳು ಜಾರಿಗೆ ಬಂದವು. ಭಾರತದಲ್ಲಿ ಸತಿ ಪದ್ಧತಿಯು ಅತ್ಯಂತ ಅಮಾನುಷವಾಗಿತ್ತು. ಸತಿ ಪದ್ಧತಿ ಎಂದರೆ ಗಂಡ ಸತ್ತ ನಂತರ ಮಹಿಳೆಯು ಗಂಡನ ಜೊತೆಯಲ್ಲಿಯೇ ಜೀವಂತವಾಗಿ ಚಿತೆ ಏರಿ ದೇಹತ್ಯಾಗ ಮಾಡುವುದು. ಅದನ್ನು ನಿಷೇಧಿಸಿ ಸತಿ ನಿಷೇಧ ಕಾಯ್ದೆಯು ಜಾರಿಗೆ ಬಂದಿತು.

ಬ್ರಿಟೀಷರು ಪುರುಷರು ಮತ್ತು ಸ್ತ್ರೀಯರಿಗೆ ಸಮಾನವಾದ ಶಿಕ್ಷಣ ಹಕ್ಕನ್ನು ನೀಡಿದರು. ದೇಶದ ವಿವಿಧ ಭಾಗಗಳಲ್ಲಿ ಮಹಿಳೆಯರಿಗಾಗಿ ಶಾಲಾಕಾಲೇಜುಗಳನ್ನು ತೆರೆಯಲಾಯಿತು. ಇದರಿಂದ ಮಹಿಳೆಯರು ಶಿಕ್ಷಣವನ್ನು ಪಡೆದು ಸಾರ್ವಜನಿಕ ಜೀವನದಲ್ಲಿ ಪಾಲ್ಗೊಳ್ಳುವಂತಾಯಿತು. ಒಂದು ರೀತಿಯಲ್ಲಿ ಸ್ಥಗಿತಗೊಂಡಿದ್ದ ಮಹಿಳೆಯರ ಸ್ಥಾನಮಾನವು ಚಲನಶೀಲವಾಯಿತು.

ಇದೇ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಭಾರತೀಯರು ಹೋರಾಟವನ್ನು ಆರಂಭಿಸಿದರು. ಗಾಂಧೀಜಿಯವರ ನಿರಂತರ ಪ್ರಯತ್ನದ ಫಲವಾಗಿ ಲಕ್ಷಾಂತರ ಮಹಿಳೆಯರು ಸ್ವಾತಂತ್ರ್ಯದ ಆಂದೋಲನದಲ್ಲಿ ಭಾಗವಹಿಸಿದರು. ಇದರಿಂದ ಮಹಿಳೆಯರು ತಮ್ಮ ಮನೆಯ ಚೌಕಟ್ಟನ್ನು ತೊರೆದು ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಹೆಚ್ಚಾಗಿ ಕಾಣಿಸಲಾರಂಭಿಸಿದರು. ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಿಳೆಯರ ಪಾತ್ರ ಹೆಚ್ಚಾಯಿತು.

### 5.3 ಸ್ವಾತಂತ್ರ್ಯಾನಂತರದಲ್ಲಿ ಮಹಿಳಾ ಚಳುವಳಿ

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಬಹಳಷ್ಟು ಸುಧಾರಿಸಿದೆ. ಸ್ತ್ರೀಯರು ಇಂದು ಸಮಾನತೆಯತ್ತ ಸಾಗಿದ್ದಾರೆ. ಇಲ್ಲಿ ಸಂಭವಿಸಿದ ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳ ಪರಿಣಾಮವಾಗಿ ಸ್ತ್ರೀಯರಿಗೆ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನಾವಕಾಶಗಳು ಲಭಿಸತೊಡಗಿವೆ. ಸ್ತ್ರೀಯರಲ್ಲಿ ಉಂಟಾದ ಜಾಗೃತಿಯಿಂದ ಸ್ವಲ್ಪ ಮಟ್ಟಿಗೆ ಸ್ತ್ರೀಯರ ಶೋಷಣೆ ಕಡಿಮೆಯಾಗಿದೆ. ಇದಕ್ಕೆ ಪೂರಕವಾಗಿ ಎಂಬಂತೆ ಕೆಲವು ಮಹಿಳಾ ಸಂಘಟನೆಗಳೂ ಅಲ್ಲಲ್ಲಿ ಕಾರ್ಯಾಚರಣೆ ಆರಂಭಿಸಿದವು. ಸರ್ಕಾರದ ಕಡೆಯಿಂದ ಸ್ತ್ರೀಯರ ಒಟ್ಟು ಪಾತ್ರ ಹಾಗೂ ಪರಿಸ್ಥಿತಿ ಕುರಿತಾಗಿ ರಾಷ್ಟ್ರೀಯ ನೀತಿಯನ್ನು ರೂಪಿಸುವ, ಸಂಶೋಧನೆಗಳನ್ನು ಕೈಗೊಳ್ಳುವ, "ಮಹಿಳಾ ಅಧ್ಯಯನ ಕೇಂದ್ರ"ಗಳನ್ನು ಸ್ಥಾಪಿಸುವ, "ಮಹಿಳಾ ಆಯೋಗ"ವನ್ನು ರಚಿಸುವ ಪ್ರಯತ್ನಗಳೂ ನಡೆದವು. 1975ರಲ್ಲಿ ಆಚರಿಸಲಾದ "ಅಂತರಾಷ್ಟ್ರೀಯ ಮಹಿಳಾ ವರ್ಷ"ದ ಕಾರ್ಯಕ್ರಮಗಳು ಹಾಗೂ ಯುನೆಸ್ಕೊವತಿಯಿಂದ ಕೈಗೊಳ್ಳಲಾದ ಹಲವಾರು ಚಟುವಟಿಕೆಗಳು ಸ್ತ್ರೀಯರ ಅಂತಸ್ತು, ಪಾತ್ರ ಹಾಗೂ ಸಮಸ್ಯೆಗಳ ಕುರಿತಾಗಿ ವಿಶೇಷ ಅರಿವನ್ನು ಮೂಡಿಸಿದವು. ಸ್ವತಂತ್ರ ಭಾರತದಲ್ಲಿ ಬದಲಾಗುತ್ತಾ ಹೊರಟಿರುವ ಸ್ತ್ರೀಯರ ಸ್ಥಾನ-ಮಾನವನ್ನು ಈ ಹಿನ್ನೆಲೆಯಲ್ಲಿಯೇ ಅರ್ಥೈಸಿಕೊಳ್ಳಬೇಕಾಗುವುದು.

ಭಾರತವು ಸ್ವತಂತ್ರಗೊಂಡ ಸಂದರ್ಭದಲ್ಲಿದ್ದ ಸ್ತ್ರೀಯರ ಸ್ಥಾನಮಾನವು ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ಸುಧಾರಿಸುತ್ತಿರುವುದು ಕಂಡು ಬಂದಿದೆ. ಇದನ್ನು ಮಹಿಳೆಯರ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ

ಶಾಸನಗಳು, ಶಿಕ್ಷಣ, ಆರ್ಥಿಕತೆ ಅಥವಾ ಉದ್ಯೋಗ, ಹಾಗೂ ರಾಜಕೀಯ ಸ್ಥಾನಮಾನದ ಮೂಲಕ ಅರ್ಥಮಾಡಿಕೊಳ್ಳುವುದು.

## 1. ಸಂವಿಧಾನ ಹಾಗೂ ಸ್ತ್ರೀಯರ ಸ್ಥಾನಮಾನ

**ಸಂವಿಧಾನದಲ್ಲಿ ಸಮಾನತೆ :**

ಸ್ವತಂತ್ರ ಭಾರತದ ಸಂವಿಧಾನವು ಲಿಂಗತಾರತಮ್ಯ ಮಾಡದೆ ಸ್ತ್ರೀಯರಿಗೂ ಕೂಡ ಪುರುಷರಿಗೆ ಸಮಾನವಾದ ವೈಯಕ್ತಿಕ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು, ವಿಚಾರ ಸ್ವಾತಂತ್ರ್ಯ, ಧಾರ್ಮಿಕ, ವೈವಾಹಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಸ್ವಾತಂತ್ರ್ಯ – ಹೀಗೆ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ನೀಡುವುದು. ಸಮಸ್ಯೆ ಸಂಕಷ್ಟಗಳಿಗೆ ಸಂವಿಧಾನಿಕ ಪರಿಹಾರಗಳನ್ನು ಕಂಡುಕೊಳ್ಳುವ ಹಕ್ಕುಗಳನ್ನು ಅದು ನೀಡುವುದು. "ವಯಸ್ಕ ಮತದಾನದ ಹಕ್ಕನ್ನು" ಸ್ತ್ರೀಯರಿಗೂ ನೀಡಿದೆ. ಅವರನ್ನು ಯಾವುದೇ ದೃಷ್ಟಿಯಿಂದ "ದ್ವಿತೀಯ ದರ್ಜೆಯ ಪ್ರಜೆ"ಗಳನ್ನಾಗಿ ಮಾಡಿಲ್ಲ.

**ಸಾಮಾಜಿಕ ಶಾಸನಗಳು :**

ಬ್ರಿಟಿಷರ ಕಾಲದಲ್ಲಿ ಸ್ತ್ರೀಯರ ಹಿತದೃಷ್ಟಿಯಿಂದ ಕೈಗೊಳ್ಳಲಾಗಿದ್ದ ಕೆಲವು ಸಾಮಾಜಿಕ ಶಾಸನಗಳನ್ನು ತಿದ್ದುಪಡಿ ಮಾಡುವುದರ ಜೊತೆಗೆ ಅದೇ ಉದ್ದೇಶದಿಂದ ಸ್ವಾತಂತ್ರ್ಯ ಬಂದ ಮೇಲೆ ಹೊಸ ಕಾನೂನುಗಳನ್ನು ಜಾರಿ ಮಾಡಲಾಗಿದೆ.

1. **ಹಿಂದೂ ವಿವಾಹ ಕಾಯ್ದೆ**

ಈ ಶಾಸನವು ಬಹುಪತಿತ್ವ, ಬಹುಪತ್ನಿತ್ವ, ದ್ವಿಪತ್ನಿತ್ವ ಮತ್ತು ಬಾಲ್ಯ ವಿವಾಹದ ಆಚರಣೆಗಳನ್ನು ನಿಷೇಧಿಸುವುದು ಹಾಗೂ ಸ್ತ್ರೀಯರಿಗೂ ವಿಚ್ಛೇದನದ ಹಾಗೂ ಪುನರ್ವಿವಾಹದ ಹಕ್ಕುಗಳನ್ನು ನೀಡುವುದು. ಸ್ತ್ರೀ – ಪುರುಷ ಸಮಾನತೆಗೆ ಈ ಶಾಸನವು ಪೂರಕವಾಗಿದೆ.

2. **ಹಿಂದೂ ಉತ್ತರಾಧಿಕಾರ ಕಾಯ್ದೆ**

ಇದು ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀಯರಿಗೂ ಉತ್ತರಾಧಿಕಾರದ ಹಕ್ಕು ನೀಡುವುದು.

3. **ಹಿಂದು ದತ್ತು ಮತ್ತು ಜೀವನಾಂಶ ಕಾಯ್ದೆ**

ಈ ಕಾಯ್ದೆಯು ದತ್ತು ಮಕ್ಕಳನ್ನು ಪಡೆಯುವ ಹಕ್ಕನ್ನು ಮತ್ತು ಗಂಡನಿಂದ ನಿರಾಕರಣೆಗೊಂಡ ಅಥವಾ ಪರಿತ್ಯಕ್ತಳಾದ ಪತ್ನಿಗೆ ಆತನಿಂದ ಜೀವನಾಂಶ ಪಡೆಯುವ ಹಕ್ಕನ್ನು ನೀಡುತ್ತದೆ.

4. **ವಿಶೇಷ ವಿವಾಹ ಕಾಯ್ದೆ**

ಅಂತರ್ಜಾತೀಯ ವಿವಾಹ, ಪ್ರೇಮ ವಿವಾಹ ಹಾಗೂ ವಿವಾಹದ ನೋಂದಣಿ – ಇತ್ಯಾದಿಗಳಿಗೆ ಅವಕಾಶವೀಯುವ ಈ ಕಾಯ್ದೆಯು ವೈವಾಹಿಕ ವಿಚಾರಗಳಲ್ಲಿ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ಸ್ತ್ರೀಯರಿಗೂ ನೀಡುವುದು.

5. **ವರದಕ್ಷಿಣೆ ನಿಷೇಧ ಕಾಯ್ದೆ**

ಈ ಕಾಯ್ದೆಯಂತೆ ಸ್ತ್ರೀಯರ ಶೋಷಣೆಗೆ ಕಾರಣವಾದ ವರದಕ್ಷಿಣಾ ಪಿಡುಗನ್ನು ನಿಷೇಧಿಸಲಾಗಿದೆ.

6. **ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ :**

ಸ್ತ್ರೀಯರ ಅಪಹರಣ ಮತ್ತು ವೇಶ್ಯಾವೃತ್ತಿಗೆ ಅವರನ್ನು ನೂಕುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.

7. **ವೈದ್ಯಕೀಯ ಗರ್ಭನಿವಾರಣಾ ಕಾಯ್ದೆ**

ಭ್ರೂಣ ಹತ್ಯೆಯನ್ನು ತಡೆಗಟ್ಟಲು ಜಾರಿಗೆ ತರಲಾಗಿದೆ.

8. **ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ**

ಸ್ತ್ರೀಯರ ಮೇಲಾಗುವ ಅತ್ಯಾಚಾರ-ಅನಾಚಾರಗಳನ್ನು ತಡೆಗಟ್ಟುವುದು.

9. **ಕುಟುಂಬ ನ್ಯಾಯಾಲಯ ಕಾಯ್ದೆ**

ಕೌಟುಂಬಿಕ ವಿಚಾರಗಳಲ್ಲಿ ವಿವಾದಗಳಲ್ಲಿ ಸ್ತ್ರೀಯರಿಗೆ ನ್ಯಾಯವೊದಗಿಸಲು ಕಾರ್ಯಗತಗೊಳಿಸಲಾಗಿದೆ.

ಸ್ವಾತಂತ್ರ್ಯಾನಂತರ ಬಾಬಾಸಾಹೇಬ್ ಅಂಬೇಡ್ಕರರಿಂದ ರೂಪುಗೊಂಡ ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಮಹಿಳೆಯರಿಗೆ ಸಮಾನತೆಯನ್ನು ನೀಡಲಾಗಿದೆ. ಅನೇಕ ಪ್ರಮುಖ ಕಾಯಿದೆಗಳನ್ನು ಜಾರಿಗೆ ತಂದು ಮಹಿಳೆಯರ ಹಿತಾಸಕ್ತಿಯನ್ನು ರಕ್ಷಿಸಲಾಗಿದೆ. 1961ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಯಿತು. 1984ರ ಕೌಟುಂಬಿಕ ನ್ಯಾಯಾಲಯದ ಕಾನೂನಿನ ಅಡಿಯಲ್ಲಿ ಕುಟುಂಬಕ್ಕೆ ಸಂಬಂಧಿಸಿದ ಯಾವುದೇ ಘರ್ಷಣೆಗಳನ್ನು ಕೂಡಲೇ ಬಗೆಹರಿಸುವಂತೆ ಸೂಚಿಸಲಾಗಿದೆ. ಭಾರತೀಯ ಮಹಿಳೆಯರು ಪಾರ್ಲಿಮೆಂಟ್ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದರು. ಶ್ರೀಮತಿ ಇಂದಿರಾಗಾಂಧೀಯವರು ಪ್ರಧಾನಮಂತ್ರಿಯಾಗಿ ಕಾರ್ಯನಿರ್ವಹಿಸಿದರೆ, ಮಾಯಾವತಿ, ಜಯಲಲಿತಾ ಮೊದಲಾದವರು ಮುಖ್ಯಮಂತ್ರಿಗಳಾಗಿ, ಪಕ್ಷದ ನಾಯಕಿಯರಾಗಿ ಗಮನ ಸೆಳೆದಿದ್ದಾರೆ.

ಹೀಗೆ ಕಾಲದಿಂದ ಕಾಲಕ್ಕೆ ಭಾರತೀಯ ಮಹಿಳೆಯ ಸ್ಥಾನಮಾನವು ವಿವಿಧ ನೆಲೆಗಟ್ಟಿನಲ್ಲಿ ಬದಲಾಗುತ್ತಾ ಬಂದಿರುವುದನ್ನು ಗುರುತಿಸಬಹುದಾಗಿದೆ. ಆದರೂ ಸಹ ಮಹಿಳೆಯರು ಪುರುಷರ ಜತೆ ಸಮಾನರು ಎಂದು ಪರಿಗಣಿಸುವ ಕನಸು ನನಸಾಗಿಲ್ಲ. ದಿನೇ ದಿನೇ ಹೆಚ್ಚಾಗುತ್ತಿರುವ ಮಹಿಳಾ ದೌರ್ಜನ್ಯದಂತಹ ಪ್ರಕರಣಗಳು ಭಾರತೀಯ ಸಮಾಜದಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಮರುಚಿಂತಿಸುವಂತೆ ಮಾಡಿದೆ.

## 5.4 ಮಹಿಳಾ ಸಬಲೀಕರಣದ ಅರ್ಥ ಮತ್ತು ಕಾರಣವಾಗುತ್ತಿರುವ ಅಂಶಗಳು (2001)

ಸಮಾಜದಲ್ಲಿ ನಿರಂತರವಾಗಿ ಮಹಿಳೆಯರನ್ನು ದುರ್ಬಲರು, ಅಬಲೆಯರು, ಅವಲಂಬಿತರು ಎಂದು ಪರಿಗಣಿಸಲಾಗಿತ್ತಲ್ಲದೆ ದ್ವಿತೀಯ ದರ್ಜೆ ಪ್ರಜೆಗಳು ಎಂಬಂತೆಯೇ ಅವರನ್ನು ನೋಡಿಕೊಳ್ಳಲಾಯಿತು. ಕಾಲಾನಂತರ ಅಂದರೆ 20 ನೇ ಶತಮಾನದ ನಂತರ ಮಹಿಳೆಯರ ಬಗೆಗಿನ ದೃಷ್ಟಿಕೋನದಲ್ಲಿ ಬದಲಾವಣೆ ಕಂಡು ಅವರ

ಕೆಲವು ಅನರ್ಹತೆಗಳು ಕಣ್ಮರೆಯಾಗಿ ಪುರುಷರಿಗೆ ಸರಿಸಮಾನವಾದ ಅಧಿಕಾರವನ್ನು ಅಥವಾ ಹಕ್ಕುಗಳನ್ನು ಮಹಿಳೆಯರಿಗೂ ನೀಡಲಾಯಿತು. ಇದನ್ನೇ ನಾವು ಸಬಲೀಕರಣ ಎಂದು ಕರೆಯಬಹುದು.

ಸಬಲೀಕರಣ ಕಲ್ಪನೆಯನ್ನು ಬಡವರು ಮತ್ತು ಹಿಂದುಳಿದ ವರ್ಗಗಳ ಸ್ಥಿತಿಯಲ್ಲಿ ಏನು ಬದಲಾವಣೆಯಾಗಬೇಕು ಎಂಬುದನ್ನು ಅರಿಯುವ ಸಾಧನವಾಗಿ ಬಳಸಲಾಗುತ್ತದೆ. ಸಬಲೀಕರಣ ಎಂದರೆ ಮಹಿಳೆಯರನ್ನು ಸಬಲಗೊಳಿಸಲು ಅಧಿಕಾರ ಕೊಡುವುದನ್ನು ಸೂಚಿಸುತ್ತದೆ. ಮಹಿಳೆಯರ ಜೀವನವನ್ನು ನಿಯಂತ್ರಿಸುತ್ತಾ ಬಂದಿರುವ ಇತರರಿಂದ ಮುಕ್ತಿ ಪಡೆದುಕೊಳ್ಳಲು ಹಾಗು ತಮ್ಮ ಜೀವನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಯನ್ನು ತಾವೇ ನಿಯಂತ್ರಿಸಿಕೊಳ್ಳಲು ಸೂಕ್ತವಾದ ಅಧಿಕಾರವನ್ನು ನೀಡುವುದೇ ಸಬಲೀಕರಣ.

ಮಹಿಳಾ ಸಬಲೀಕರಣಕ್ಕೆ ಕಾರಣವಾಗುತ್ತಿರುವ ಹಲವಾರು ಅಂಶಗಳನ್ನು ಗುರ್ತಿಸಬಹುದು ದ್ವಿತೀಯ ದರ್ಜೆ ಪ್ರಜೆ ಎಂದೇ ಬಿಂಬಿತವಾಗಿರುವ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ದೃಷ್ಟಿಯಿಂದ ಪುರುಷರ ದಬ್ಬಾಳಿಕೆಗೆ ಒಳಗಾಗಿ ನಿರಂತರವಾಗಿ ಶೋಷಣೆಗೆ ಸಿಲುಕಿರುವ ಮಹಿಳೆಯರನ್ನು ರಕ್ಷಿಸಲು, ಲಿಂಗ ತಾರತಮ್ಯವನ್ನು ಹೋಗಲಾಡಿಸಲು, ಮಹಿಳೆಯರ ದೈಹಿಕ ಶ್ರಮ ಕಡಿಮೆ ಮಾಡಿ ಸ್ವಾವಲಂಬಿಗಳಾಗುವಂತೆ ಮಾಡುವ ಹಿತದಿಂದ ಹಾಗೂ ಹೆಚ್ಚುತ್ತಿರುವ ಶೋಷಣೆಯಿಂದ ಮುಕ್ತಿಯನ್ನು ಪಡೆಯಲು ಮಹಿಳೆಯರನ್ನು ಸಮಾಜದ ಮುಕ್ತವಾಹಿನಿಗೆ ತರಲು ಮಹಿಳಾ ಸಬಲೀಕರಣವನ್ನು ಜಾರಿಗೆ ತರಲಾಯಿತು.

## ಅಭ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಭಾರತೀಯ ಸಮಾಜವು __________ ಪ್ರಧಾನ ಸಮಾಜವಾಗಿದೆ.

2) ಮನುಸ್ಮೃತಿಯನ್ನು ರಚಿಸಿದವರು __________

3) ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡಿದ ಬ್ರಿಟೀಷ್ ವೈಸರಾಯ್ __________

4) ವರದಕ್ಷಿಣೆ ನಿಷೇದ ಕಾನೂನನ್ನು ಜಾರಿಗೆ ತಂದ ವರ್ಷ __________

5) ಬ್ರಿಟೀಷರ ವಿರುದ್ಧ ಹೋರಾಡಿದ ಕಿತ್ತೂರಿನ ರಾಣಿ __________

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಮಹಿಳಾ ಸಬಲೀಕರಣ ಎಂದರೇನು?

2) ಹೋಂ ರೂಲ್ ಚಳುವಳಿಯನ್ನು ಆರಂಭಿಸಿದವರು ಯಾರು?

3) ಸತಿಸಹಗಮನ ಪದ್ಧತಿ ಎಂದರೇನು?

4) ಭಾರತ ರಾಷ್ಟ್ರೀಯ ಸೈನ್ಯದ ಮಹಿಳಾ ಘಟಕದ ಮುಖ್ಯಸ್ಥರು ಯಾರು?

5) ಭಾರತದ ಮೊದಲ ಮಹಿಳಾ ಪ್ರಧಾನಮಂತ್ರಿ ಯಾರು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಬ್ರಿಟೀಷರ ಕಾಲದಲ್ಲಿ ಮಹಿಳೆಯರ ಜಾಗೃತಿ ಮತ್ತು ಪ್ರಗತಿಗಾಗಿ ಹೋರಾಡಿದ ಮಹಿಳಾ ಸಂಘಟನೆಗಳಾವುವು?

2) ಹಂಟರ್ ಶಿಕ್ಷಣ ಆಯೋಗದಲ್ಲಿ ಮಹಿಳಾ ಶಿಕ್ಷಣಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ತಿಳಿಸಿ.

3) ಮಹಿಳೆಯರ ಸಮಾನತೆಗಾಗಿ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.

4) ಮಹಿಳೆಯರ ಆಸ್ತಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ.

5) ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಾಂದೋಲನದಲ್ಲಿ ಭಾಗವಹಿಸಿದ ಮಹಿಳೆಯರನ್ನು ಹೆಸರಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.
2. 19 ಮತ್ತು 20 ನೇ ಶತಮಾನದಲ್ಲಿ ಮಹಿಳೆಯರ ಸ್ಥಾನಮಾನ ಬಗ್ಗೆ ಟಿಪ್ಪಣಿ ಬರೆಯಿರಿ.
3. ಮಹಿಳಾ ಸಬಲೀಕರಣದ ಪ್ರಾಮುಖ್ಯತೆಯನ್ನು ತಿಳಿಸಿ.
4. ಮಹಿಳಾ ಸಬಲೀಕರಣಕ್ಕೆ ಕಾರಣವಾಗುತ್ತಿರುವ ಅಂಶಗಳನ್ನು ಪಟ್ಟಿ ಮಾಡಿ.

**ಸಲಹಾತ್ಮಕ ಚಟುವಟಿಕೆಗಳು**

✦ ಮಹಿಳಾ ಅಂತರಾಷ್ಟ್ರೀಯ ದಿನಾಚಾರಣೆಯ ಮಹತ್ವ ಕುರಿತು ಪ್ರಬಂಧ ಬರೆಸುವುದು.

✦ ಮಹಿಳೆಯರ ವಿರುದ್ಧದ ತಾರತಮ್ಯದ ಕುರಿತಾದ ಚರ್ಚೆ ನಡೆಸುವುದು.

✦ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಯೋಜನೆಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ.

✦ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಈ ಉಕ್ತಿಯನ್ನು ಸೂಕ್ತ ನಿದರ್ಶನಗಳೊಂದಿಗೆ ತರಗತಿಯಲ್ಲಿ ಪ್ರಸ್ತುತ ಪಡಿಸಿ.

# ಅಧ್ಯಾಯ-6

# ಬುಡಕಟ್ಟು ಸಮುದಾಯಗಳು ಮತ್ತು ಬದಲಾವಣೆ

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಐತಿಹಾಸಿಕ ನೋಟ
- ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುತ್ತಿರುವ ಬದಲಾವಣೆಗಳು ಮತ್ತು ಅವುಗಳಿಗೆ ಕಾರಣವಾಗುವ ಅಂಶಗಳು.
- ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾತ್ರ.

**ಪೀಠಿಕೆ :**

ಸಾಮಾನ್ಯವಾಗಿ ಒಂದು ಪ್ರದೇಶದ ಮೂಲ ನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಬುಡಕಟ್ಟು ಎಂಬ ಪದವನ್ನು ನಾಗರೀಕತೆಯಿಂದ ದೂರವಿರುವ ಮತ್ತು ಹಿಂದುಳಿದವ ಎಂಬುದನ್ನು ಸೂಚಿಸಲು ಬಳಸುತ್ತಾರೆ. ನಾಗರಿಕ ಸಮಾಜದಿಂದ ದೂರವಿದ್ದು, ದಟ್ಟವಾದ ಕಾಡುಗಳ ಮಧ್ಯದಲ್ಲಿ ವಾಸಿಸುವ ಜನರಿಗೆ ಸಾಮಾನ್ಯ ಅರ್ಥದಲ್ಲಿ ಬುಡಕಟ್ಟುಗಳೆಂದು ಕರೆಯುತ್ತಾರೆ. ಇವರನ್ನು ಅಲೆಮಾರಿ ಜನಾಂಗ, ಅನಾಗರಿಕರು, ಅರಣ್ಯವಾಸಿಗಳು, ಗಿರಿಜನರು, ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಸಾಮಾನ್ಯವಾಗಿ ಒಬ್ಬ ನಾಯಕನ ಅಧೀನದಲ್ಲಿ ಒಟ್ಟಾಗಿ ಬಾಳುವ ನಾಗರಿಕತೆಯ ಪ್ರಭಾವ ಇಲ್ಲದ ಜನರ ಅಥವಾ ಕುಟುಂಬಗಳ ತಂಡವನ್ನು ಬುಡಕಟ್ಟು ಎಂದು ಕರೆಯಬಹುದು.

## 6.1 ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಐತಿಹಾಸಿಕ ನೋಟ

ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಬುಡಕಟ್ಟಿನ ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ. ಸಮಾಜಶಾಸ್ತ್ರಜ್ಞ ಪ್ರೊ. ಜಿ.ಎಸ್. ಗುರ್‍ರೆರವರು ಆದಿವಾಸಿಗಳನ್ನು, "ಹಿಂದುಳಿದ ಹಿಂದುಗಳು" ಎಂದು ಕರೆದರೆ, ಗಾಂಧೀಜಿಯವರು ಇವರನ್ನು "ಗಿರಿಜನರು" ಎಂದು ಕರೆದಿದ್ದಾರೆ. ಆದಿವಾಸಿ ಎಂಬ ಪದವನ್ನು ಭಾರತದ ಅತ್ಯಂತ ಅನಾಗರಿಕ ಹಾಗೂ ಹಿಂದುಳಿದ ಬಣವನ್ನು ಮತ್ತು ಈ ದೇಶದ ಜನರಲ್ಲಿ ಅತ್ಯಂತ ಪ್ರಾಚೀನ ಹಾಗೂ ಮೊದಲ ನಿವಾಸಿಗಳು ಎಂಬುದನ್ನು ಸೂಚಿಸುವುದಕ್ಕೆ ಬಳಸಲಾಗಿದೆ. **ರಿವರ್ಸ್‌ರವರ ಪ್ರಕಾರ** "ಸರಳ ಸಾಮಾಜಿಕ ಗುಂಪಿನಿಂದ ಕೂಡಿದ ಸಾಮಾನ್ಯ ಭಾಷೆಯನ್ನು ಮಾತನಾಡುವ, ಯುದ್ಧದಲ್ಲಿ ಒಟ್ಟಿಗೆ ಕೆಲಸ ಮಾಡುವ ಮತ್ತು ಸಾಮಾನ್ಯ ಕೆಲಸಗಳಲ್ಲಿ ತೊಡಗುವ ಜನರಿಗೆ ಆದಿವಾಸಿ ಜನ" ರೆಂದು ಕರೆದಿದ್ದಾರೆ.

**ಡಿ.ಎನ್. ಮಜುಂದಾರ್**ರವರ ಪ್ರಕಾರ "ಸಾಮಾನ್ಯವಾದ ನಾಮಾಂಕಿತವನ್ನು ಹೊಂದಿರುವ, ಸದಸ್ಯರು ಒಂದೇ ಭೌಗೋಳಿಕ ನೆಲೆಯಲ್ಲಿ, ವಾಸಿಸುವ, ಒಂದೇ ಭಾಷೆಯನ್ನು ಮಾತನಾಡುವ ಹಾಗೂ ಉದ್ಯೋಗ ಮತ್ತು ವಿವಾಹಕ್ಕೆ ಸಂಬಂಧಿಸಿದ ಕೆಲವು ನಿಷೇಧಗಳನ್ನು ಪಾಲಿಸುವ ಕುಟುಂಬಗಳ ಸಮೂಹವೇ ಬುಡಕಟ್ಟು" ಎಂದು ಕರೆದಿದ್ದಾರೆ.

**ಎಸ್. ಎಫ್. ನಾಡಲ್**ರವರು "ಭಾಷೆ, ಸಂಸ್ಕೃತಿ ಮತ್ತು ರಾಜಕೀಯದ ಎಲ್ಲೆಯನ್ನು ಹೊಂದಿರುವ ಸಮಾಜವನ್ನು ಬುಡಕಟ್ಟು", ಎಂದು ಕರೆದಿದ್ದಾರೆ.

ಬುಡಕಟ್ಟುಗಳೆಂದರೆ ಯಾರು ಎಂಬುದಕ್ಕೆ "ಭಾರತದ ಇಂಪೀರಿಯಲ್ ಗೆಜೆಟಿಯರ್, ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸ ಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ, ಪೂರ್ವದಲ್ಲಿ ಒಳ ಪಂಗಡ, ವಿವಾಹ ಪದ್ಧತಿಗೆ ಬದ್ಧವಾಗಿದ್ದಿರಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಬುಡಕಟ್ಟು ಸಮಾಜ ಅಥವಾ ಆದಿವಾಸಿ ಸಮಾಜ" ಎನ್ನಬಹುದು.

**ಬೋಗಾರ್ಡಸ್** ಎಂಬುವರ ಪ್ರಕಾರ "ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ, ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಬುಡಕಟ್ಟು ಸಮೂಹ".

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು**

**ನಿರ್ದಿಷ್ಟ ಹೆಸರು**

ಭಾರತದ ಒಂದೊಂದು ಬುಡಕಟ್ಟುಗಳಿಗೆ ತಮ್ಮದೇ ಆದ ಒಂದೊಂದು ನಿರ್ದಿಷ್ಟ ಹೆಸರುಗಳಿವೆ. ಉದಾ: ನಾಗ, ಗೊಂಡ, ಚೆಂಚು, ಭಿಲ್, ಖಾಸಿ, ತೋಡ, ಬಡಗ, ಬೇಡ, ಕಾಡುಗೊಲ್ಲ, ಕಾಡು ಕುರುಬ, ಗಾರೋ, ಕೊರಗ, ಮಲೆಕುಡಿಯ, ಕುಡುಬಿ, ಮರಾಠಿ ನಾಯ್ಕ್ ಮುಂತಾದ ಬುಡಕಟ್ಟು ಹೆಸರುಗಳಿವೆ.

**ಸಾಮಾನ್ಯ ಭಾಷೆ**

ಬುಡಕಟ್ಟುಗಳಲ್ಲಿ ತಮ್ಮದೇ ಆದ ಸ್ವಂತ ಭಾಷೆಯನ್ನು ಮಾತನಾಡುತ್ತಾರೆ. ಇವರ ಭಾಷೆ ಬೇರೆ ಸಾಮಾನ್ಯ ಭಾಷೆಗಳಿಗಿಂತ ಭಿನ್ನವಾಗಿರುತ್ತದೆ. ಆದಿವಾಸಿ ಭಾಷೆಗೆ ಲಿಪಿ ಇರುವುದಿಲ್ಲ. ಆದುದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದ್ದಾರೆ. ಕೆಲವೊಂದು ಬುಡಕಟ್ಟುಗಳಿಗೆ ಅವರದೇ ಆದ ನಿರ್ದಿಷ್ಟ ಭಾಷೆಯಿರುವುದಿಲ್ಲ. ಉದಾ: ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕಾಡು ಗೊಲ್ಲರು ಮತ್ತು ಬೇಡರು, ನಾಯಕರು, ಕನ್ನಡ ಮತ್ತು ತೆಲುಗು ಮಾತನಾಡುತ್ತಾರೆ.

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು**

**ನಿರ್ದಿಷ್ಟ ಭೂಪ್ರದೇಶ**

ಬುಡಕಟ್ಟಿನ ಜನರು ತಮ್ಮದೇ ಆದ ನಿರ್ದಿಷ್ಟ ವಾಸಸ್ಥಳ ಅಥವಾ ನೆಲೆ ಭೂಪ್ರದೇಶವನ್ನು ಹೊಂದಿರುತ್ತಾರೆ. ಇವರು ವಾಸಿಸುವ ಪ್ರದೇಶದಲ್ಲಿ ಇತರೆ ಜಾತಿ ಜನಾಂಗದವರಿಗೆ ಪ್ರವೇಶವಿರುವುದಿಲ್ಲ. ಬುಡಕಟ್ಟು ಜನರು ವಾಸಿಸುವ ವಾಸಸ್ಥಳಕ್ಕೆ ಹಟ್ಟಿ, ಹಾಡಿ, ತಾಂಡ, ದೊಡ್ಡಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಸಾಮಾನ್ಯವಾಗಿ ಬುಡಕಟ್ಟು ಜನರು ವಾಸಿಸುವ ನೆಲೆಗಳು ನಾಗರಿಕ ಸಮಾಜದಿಂದ ದೂರವಿದ್ದು, ಕಾಡುಗಳ ಮಧ್ಯದಲ್ಲಿಯೋ ಇಲ್ಲವೆ ಬಯಲು ಪ್ರದೇಶಗಳ ದಿಬ್ಬ ಅಥವ ದಿಣ್ಣೆಗಳಲ್ಲಿಯೋ ಇರುತ್ತವೆ. ಇವರ ನೆಲೆಗಳು ಕೆಲವೊಮ್ಮೆ ಸರ್ಕಾರದ ದಾಖಲಾತಿಗಳಲ್ಲಿ ಇರುವುದಿಲ್ಲ. ಇಂತಹ ನೆಲೆಗಳಲ್ಲಿ ವಾಸ ಮಾಡುವುದರಿಂದ ಬುಡಕಟ್ಟು ಜನರಲ್ಲಿ ಸಾಮುದಾಯಿಕ ಒಗ್ಗಟ್ಟು ಮತ್ತು ನಾವು ನಮ್ಮದು ಎಂಬ ಭಾವನೆ ಅಧಿಕವಾಗಿರುತ್ತದೆ.

ವಿಶಾಲ ಅರ್ಥದಲ್ಲಿ ಹೇಳುವುದಾದರೆ "ಒಂದು ಸಾಮಾನ್ಯ ಭೌಗೋಳಿಕ ಪ್ರದೇಶದಲ್ಲಿ ವಾಸವಿದ್ದು, ಒಂದೇ ತೆರನಾದ ಭಾಷೆಯನ್ನು ಮಾತನಾಡುವ ಮತ್ತು ಒಂದೇ ತೆರನಾದ ಸಂಸ್ಕೃತಿ ಅಥವಾ ಆಚರಣೆಗಳನ್ನು ಹೊಂದಿರುವ

ಜನಾಂಗವನ್ನು ಆದಿವಾಸಿ ಅಥವಾ ಬುಡಕಟ್ಟು ಜನಾಂಗ"ವೆಂದು ಹೇಳಬಹುದು. ಒಟ್ಟಾರೆ ಒಂದು ದೇಶದ ಮೂಲ ನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವ ಜನರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗುತ್ತಿದೆ. "ಭಾರತ ಸಂವಿಧಾನದ 342 ನೇ ಕಲಂನಲ್ಲಿ ಆದಿವಾಸಿಗಳನ್ನು ಪರಿಶಿಷ್ಟ ಬುಡಕಟ್ಟುಗಳು ಎಂದು ಉಲ್ಲೇಖಿಸಿ ಸಂವಿಧಾನವು 472 ಪರಿಶಿಷ್ಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದೆ". ಆದರೆ ಬುಡಕಟ್ಟುಗಳ ಲಕ್ಷಣಗಳನ್ನು ಹೊಂದಿದ್ದರೂ ಅಧಿಕೃತವಾಗಿ ಬುಡಕಟ್ಟುಗಳ ಪಟ್ಟಿಗೆ ಸೇರಿಸಲ್ಪಡದ ಬುಡಕಟ್ಟುಗಳ ಸಂಖ್ಯೆ ಇನ್ನೂ ಅಧಿಕವಾಗಿವೆ.

ಬುಡಕಟ್ಟು ಸಮುದಾಯಗಳ ಬಗ್ಗೆ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಅಧ್ಯಯನ ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ ಎಡ್ಗರ್ ಥರ್‌ಸ್ಟನ್ ಮತ್ತು ರಂಗಾಚಾರಿ ಕೆ. (1909), ಎ.ಎ.ಡಿ. ಲೂಯಿಸ್ (1963), ಮಜುಂದಾರ್ (1950, ನಾಡೆಲ್ (1947), ನಂಜುಂಡಯ್ಯ ಮತ್ತು ಅನಂತಕೃಷ್ಣ ಆಯ್ಯರ್ (1926), ನಿರ್ಮಲ್ ಕುಮಾರ್ ಬೋಸ್ (1947), ಎಲ್‌ವಿನ್ ವೆರಿಯರ್ ಗುರ್‍ರೆ (1959) ಇವರು ಬುಡಕಟ್ಟುಗಳ ಬಗ್ಗೆ ಸಂಶೋಧನೆ ಕೈಗೊಂಡು ಉತ್ತಮ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇತ್ತೀಚಿಗೆ ಯುವ ವಿದ್ವಾಂಸರು ಬುಡಕಟ್ಟು ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದು, ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವಿಧ ಮಗ್ಗುಲುಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಿ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ.

> **ಬುಡಕಟ್ಟು ಜನಾಂಗದ ಗುಣಲಕ್ಷಣಗಳು**
>
> **ಶೈಕ್ಷಣಿಕ ಹಿಂದುಳಿದಿರುವಿಕೆ**
>
> ಬುಡಕಟ್ಟು ಜನರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದವರಾಗಿರುತ್ತಾರೆ. ಇವರಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ ಹತ್ತಕ್ಕಿಂತಲೂ ಕಡಿಮೆ ಇರುತ್ತದೆ. ಇವರು ಔಪಚಾರಿಕ ಶಿಕ್ಷಣ ಸಂಸ್ಥೆಗಳಾದ ಶಾಲೆ, ಕಾಲೇಜುಗಳಿಗೆ ಹೋಗುವುದೇ ಕಡಿಮೆ. ಸಾಮಾನ್ಯವಾಗಿ ಬುಡಕಟ್ಟು ಜನರು ತಮ್ಮ ಶಿಕ್ಷಣವನ್ನು ದಿನನಿತ್ಯದ ಸಾಮಾಜಿಕ ಆರ್ಥಿಕ ಚಟುವಟಿಕೆಗಳಿಂದಲೇ ಅನೌಪಚಾರಿಕವಾಗಿ ಪಡೆಯುತ್ತಾರೆ. ಇತ್ತೀಚಿಗೆ ಅಲ್ಲೊಬ್ಬ ಇಲ್ಲೊಬ್ಬ ಆದಿವಾಸಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿದ್ದಾರೆ.

## 6.2 ಬುಡಕಟ್ಟು ಸಮುದಾಯಗಳಲ್ಲಿ ಬರುತ್ತಿರುವ ಬದಲಾವಣೆಗಳು ಮತ್ತು ಅವುಗಳಿಗೆ ಕಾರಣವಾಗುವ ಅಂಶಗಳು

ಜಾತಿ ವ್ಯವಸ್ಥೆಯ ಪ್ರಭಾವ, ಅರಣ್ಯ ನಾಶ, ನಗರೀಕರಣ, ಅಭಿವೃದ್ಧಿಯ ನೆಪದಲ್ಲಿ ಬರುವ ಕಾರ್ಯಕ್ರಮಗಳು, ಆಧುನೀಕರಣ ಪ್ರಕ್ರಿಯೆ ಇತ್ಯಾದಿಗಳು ಬುಡಕಟ್ಟುಗಳ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿವೆ ಎಂದರೆ ತಪ್ಪಾಗಲಾರದು. ಇಂದು ಬುಡಕಟ್ಟು ಜನರ ವಿವಾಹ ಕ್ರಮ, ಕುಟುಂಬ ಪದ್ಧತಿ, ಆಹಾರ, ವೇಷಭೂಷಣ, ಕಸುಬು, ಧಾರ್ಮಿಕ ಅಂಶಗಳು ಆಧುನಿಕ ಬದಲಾವಣೆಯ ಗಾಳಿಗೆ ಸಿಲುಕಿ ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುತ್ತಿವೆ. ಇಂದು ಬುಡಕಟ್ಟು ಜನರು ಬುಡಕಟ್ಟು ಜನರಾಗಿ ಉಳಿಯದೆ ಜಾತಿ ವ್ಯವಸ್ಥೆಯ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಈ ಒಂದು ಪ್ರಕ್ರಿಯೆ ಸಂಚಲನೆ ದೃಷ್ಟಿಯಿಂದ ನೇತ್ಯಾತ್ಮಕವಾಗಿ ಕಂಡರೂ ಸಾಂಸ್ಕೃತಿಕ ಅನನ್ಯತೆಯ ದೃಷ್ಟಿಯಿಂದ ಕನಿಷ್ಟ ಮಟ್ಟಿಗಾದರೂ ಬುಡಕಟ್ಟು ಧರ್ಮ, ಕಲೆ, ಸಂಸ್ಕೃತಿ ಮತ್ತು ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವುದು ಈಗಿನ ಆದ್ಯ ಕರ್ತವ್ಯ.

ಭಾರತೀಯ ಸಮಾಜವು ವಿವಿಧ ಧರ್ಮ, ಭಾಷೆ, ಸಮುದಾಯ, ಜನಾಂಗ ಮತ್ತು ಬುಡಕಟ್ಟುಗಳಿಂದ ಕೂಡಿದ ಸಮಾಜವಾಗಿದ್ದು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೀರ್ಣ ಸಾಮಾಜಿಕ

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು**

**ಒಂದೇ ರೀತಿಯ ರಾಜಕೀಯ ವ್ಯವಸ್ಥೆ**

ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಆದ ಸಂಪ್ರದಾಯಿಕ ರಾಜಕೀಯ ಆಡಳಿತ ಕ್ರಮವನ್ನು ಹೊಂದಿರುತ್ತದೆ. ಹಾಗೆಯೇ ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಆದ ನಾಯಕನನ್ನು ಪಡೆದಿದ್ದು, ಎಲ್ಲಾ ಆಗು-ಹೋಗುಗಳಿಗೂ ಆ ನಾಯಕನನ್ನು ತೀರ್ಪುಗಾರರನ್ನಾಗಿ ನೇಮಿಸುತ್ತಾರೆ.

ಇವರ ರಾಜಕೀಯ ಸಂಘಟನೆಯು ಸಂಪೂರ್ಣವಾಗಿ ಜಾತಿ ವ್ಯವಸ್ಥೆಯ ರಾಜಕೀಯ ಸಂಘಟನೆಗಿಂತ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಆದಿವಾಸಿಗಳಲ್ಲಿ ನಾಯಕನ ಸ್ಥಾನಮಾನವು ಅನುವಂಶೀಯವಾಗಿರುತ್ತದೆ. ಇದು ಹೊರಿಸಿದ ಸ್ಥಾನಮಾನವಾಗಿದ್ದು, ನಾಯಕನ ವೈಯಕ್ತಿಕ ಸಾಧನೆಯನ್ನು ಗಣನೆಗೆ ತೆಗೆದುಕೊಳ್ಳದೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತಾ ಬಂದಿರುತ್ತದೆ. ಇವರ ಬುಡಕಟ್ಟು ಪಂಚಾಯ್ತಿ ವ್ಯವಸ್ಥೆಯಲ್ಲಿ ಆದಿವಾಸಿ ಪಂಗಡದ ನಾಯಕನಿಗೆ ತೀರ್ಮಾನ ತೆಗೆದುಕೊಳ್ಳುವ ಮತ್ತು ಜನರನ್ನು ಶಿಕ್ಷಿಸುವ ಅಧಿಕಾರವಿರುತ್ತದೆ. ನಾಯಕನ ಅಧಿಕಾರಗಳು ಎಲ್ಲಿಯೂ ಲಿಖಿತವಾಗಿ ದಾಖಲಾಗಿರುವುದಿಲ್ಲ. ಇವು ಅನೌಪಚಾರಿಕವಾಗಿ ಬುಡಕಟ್ಟು ಸಂಪ್ರದಾಯದಂತೆ ಬಂದವುಗಳಾಗಿರುತ್ತವೆ.

ವ್ಯವಸ್ಥೆಯಲ್ಲಿ ಏಕತೆಗಿಂತಲೂ ಹೆಚ್ಚಿಗೆ ಭಿನ್ನತೆಯ ವಿವಿಧ ಅಂಶಗಳನ್ನು ಕಾಣಬಹುದು. ಹೋಲಿಕೆಯ ಮತ್ತು ವಿವಿಧತೆಯ ಅಂಶಗಳು ಭಾರತದ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಂಡು ಬರುತ್ತವೆ. ಈ ಸಾಮಾಜಿಕ ಗುಂಪುಗಳು ಒಂದೇ ಸಮಾಜದಲ್ಲಿ ವಿವಿಧ ಉಪಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. ಉಪಸಂಸ್ಕೃತಿಗಳು ಮುಖ್ಯ ಸಮಾಜದ ಭಾಗವಾಗಿದ್ದಾಗ್ಯೂ ತಮ್ಮ ಪ್ರತ್ಯೇಕತೆ ಮತ್ತು ಅಸ್ತಿತ್ವವನ್ನು ಉಳಿಸಿಕೊಂಡಿವೆ. ಭಾರತೀಯ ಸಮಾಜವನ್ನು ಒಂದು ಸಮಷ್ಠಿ ದೃಷ್ಟಿಯಿಂದ ನೋಡಿದಾಗಲೂ ಇದರೊಳಗಡೆ ಇರುವ ಇತರ ಉಪಸಂಸ್ಕೃತಿಗಳ ಅನನ್ಯತೆಯನ್ನು ಮರೆಯುವಂತಿಲ್ಲ. ಈ ಸಮಾಜದಲ್ಲಿ ನಾವು ನಗರ ಸಮಾಜ, ಗ್ರಾಮೀಣ ಸಮಾಜ ಎಂಬ ಭೇದಗಳನ್ನು ಮಾಡುವುದರೊಂದಿಗೆ ಬುಡಕಟ್ಟು ಸಮಾಜ (ಅಥವಾ ಸಂಸ್ಕೃತಿ) ಎಂಬ ಮತ್ತೊಂದು ಸಮಾಜವನ್ನು ಗುರುತಿಸುತ್ತೇವೆ. ಬುಡಕಟ್ಟು ಸಮಾಜ ಬೇರೆ ಸಮಾಜಕ್ಕಿಂತ ಸರ್ವ ವಿಧದಲ್ಲಿಯೂ ಭಿನ್ನವಾಗಿರುತ್ತದೆ.

**ಸಂವಿಧಾನದ ಸವಲತ್ತುಗಳು ಮತ್ತು ಬುಡಕಟ್ಟುಗಳಲ್ಲಿ ಬದಲಾವಣೆ**

ಭಾರತದ ಸ್ವಾತಂತ್ರ್ಯ ನಂತರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜಾತಿ ಮತ್ತು ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಧ್ಯಯನ ಮಾಡಿ ಅವರಲ್ಲಿರುವ ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದು ಹಾಕುವ ಸಲುವಾಗಿ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿ ಸಂವಿಧಾನ ಬದ್ಧವಾದ ಹಕ್ಕನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು. ಭಾರತದ ಸಂವಿಧಾನದ ಕಲಂ 242(1)ರ ಪ್ರಕಾರ ರಾಷ್ಟ್ರಪತಿಯವರು ಮತ್ತು ಸಂಸತ್ತು ಎಲ್ಲಾ ರೀತಿಯಿಂದಲೂ ಹಿಂದುಳಿದ ಅರ್ಹ ಸಮುದಾಯಗಳನ್ನು ಅನುಸೂಚಿತ ಬುಡಕಟ್ಟುಗಳೆಂದು ಪರಿಗಣಿಸಿ ಮತ್ತು ಆದೇಶಿಸಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಲಾಯಿತು. ಅವುಗಳೆಂದರೆ ರಕ್ಷಣಾತ್ಮಕ ನೀತಿ, ಮೀಸಲಾತಿ ನೀತಿ ಮತ್ತು ಅಭಿವೃದ್ಧಿ ನೀತಿ. ರಕ್ಷಣಾತ್ಮಕ ನೀತಿಯು ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟು ಜನರ ಹಿತಾಸಕ್ತಿಗಳನ್ನು ಕಾಪಾಡುವಂತಾಗಿದ್ದವು. ಮೀಸಲಾತಿ ನೀತಿಯು ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಯೋಜನೆಯನ್ನೊಳಗೊಂಡಿತ್ತು. ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಬುಡಕಟ್ಟು ಜನರ ಕಲ್ಯಾಣ ಸಾಧಿಸಲು

ಪ್ರಾರಂಭಿಸಲಾಯಿತು. ರಾಷ್ಟ್ರಪತಿಯವರ ಅನುಮೋದನೆಯಿಂದ ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳು (ಬುಡಕಟ್ಟುಗಳು) ಸಂವಿಧಾನ ಬದ್ಧವಾಗಿ ವಿಶೇಷ ಸವಲತ್ತುಗಳನ್ನು ಪಡೆಯಬಹುದಾಗಿದ್ದು, ಆಯಾ ರಾಜ್ಯಗಳು ಸಹ ಸಂವಿಧಾನ ಬದ್ಧ ಮೀಸಲಾತಿಯ ಸೌಲಭ್ಯವನ್ನು ತಮ್ಮ ತಮ್ಮ ರಾಜ್ಯದಲ್ಲಿ ಪರಿಶಿಷ್ಟ ಬುಡಕಟ್ಟುಗಳೆಂದು ರಾಷ್ಟ್ರಪತಿಯವರು ಅನುಮೋದಿಸಿದ ಪಟ್ಟಿಯಲ್ಲಿರುವ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನ ಬದ್ಧವಾದ ಸೌಲಭ್ಯಗಳನ್ನು ಮತ್ತು ಮೀಸಲಾತಿಯ ಹಕ್ಕುಗಳನ್ನು ರಕ್ಷಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಸಂವಿಧಾನ ಬದ್ಧ ಕಾರ್ಯಾಕ್ರಮಗಳ ಜಾರಿಯ ಹೊಣೆ ಮತ್ತು ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಸಂವಿಧಾನದ ಕೆಲವು ಕಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ ಅಥವಾ ಮೀಸಲು ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಟ್ಟಿವೆ.

ಸಂವಿಧಾನದ 46ನೆಯ ಅನುಚ್ಛೇದವು ರಾಜ್ಯದ ದುರ್ಬಲ ವರ್ಗಗಳ ಅದರಲ್ಲಿಯೂ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಬೇಕು ಹಾಗೂ ಸಾಮಾಜಿಕ ಅನ್ಯಾಯವಾಗದಂತೆ ರಕ್ಷಿಸಿ ಎಲ್ಲಾ ತರಹದ ಶೋಷಣೆಯಿಂದ ತಪ್ಪಿಸಬೇಕು ಎಂದು ಹೇಳುತ್ತದೆ. ಕಲಂ 244ರ ಪ್ರಕಾರ ರಾಷ್ಟ್ರಪತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬಹುದಾಗಿದೆ. ಆಯಾ ರಾಜ್ಯಗಳ ರಾಜ್ಯಪಾಲರುಗಳು ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ ರಾಜ್ಯದ ಯಾವುದೇ ಭಾಗವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಹೊಂದಿದ್ದಾರೆ. ಅನುಚ್ಛೇದ 339 ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯ ಸರ್ಕಾರಗಳು ರಾಜ್ಯದ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ತಿಳಿಸುತ್ತದೆ. ಸಂವಿಧಾನದ 275 ನೇ ಅನುಚ್ಛೇದವು ಸಂವಿಧಾನದ ಸವಲತ್ತುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಅವಕಾಶವನ್ನು ಮಾಡಿಕೊಟ್ಟಿದೆ. ಸಂವಿಧಾನದ 330, 332 ಮತ್ತು 334ರ ಕಲಂಗಳ ಅನುಸೂಚಿತ ಬುಡಕಟ್ಟುಗಳಿಗೆ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೀಸಲಾತಿಯು ಸವಲತ್ತುಗಳನ್ನು ಒದಗಿಸುವ ಅವಕಾಶವನ್ನು ಒದಗಿಸಿವೆ. ಸಂವಿಧಾನದ 335ನೇ ವಿಧಿಯು ಅನುಸೂಚಿತ ಬುಡಕಟ್ಟುಗಳಿಗೆ ನಾಗರಿಕ ಸೇವೆಗಳಲ್ಲಿ ಮೀಸಲಾತಿಯನ್ನು ಒದಗಿಸಿಕೊಂಡ ಅವಕಾಶವನ್ನು ಒದಗಿಸಿದೆ. 15, 16 ಮತ್ತು 19 ನೇ ಸಂವಿಧಾನದ ಅನುಚ್ಛೇದಗಳು ಬುಡಕಟ್ಟುಗಳ ಹಿತಾಸಕ್ತಿಯನ್ನು ಮತ್ತು ಜೀವನವನ್ನು ಕಾಪಾಡುವ ಉದ್ದೇಶವನ್ನು ಹೊಂದಿವೆ. ಸಂವಿಧಾನದ 5ನೇ ಪಟ್ಟಿ (Shedule) ಭಾಗ "ಬಿ" ಪ್ಯಾರಾ 4ರ ಭಾಗವು ಪ್ರತಿಯೊಂದು ರಾಜ್ಯವು ಕಡ್ಡಾಯವಾಗಿ

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು**

**ಆರ್ಥಿಕ ಹಿಂದುಳಿದಿರುವಿಕೆ**

ಆರ್ಥಿಕ ಹಿಂದುಳಿದಿರುವಿಕೆಯು ಬುಡಕಟ್ಟು ಜನರ ಪ್ರಮುಖ ಲಕ್ಷಣವಾಗಿದೆ. ಬುಡಕಟ್ಟು ಜನರಲ್ಲಿ ಶ್ರೀಮಂತರು ಇಲ್ಲವೇ ಇಲ್ಲ. ಇವರ ಶ್ರೀಮಂತಿಕೆ ನಿರ್ಧಾರವಾಗುವುದು ಇವರ ಸಾಂಸ್ಕೃತಿಕ ಶ್ರೀಮಂತಿಕೆಯಿಂದ. ಬುಡಕಟ್ಟು ಜನರು ಕಾಡುಗಳಲ್ಲಿ ವಾಸಿಸುವುದರಿಂದ ಅನೇಕ ನಾಗರಿಕ ಸವಲತ್ತುಗಳಿಂದ ವಂಚಿತರಾಗಿದ್ದು, ಇವರಲ್ಲಿ ಬಡತನ ಎದ್ದು ಕಾಣುತ್ತದೆ. ಎಷ್ಟೋ ಬುಡಕಟ್ಟು ಜನರು ಭೂರಹಿತ ಜನರಾಗಿದ್ದಾರೆ. ಇವರಿಗೆ ಯಾವುದೇ ಅಧಿಕ ಆರ್ಥಿಕ ಮೂಲ ಇರುವುದಿಲ್ಲ. ಬುಡಕಟ್ಟು ಜನರ ಆರ್ಥಿಕ ಹಿಂದುಳಿದಿರುವಿಕೆ ಇವರ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಭಾರತದಲ್ಲಿ ಶೇಕಡ ಎಂಬತ್ತೈದರಷ್ಟು ಬುಡಕಟ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದರೆ ಆಶ್ಚರ್ಯವಾಗುವುದಾದರೂ ಸತ್ಯ ಸಂಗತಿ.

ಬುಡಕಟ್ಟು ಪ್ರದೇಶ ಇರಲಿ ಅಥವಾ ಇಲ್ಲದಿರಲಿ ಆದರೆ ಅನುಸೂಚಿತ ಬುಡಕಟ್ಟುಗಳನ್ನೊಳಗೊಂಡ ಒಂದು ಬುಡಕಟ್ಟು ಸಲಹಾ ಸಮಿತಿಯನ್ನು ರಚಿಸುವ ಅವಕಾಶವನ್ನು ಒದಗಿಸಿದೆ. ಈ ಬುಡಕಟ್ಟು ಸಲಹಾ ಸಮಿತಿಯ ಕಾರ್ಯವೇನೆಂದರೆ ರಾಜ್ಯದಲ್ಲಿ ಬುಡಕಟ್ಟುಗಳ ಕಲ್ಯಾಣ ಮತ್ತು ಉನ್ನತಿಗೆ ಸಂಬಂಧಿಸಿದಂತೆ ಸಲಹೆ ಕೊಡುವುದಾಗಿರುತ್ತದೆ. ಬುಡಕಟ್ಟು ಸಲಹಾ ಸಮಿತಿಯು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ನಿಯಮ ಮತ್ತು ಕಾನೂನುಗಳನ್ನು ರೂಪಿಸುವ ಬಗ್ಗೆ ಚರ್ಚಿಸಿ ಆ ಕಾನೂನುಗಳು ಬುಡಕಟ್ಟುಗಳ ಪ್ರದೇಶಕ್ಕೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬ ಉದ್ದೇಶವನ್ನಿಟ್ಟುಕೊಂಡು ಮುಖ್ಯವಾಹಕಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ನೀತಿ ನಿರೂಪಕರು, ಆಡಳಿತಗಾರರು ಮತ್ತು ಬುಡಕಟ್ಟು ಜನರು ಹಾಗೂ ಬುಡಕಟ್ಟೇತರ ಜನರಿಗೆ ಒಟ್ಟಿಗೆ ಕೆಲಸ ಮಾಡಲು ಈ ಬುಡಕಟ್ಟು ಸಲಹಾ ಸಮಿತಿಗಳು ಮುಖ್ಯವಾದ ವೇದಿಕೆಗಳಾಗಬೇಕಾಗುತ್ತದೆ. ಸಂವಿಧಾನದ ಅನುಚ್ಛೇದ 338ರ ಪ್ರಕಾರ ಸಂವಿಧಾನ ಮುಖ್ಯವಾದ ಸವಲತ್ತುಗಳಲ್ಲಿ ಒಂದಾದ ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಹಿತಾಸಕ್ತಿಗಳಿಗೆ ಆಯುಕ್ತರನ್ನು ನೇಮಿಸುವುದು ಮುಖ್ಯವಾದುದಾಗಿದೆ. ಕೇಂದ್ರ ಸರ್ಕಾರ ಈ ಅನುಚ್ಛೇದದ ಪ್ರಕಾರ ವಿಶೇಷ ಅಧಿಕಾರಿಯನ್ನು ನೇಮಿಸುತ್ತದೆ. ಈ ಅಧಿಕಾರಿಯು ಬುಡಕಟ್ಟುಗಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರಲ್ಲಿ ಮುಖ್ಯ ಪಾತ್ರವಹಿಸಬೇಕಾಗುತ್ತದೆ. ಅಲ್ಲದೆ ಆಗಾಗ್ಗೆ ಬುಡಕಟ್ಟುಗಳ ಅಭಿವೃದ್ಧಿಗೆ ಅನುಷ್ಠಾನಗೊಂಡ ಕಾರ್ಯಕ್ರಮಗಳ ಪರಿಶೀಲನೆ ಮಾಡುವುದು, ಉಸ್ತುವಾರಿ ನೋಡಿಕೊಳ್ಳುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಜೊತೆಗೆ ಒಟ್ಟಾರೆ ಬುಡಕಟ್ಟು ಜನರ ಸಂವಿಧಾನಾತ್ಮಕ ಹಿತಾಸಕ್ತಿಗಳನ್ನು ಕಾಪಾಡುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು**

**ಒಂದೇ ಧರ್ಮ**

ಬುಡಕಟ್ಟು ಧರ್ಮ ತುಂಬಾ ಪ್ರಾಚೀನವಾದದ್ದು. ಬುಡಕಟ್ಟು ಜನರು ಸರ್ವ ಚೇತನಾವಾದಿಗಳು. ಇವರ ಧರ್ಮವು ಜಾತಿಯ ಜನರ ಧರ್ಮಕ್ಕಿಂತ ಭಿನ್ನವಾಗಿದ್ದು, ಇದನ್ನು ಸಾಮಾಜಿಕ ನಿಯಂತ್ರಣಕ್ಕೆ ಮತ್ತು ಸಮುದಾಯದ ಒಳಿತಿಗೆ ಬಳಸುತ್ತಾರೆ. ಬುಡಕಟ್ಟು ಜನರು ಪ್ರಾಣಿ, ಪಕ್ಷಿ, ಗಿಡ, ಮರ, ಕಲ್ಲು, ಬಂಡೆ, ಬೆಟ್ಟಗುಡ್ಡ, ನದಿ, ಸರೋವರ ಮುಂತಾದ ಪ್ರಕೃತಿದತ್ತವಾದ ನಿಸರ್ಗದ ಆರಾಧಕರಾಗಿದ್ದಾರೆ. ಸಮುದಾಯಕ್ಕೆ ಕೇಡುಕುಂಟಾದಾಗ ತಮ್ಮ ಬುಡಕಟ್ಟು ದೇವರುಗಳ ಮೊರೆ ಹೋಗಿ ಪೂಜಿಸುತ್ತಾರೆ. ಇವರು ಮಾಟ ಮಂತ್ರಗಳಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ನೀಲಗಿರಿಯ ತೋಡರು ತಮ್ಮ ಧರ್ಮದ ಸಂಕೇತವಾದ ಎಮ್ಮೆಗಳನ್ನು ತಮ್ಮ ದೇವರೆಂದು ಪೂಜಿಸಿದರೆ, ಅಸ್ಸಾಮಿನ ಗಾರೋ ಆದಿವಾಸಿಗಳು ಸೂರ್ಯ ಚಂದ್ರರನ್ನು ಆರಾಧಿಸುತ್ತಾರೆ. ಬುಡಕಟ್ಟು ಧರ್ಮವು ಅವರ ಜೀವನದ ಅವಿಭಾಜ್ಯ ಅಂಗವಾಗಿದೆ. ಪ್ರತಿಯೊಂದು ಬುಡಕಟ್ಟು ಗುಂಪು ಸಾಂಸ್ಕೃತಿಕ ವೀರರನ್ನು ಹೊಂದಿದ್ದು ಅವರನ್ನು ಅವರ ದೇವರುಗಳೆಂದು ಪೂಜಿಸುತ್ತಾರೆ.

**ಸಮಿತಿ, ಆಯೋಗಗಳು ಮತ್ತು ಬುಡಕಟ್ಟುಗಳಲ್ಲಿ ಬದಲಾವಣೆ :**

ಸಂವಿಧಾನಾತ್ಮಕ ರಕ್ಷಣೆ ಮತ್ತು ಸವಲತ್ತುಗಳಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸಲು ಹಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿರುವುದು ಗಮನಾರ್ಹ ಸಂಗತಿ. ಅವುಗಳಲ್ಲಿ ಸಮಿತಿ ಮತ್ತು ಆಯೋಗಗಳನ್ನು ಸ್ಥಾಪಿಸುವುದು ಮುಖ್ಯವಾದಂತಹದ್ದಾಗಿದ್ದು, ಆ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಜನರಿಗೆ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲು 1961 ರಲ್ಲಿ ಕೇಂದ್ರ ಸರ್ಕಾರ ದಾಬರ್‌ರವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಬುಡಕಟ್ಟು ಆಯೋಗವನ್ನು

ರಚಿಸಲಾಯಿತು. ಈ ಆಯೋಗದ ಶಿಫಾರಸ್ಸಿನಂತೆ ಬುಡಕಟ್ಟುಗಳ ಸಮಗ್ರ ಯೋಜನೆಗಳನ್ನು ರೂಪಿಸಿ ಕನಿಷ್ಠ ಅವಶ್ಯಕತೆಗಳಾದ ಆಹಾರ, ನೀರು, ಉದ್ಯೋಗ, ಶಿಕ್ಷಣ, ಆರೋಗ್ಯ, ರಸ್ತೆ ಸೌಕರ್ಯವನ್ನು ಒದಗಿಸಲಾಯಿತು. 1972 ರಲ್ಲಿ ರಚಿತವಾದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಕಾರ್ಯಪಡೆಯು ಬುಡಕಟ್ಟುಗಳ ಅಭಿವೃದ್ಧಿಗೆ ನೀತಿಯನ್ನು ರೂಪಿಸುವಾಗ ಪರಿಸರೀಯ ಉದ್ಯೋಗ ಮತ್ತು ಸಾಮಾಜಿಕ ಸೂಚಕಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿತು. ಇದರಿಂದ ಬುಡಕಟ್ಟು ಜನರಿಗೆ ಅತೀ ಶೀಘ್ರದಲ್ಲಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಪಡೆಯ ಉದ್ದೇಶವಾಗಿತ್ತು. ನಂತರ 1980 ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಬುಡಕಟ್ಟು ಉಪಯೋಜನೆಯನ್ನು ರೂಪಿಸಲಾಯಿತು. ಈ ಯೋಜನೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿತ್ತು.

ಬುಡಕಟ್ಟುಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಮತ್ತು ಶೋಷಣೆಯಿಂದ ಬುಡಕಟ್ಟು ಜನರನ್ನು ತಪ್ಪಿಸುವುದು. ಬುಡಕಟ್ಟು ಉಪಯೋಜನೆಗೆ ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿದವು. ಈ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಒದಗಿಸುವುದರ ಜೊತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ ಸಹಕಾರ, ಬುಡಕಟ್ಟುಗಳ ಕರಕುಶಲ ಕಲೆಗೆ ಮತ್ತು ಇತರೆ ಪರಿಣಿತಿಗೆ ಹೆಚ್ಚು ಒತ್ತು ಕೊಡಲಾಯಿತು. ಬುಡಕಟ್ಟು ಉಪಯೋಜನೆಯಲ್ಲಿ ಒಟ್ಟಾರೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಗಮನಹರಿಸಿದ್ದರಿಂದ ಬುಡಕಟ್ಟು ಜನರ ಅಭಿವೃದ್ಧಿಯನ್ನು ಅಷ್ಟೇನು ಸಾಧಿಸಿದಂತಾಗಲಿಲ್ಲ. ಆದರೂ, ಶಿಕ್ಷಣದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಿದಂತಾಯಿತು. ಇದರಿಂದ ಶೇಕಡ 95ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳನ್ನು ಹೊಂದಲು ಸಾಧ್ಯವಾಯಿತು.

**ಕರ್ನಾಟಕದ ಪ್ರಮುಖ ಬುಡಕಟ್ಟುಗಳು**

ರಾಜ್ಯದ ಬುಡಕಟ್ಟುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬುಡಕಟ್ಟುಗಳೆಂದರೆ ನಾಯಕಡ ಅಥವಾ ನಾಯಕ (69%). ಇವರ ನಂತರ ಕಾಡುಕುರುಬರು ಶೇಕಡ 11 ರಷ್ಟಿದ್ದರೆ, ಮರಾಠಿ ನಾಯಕರು ಶೇಕಡ ನಾಲ್ಕರಷ್ಟಿದ್ದಾರೆ. ಉಳಿದಂತೆ ಗೊಂಡಾರು ಶೇಕಡ ಮೂರರಷ್ಟು, ಕೋಲಿಡಾರ್, ಜೇನುಕುರುಬ ಮತ್ತು ಕೋಯ ತಲಾ ಶೇಕಡ ಎರಡರಷ್ಟು ಕಂಡುಬರುತ್ತಾರೆ. ಕಡಿಮೆ ಜನಸಂಖ್ಯೆಯ ರಾಜ್ಯದ ಬುಡಕಟ್ಟುಗಳೆಂದರೆ ಯರವ, ಮೇದ, ಸೋಲಿಗಾ, ಮಲೆಕುಡಿಯ ಮತ್ತು ಹಸಲರು. ಇವರ ಪ್ರಮಾಣ ಶೇಕಡ ಒಂದು. ಕೊರಗರ ಜನಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ.

1996 ರಲ್ಲಿ ಕೇಂದ್ರ ಸರ್ಕಾರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗವನ್ನು ರಚಿಸಿದ್ದು, ದಿಲೀಪ್ ಸಿಂಗ್ ಬೂರಿಯವರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಈ ಆಯೋಗವು ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಕಲ್ಯಾಣಕ್ಕೆ 40 ವರ್ಷಗಳ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ, ನೀರು ಮತ್ತು ಅರಣ್ಯಕ್ಕೆ ಸಂಬಂಧಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿದೆ. ಜುಲೈ 2003ರಲ್ಲಿ ಆಯೋಗದ ಅಧ್ಯಕ್ಷರಾದ ಬೂರಿಯಾ ಮತ್ತು ಇತರೆ ಸದಸ್ಯರು ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ ಅವರು ಕರ್ನಾಟಕದಲ್ಲಿ ಪ್ರಸ್ತುತ ಯಾವುದೇ ಬುಡಕಟ್ಟುಗಳು ಇರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲಾಗಿಲ್ಲ. ಆದರೆ ರಾಜ್ಯದಿಂದ ಬುಡಕಟ್ಟು ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲು ಕೆಲವು ಬೇಡಿಕೆಗಳು ಬಂದಿವೆ ಎಂದರು.

**ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಬದಲಾವಣೆ**

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟಿತ್ತಾದರೂ ಸ್ಪಷ್ಟ ಮತ್ತು ವಿಶೇಷ ಗಮನಹರಿಸಲು ಸಾಧ್ಯವಾಗಲಿಲ್ಲ. ಕೇವಲ ಅಲ್ಪಸ್ವಲ್ಪ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಒದಗಿಸಲಾದ ಹಣಕಾಸು ಶೇಕಡ ಒಂದರಷ್ಟು. ಎರಡನೇ ಯೋಜನೆಯಲ್ಲಿ ಕೆಲವು ಆಯ್ದ ಬುಡಕಟ್ಟು ಪ್ರದೇಶಗಳಿಗೆ ವಿಶೇಷ ವಿವಿಧೋದ್ದೇಶ ಬುಡಕಟ್ಟು ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗೆ ಮೀಸಲಿಟ್ಟ ಹಣ ಶೇಕಡ 0.90ರಷ್ಟು. 3 ನೇ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶಗಳ ಸ್ಥಿತಿಗತಿಯನ್ನು ಸುಧಾರಿಸುವುದರ ಜೊತೆಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಬುಡಕಟ್ಟುಗಳು ಪಾಲ್ಗೊಳ್ಳುವಂತೆ ಅನುವು ಮಾಡಿಕೊಡುವ ಬುಡಕಟ್ಟು ಅಭಿವೃದ್ಧಿಯ ಬ್ಲಾಕ್ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ಯೋಜನೆಗೆ ಖರ್ಚು ಮಾಡಿದ ಹಣ ಶೇಕಡ 0.60 ನಾಲ್ಕನೆಯ ಯೋಜನೆಯಲ್ಲಿ ಬುಡಕಟ್ಟು ಯೋಜನೆಯ ಮುಖ್ಯವಾದ ಆಯಾಮವೆಂದರೆ ಶಾಸನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳ ಮೂಲಕ ಬುಡಕಟ್ಟು ಜನರನ್ನು ಹೊರಗಿನವರ ಶೋಷಣೆಯಿಂದ ಮುಕ್ತಿಪಡಿಸುವುದಾಗಿತ್ತು. ಶೇಕಡ 0.50 ರಷ್ಟು ಹಣವನ್ನು ಈ ಯೋಜನೆಗೆ ವ್ಯಯಿಸಲಾಯಿತು. ನಾಲ್ಕನೇ ಯೋಜನೆಯು ಬುಡಕಟ್ಟು ಆರ್ಥಿಕತೆಯನ್ನು ಮುಖ್ಯವಾಹಿನಿಯ ಆರ್ಥಿಕತೆಯೊಳಗೆ ವಿಲೀನ ಮಾಡಬೇಕೆನ್ನುವ ಕಡೆ ಒತ್ತು ಕೊಟ್ಟಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಬುಡಕಟ್ಟು ಅಭಿವೃದ್ಧಿಯ ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ಪರಾಮರ್ಶಿಸಲಾಯಿತು ಮತ್ತು ಬುಡಕಟ್ಟು ಅಭಿವೃದ್ಧಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಯಿತು. ಬುಡಕಟ್ಟುಗಳು ಹೆಚ್ಚಿಗೆ ಇರುವ ಪ್ರದೇಶ ಮತ್ತು ಬುಡಕಟ್ಟುಗಳು ಅಲ್ಲಲ್ಲಿ ಚದುರಿರುವ ಪ್ರದೇಶ. ಶೇಕಡ 50ಕ್ಕಿಂತ ಹೆಚ್ಚು ಬುಡಕಟ್ಟುಗಳ ಪ್ರದೇಶದಲ್ಲಿ ಶೇಕಡ 65ರಷ್ಟು ಬುಡಕಟ್ಟು ಜನರು ಇರುವವರಿಗೆ 5ನೇ ಯೋಜನೆಯಲ್ಲಿ ಬುಡಕಟ್ಟು ಉಪಯೋಜನೆಯನ್ನು ತಯಾರಿಸಲಾಯಿತು. ಸಾಮಾನ್ಯವಾಗಿ ಬುಡಕಟ್ಟು ಉಪಯೋಜನೆಯು ರಾಜ್ಯ ಮತ್ತು ಕೇಂದ್ರದ ಯೋಜನೆಗಳಿಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದಾಗಿತ್ತು. ಈ ಯೋಜನೆಯು ಬುಡಕಟ್ಟು ಜನರನ್ನು ಭೂಮಿಗೆ ಸಂಬಂಧಿಸಿದ ಸಂಬಂಧಗಳಲ್ಲಿ ಶೋಷಣೆಯನ್ನು ತಪ್ಪಿಸುವುದು, ಲೇವಾದೇವಿದಾರರಿಂದ ಮುಕ್ತಿ ಒಂದು ಕಡೆಯಾದರೆ, ಇನ್ನೊಂದೆಡೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದರ ಕಡೆಗೆ ಪ್ರಾಮುಖ್ಯತೆ ಕೊಟ್ಟಿತು. ಈ ಯೋಜನೆಯ ಮೂಲ ಉದ್ದೇಶ ಬುಡಕಟ್ಟು ಜನರ ಸಂಘಟನಾತ್ಮಕ ಸಾಮರ್ಥ್ಯ ಮತ್ತು ಸ್ವಸಾಮರ್ಥ್ಯವನ್ನು ಬೆಳೆಸಲೋಸುಗ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಾಗಿತ್ತು.

**ಕರ್ನಾಟಕದ ಬುಡಕಟ್ಟುಗಳ ಜನಸಂಖ್ಯೆ ಮತ್ತು ವಾಸಿಸುವ ಪ್ರದೇಶಗಳು.**

1991 ರ ಜನಗಣತಿಯ ಪ್ರಕಾರ ರಾಜ್ಯದ ಬುಡಕಟ್ಟು ಜನಸಂಖ್ಯೆ 19,15,691. ಇವರು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 4.26 ರಷ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ 49 ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಗಿದೆ. ಆದರೆ ಇನ್ನೂ ಕೆಲವು ಬುಡಕಟ್ಟುಗಳು ರಾಜ್ಯದಲ್ಲಿ ಇವೆ ಎಂದು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳಿಂದ ತಿಳಿದು ಬಂದಿದೆ. ರಾಜ್ಯದಲ್ಲಿ 1961 ಮತ್ತು 1981 ರ ನಡುವೆ ಬುಡಕಟ್ಟು ಜನಸಂಖ್ಯೆಯು ಬಹಳ ಹೆಚ್ಚಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ಕೊಡಗು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಕಂಡು ಬಂದರೆ, ನಂತರದ ಸ್ಥಾನ ಬೆಂಗಳೂರು, ಬೆಳಗಾವಿ, ಬೀದರ್, ವಿಜಯಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಕಲಬುರಗಿ ಮತ್ತು ಶಿವಮೊಗ್ಗ ಜಿಲ್ಲೆಗಳದ್ದು. ಉತ್ತರ ಕನ್ನಡ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಬುಡಕಟ್ಟು ಜನರ ಸಂಖ್ಯೆ ಆಯಾ ಜಿಲ್ಲೆಯ ಶೇಕಡ ಒಂದರಷ್ಟಿದೆ.

ಬುಡಕಟ್ಟು ಉಪಯೋಜನೆಯನ್ನು (Sub-plan) ಪರಿಣಾಮಾತ್ಮಕವಾಗಿ ಜಾರಿಗೆ ತರಲು 184 ಸಮಗ್ರ ಬುಡಕಟ್ಟು ಅಭಿವೃಧಿ ಯೋಜನೆಗಳು (I T D R S), 277 ಬುಡಕಟ್ಟು ಪ್ಯಾಕೆಟ್ಸ್ ಅಂದರೆ ಮಾರ್ಪಡಿಸಿದ ಪ್ರದೇಶ ಅಭಿವೃದ್ಧಿ ವಿಧಾನ (MADA) 73 ಪ್ರಾಚೀನ ಬುಡಕಟ್ಟು ಗುಂಪುಗಳ ಸೂಕ್ಷ್ಮ (micro) ಯೋಜನೆಗಳು ಮತ್ತು 32 ಗುಂಪುಗಳನ್ನು ಸ್ಥಾಪಿಸಲಾಯಿತು. ಈ ವಿಶೇಷ ಯೋಜನೆಯಲ್ಲಿ ತೊಡಗಿಸಿದ ಹಣ ಶೇಕಡ 3.1ರಷ್ಟು. ಇದು ಕಳೆದ ಒಂದು, ಎರಡು, ಮೂರು ಹಾಗೂ ನಾಲ್ಕನೇ ಯೋಜನೆಗಳಲ್ಲಿ ವ್ಯಯಿಸಿದ ಹಣಕ್ಕಿಂತ ಹೆಚ್ಚಾಗಿರುವುದು ಗಮನಾರ್ಹ ಸಂಗತಿ. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ 5.67ರಷ್ಟು ಹಣವನ್ನು ಬುಡಕಟ್ಟು ಅಭಿವೃದ್ಧಿಗೆ ಮೀಸಲಿಡಲಾಯಿತು. ಬುಡಕಟ್ಟು ಉಪಯೋಜನೆಯ ವಿಧಾನವು ಬುಡಕಟ್ಟು ಯೋಜನೆಯ ಮುಖ್ಯ ಸಾಧನವಾಗಿ ಉಳಿದಾಗ್ಯೂ, ವಾಸ್ತವವಾಗಿ ಏಳನೇ ಯೋಜನೆಯಲ್ಲಿ ಗುಂಪು ಅಭಿವೃದ್ಧಿ ವಿಧಾನ ಅಥವಾ ಸಮುದಾಯ ಅಭಿವೃದ್ಧಿ ವಿಧಾನವನ್ನು ಬಳಸಿ 73 ಪ್ರಾಚೀನ ಬುಡಕಟ್ಟುಗಳನ್ನು ಗುರುತಿಸಲಾಯಿತು. ಶೇಕಡ 6.67 ರಷ್ಟು ಹಣವನ್ನು ಈ ಯೋಜನೆಗೆ ಖರ್ಚು ಮಾಡಲಾಯಿತು. 8ನೇ ಯೋಜನೆಯಡಿಯಲ್ಲಿ ವಿಶೇಷ ಕಾರ್ಯ ತಂತ್ರ ರೂಪಿಸುವುದರ ಜೊತೆಗೆ ಬುಡಕಟ್ಟು ಜನರ ಪ್ರಗತಿಗೋಸ್ಕರ ಕೇಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಿತು. ಈ ಯೋಜನೆಯ ಅಡಿಯಲ್ಲಿ ಬುಡಕಟ್ಟು ಯೋಜನೆಗೆ ರಾಷ್ಟ್ರೀಯ ಆದಾಯದ ಶೇಕಡ 8ರಷ್ಟನ್ನು ಖರ್ಚು ಮಾಡಲಾಯಿತು. 9ನೇ ಯೋಜನೆಯಲ್ಲಿ ಬುಡಕಟ್ಟು ಜನರನ್ನು ಸಶಕ್ತರನ್ನಾಗಿಸುವುದರ ಜೊತೆಗೆ ಸಮಾಜದ ಇನ್ನುಳಿದ ದುರ್ಬಲ ವರ್ಗಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರೇತರ ಸಂಸ್ಥೆಗಳ ಸಹಕಾರದಿಂದ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲಾಯಿತು. ಈ ಯೋಜನೆಗೆ ವ್ಯಯಿಸಿದ ಹಣ ಶೇಕಡ 9.97 ರಷ್ಟು. 10ನೇ ಯೋಜನೆಯ ಬುಡಕಟ್ಟು ಅಭಿವೃದ್ಧಿಯ ವಿಧಾನವೆಂದರೆ ಬುಡಕಟ್ಟು ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆಗಳಿಂದ ರಕ್ಷಿಸುವುದು ಮತ್ತು ಪ್ರೋತ್ಸಾಹಿಸುವುದು. ಅಲ್ಲದೆ ಕಿರು ಪ್ರಮಾಣದ ಅರಣ್ಯ ಉತ್ಪನ್ನಗಳಾದ ಔಷಧ ಸಸ್ಯಗಳನ್ನು ಬುಡಕಟ್ಟು ಜನರು ಉಪಯೋಗಿಸಿಕೊಳ್ಳಲು ಬೌದ್ಧಿಕ ಆಸ್ತಿಯ ಹಕ್ಕುಗಳಲ್ಲಿರುವ ಸೌಲಭ್ಯಗಳನ್ನು ಒದಗಿಸುವುದು.

### ಬುಡಕಟ್ಟು ಜನಾಂಗದ ಗುಣಲಕ್ಷಣಗಳು

**ಒಳ ಪಂಗಡ ವಿವಾಹ ಪದ್ಧತಿ**

ಬುಡಕಟ್ಟು ಜನರು ಸಮುದಾಯದ ಪವಿತ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದ ತಮ್ಮ ತಮ್ಮ ಬುಡಕಟ್ಟು ಪಂಗಡಗಳಲ್ಲಿಯೇ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ವ್ಯಕ್ತಿಯು ತನ್ನ ಬಾಳ ಸಂಗಾತಿಯನ್ನು ತನ್ನ ಬುಡಕಟ್ಟಿನ ಒಳಗಡೆಯೇ ಆಯ್ದುಕೊಳ್ಳುವುದು ಸಾಮಾಜಿಕ ನಿಯಮವಾಗಿರುತ್ತದೆ. ಬುಡಕಟ್ಟು ಜನರು ವಿವಾಹಕ್ಕೆ ಸಂಬಂಧಿಸಿದಂತೆ ರಕ್ತ ಸಂಬಂಧಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ಬುಡಕಟ್ಟು ಜನರು ಒಂದೇ ಬೆಡಗು ಅಥವಾ ಕುಲದಲ್ಲಿ ವಿವಾಹ ಮಾಡಿಕೊಳ್ಳುವುದಿಲ್ಲ. ಇವರು ಹೊರ ಬಾಂಧವ್ಯ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ಕಾರಣವೇನೆಂದರೆ ಒಂದೇ ರಕ್ತ ಸಂಬಂಧವಿರುವ ಕುಲದಲ್ಲಿ ವಿವಾಹ ಮಾಡಿಕೊಂಡರೆ ವಂಶಾಭಿವೃದ್ಧಿಗೆ ತೊಂದರೆಯಾಗುತ್ತದೆ ಎಂಬ ನಂಬಿಕೆ ಬುಡಕಟ್ಟು ಜನರಲ್ಲಿದೆ.

**ಒಂದೇ ಸಂಸ್ಕೃತಿ**

ಬುಡಕಟ್ಟು ಜನರ ಕಲೆ, ಸಾಹಿತ್ಯ, ಊಟೋಪಚಾರ, ವೇಷಭೂಷಣ ಮುಂತಾದ ಸಾಂಸ್ಕೃತಿಕ ವಿಷಯಗಳಲ್ಲಿ ಸಾಮ್ಯತೆಯನ್ನು ಹೊಂದಿದ್ದಾರೆ. ಇವರ ಸಂಸ್ಕೃತಿಯು ಜಾತಿ ವ್ಯವಸ್ಥೆಯ ಸಂಸ್ಕೃತಿಗಿಂತ ಭಿನ್ನವಾಗಿರುತ್ತದೆ. ಈ ಕಾರಣದಿಂದಲೇ ಬುಡಕಟ್ಟು ಜನರ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಲು ಸಾಧ್ಯವಿದೆ.

## 6.3 ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

### ಬುಡಕಟ್ಟು ಅಭಿವೃದ್ಧಿಯ ವಿಧಾನಗಳು

ಸ್ವಾತಂತ್ರ್ಯ ನಂತರ ಭಾರತ ಸರ್ಕಾರವು ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತು. ಅವುಗಳಲ್ಲಿ ಬುಡಕಟ್ಟು ಅಭಿವೃದ್ಧಿಯೂ ಒಂದು ಮಹತ್ವವಾದ ಕಾರ್ಯಯೋಜನೆಯಾಗಿತ್ತು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ತಕ್ಕರ ಬಾಪಾ ಮುಂತಾದ ಮಹನೀಯರುಗಳು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ನೀತಿಗಳನ್ನು ಪ್ರಸ್ತಾಪಿಸಿ ಅಂದೇ ರೂಪಿಸಿದ್ದರು. ಹಾಗಾದರೆ ಬುಡಕಟ್ಟು ಜನರ ಅಭಿವೃದ್ಧಿ ಹೇಗಾಗಬೇಕು? ಯಾವ ತೆರನಾದ ನೀತಿಗಳು ಅಥವಾ ಯೋಜನೆಗಳು ಬುಡಕಟ್ಟು ಜನರ ಅಭಿವೃದ್ಧಿಗೆ ಪೂರಕವಾಗಿ ಸಹಾಯಕವಾಗುತ್ತವೆ? ಯೋಜನೆಗಳ ಸ್ವರೂಪ ಹೇಗಿರಬೇಕು? ಬುಡಕಟ್ಟುಗಳು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬೇಕೆ? ಅಥವಾ ರಾಷ್ಟ್ರೀಯ ಸಮುದಾಯದಲ್ಲಿ ವಿಲೀನವಾಗಬೇಕೆ? ಈ ತೆರನಾದ ಪ್ರಶ್ನೆಗಳು ಸಮಾಜಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ತಲೆಹೊಕ್ಕು ನಿದ್ರೆಗೆಡಿಸಿದವು. ಪರಿಣಾಮವಾಗಿ ಇಬ್ಬರು ವಿದ್ವಾಂಸರಾದ ವೆರಿಯರ್ ಎಲ್ವಿನ್ ಮತ್ತು ಜಿ.ಎಸ್. ಘುರ್ರೆ ನಡುವೆ ಈ ಪ್ರಶ್ನೆಗಳ ಬಗ್ಗೆ ಮತ್ತು ಬುಡಕಟ್ಟುಗಳ ಸಮಸ್ಯೆ ಮತ್ತು ಅಭಿವೃದ್ಧಿಯ ಬಗ್ಗೆ ವಾದ ವಿವಾದಗಳು ನಡೆದು ಮಹತ್ವಪೂರ್ಣ ಚರ್ಚೆಗಳು ನಡೆಯುಲು ಅವಕಾಶವಾಯಿತು. ಆ ಸಮಯದಲ್ಲಿ ವೆರಿಯರ್ ಎಲ್ವಿನ್‌ರವರು The Baiga (1939) ಮತ್ತು The Aboriginals (1944) ಎಂಬ ಎರಡು ಬುಡಕಟ್ಟು ಅಧ್ಯಯನಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದರು. ಈ ಪುಸ್ತಕಗಳಲ್ಲಿ ಎಲ್ವಿನ್‌ರವರು "ಬುಡಕಟ್ಟುಗಳನ್ನು ಹೊರಗಿನವರಿಂದ ರಕ್ಷಿಸಲು ಪ್ರತ್ಯೇಕವಾಗಿಡಬೇಕು" ಎಂದು ಪ್ರತಿಪಾದಿಸಿದ್ದರು. ವೆರಿಯರ್ ಎಲ್ವಿನ್‌ರವರು ಬುಡಕಟ್ಟುಗಳ ಸಂಸ್ಕೃತಿಯುನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೇ ಅವರನ್ನು ಪ್ರತ್ಯೇಕವಾಗಿಯೇ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಪ್ರೊ.ಜಿ.ಎಸ್. ಗುರ್ರೆರವರು ಬುಡಕಟ್ಟುಗಳು "ಹಿಂದುಳಿದ ಹಿಂದೂಗಳಾಗಿದ್ದು, ಮುಖ್ಯವಾಹಿನಿಯಲ್ಲಿ ವಿಲೀನವಾಗುವುದೇ ಒಳಿತು" ಎಂಬ ಅಭಿಪ್ರಾಯ ಹೊಂದಿದ್ದರು. ಮುಂದುವರಿದು ಘುರ್ರೆಯವರು "ಭಾರತದ ಬುಡಕಟ್ಟುಗಳು ಬಹುದೊಡ್ಡ ಜನಸಂಖ್ಯೆಯಿಂದ ಬೇರ್ಪಟ್ಟಿರುವುದೇ ಅವರ ಹಿಂದುಳಿದಿರುವಿಕೆಗೆ ಕಾರಣ" ಎಂದು ನಂಬಿದ್ದರು. ಆದ್ದರಿಂದ ಬುಡಕಟ್ಟುಗಳ ಕಡು ಬಡತನವನ್ನು ಹೋಗಲಾಡಿಸಲು ಮತ್ತು ಜೀವನ ಮಟ್ಟವನ್ನು ವೃದ್ಧಿಸಲು ಮುಖ್ಯವಾಹಿನಿಯಲ್ಲಿ ವಿಲೀನ ಮಾಡಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

**ಬುಡಕಟ್ಟು ವಿವಾಹ**

ಒಬ್ಬ ಮಹಿಳೆ ಒಬ್ಬರಿಗಿಂತ ಹೆಚ್ಚು ಪುರುಷರನ್ನು ವಿವಾಹ ಮಾಡಿಕೊಂಡರೆ ಆ ವಿಧದ ವಿವಾಹಕ್ಕೆ ಬಹುಪತಿತ್ವ ವಿವಾಹ ಎಂದು ಕರೆಯುತ್ತಾರೆ. ಬಹುಪತಿತ್ವ ವಿವಾಹ ಪದ್ಧತಿಯು ಭಾರತದ ಹೆಚ್ಚಿನ ಬುಡಕಟ್ಟುಗಳಲ್ಲಿ ಆಚರಣೆಯಲ್ಲಿರದೇ ಕೆಲವು ಬುಡಕಟ್ಟುಗಳಲ್ಲಿ ಮಾತ್ರ ಕಂಡುಬರುತ್ತದೆ. ನೀಲಗಿರಿಯ ತೋಡ ಬುಡಕಟ್ಟುಗಳಲ್ಲಿ ಮತ್ತು ಮೇಘಾಲಯದ ಖಾಸೀಗಳಲ್ಲಿ ಈ ರೀತಿಯ ಮದುವೆ ಪದ್ಧತಿ ರೂಢಿಯಲ್ಲಿದೆ. ತೋಡರಲ್ಲಿ ಹೆಣ್ಣು ಶಿಶುಹತ್ಯೆ ರೂಢಿಯಲ್ಲಿದ್ದುದರಿಂದ ಸ್ತ್ರೀಯರ ಸಂಖ್ಯೆ ಕಡಿಮೆಯಾಗಿ ಈ ಪದ್ಧತಿ ಅನಿವಾರ್ಯವಾಯಿತು ಎಂದು ನಂಬಲಾಗಿದೆ. ಇವರಲ್ಲಿ ಮುಕ್ತ ಪ್ರೇಮದಲ್ಲಿ ವಿಶ್ವಾಸವಿರುವುದರಿಂದ ಕನ್ಯೆ ಒಬ್ಬನನ್ನು ವಿವಾಹವಾದ ನಂತರ ಅವಳು ಅವನ ಸಹೋದರರಿಗೂ ಪತ್ನಿಯಾಗುತ್ತಾಳೆ. ಇವರಲ್ಲಿ ಗರ್ಭಿಣಿಯರಾದ ಸ್ತ್ರೀಯರನ್ನು ಪುರುಷರು ವಿವಾಹವಾಗುತ್ತಾರೆ. ಒಬ್ಬನಿಗಿಂತ ಹೆಚ್ಚು ತಂದೆಗಳಿರುವ ಮಕ್ಕಳು ಅದೃಷ್ಟವಂತರೆಂದು ತೋಡರು ಭಾವಿಸುತಾರೆ.

ವಿದ್ವಾಂಸರುಗಳ ವಾದ, ಚರ್ಚೆ, ಪ್ರತಿಪಾದನೆ ಮತ್ತು ಸಂವೇದನೆಗಳ ದೃಷ್ಟಿಕೋನ ಏನೇ ಇದ್ದರೂ, ಇಂದು ಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ, ಪರಿಸರೀಯ ಸ್ಥಿತಿ–ಗತಿಗಳನ್ನು ಅವಲೋಕಿಸಿದರೆ, ಕೈಗಾರೀಕರಣ, ನಗರೀಕರಣ, ಆಧುನೀಕರಣ ಮತ್ತು ಪಾಶ್ಚಾತ್ತೀಕರಣದ ಪ್ರಕ್ರಿಯೆಗಳು ಬುಡಕಟ್ಟು ಜನಜೀವನದ ಮೇಲೆ ಪ್ರಭಾವ ಬೀರುತ್ತಿರುವುದು ಕಂಡು ಬರುತ್ತಿದೆ. ಒಂದು ವೇಳೆ ನಾವು ಬುಡಕಟ್ಟುಗಳನ್ನು ಪ್ರತ್ಯೇಕವಾಗಿಟ್ಟು ಅವರನ್ನು ಸಂರಕ್ಷಿಸುತ್ತೇವೆ ಮತ್ತು ಅವರ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಹೇಳಿದರೆ ಅದು ಅಪ್ಪಟ ಸುಳ್ಳಾಗುತ್ತದೆ. ಕಾರಣ ಬುಡಕಟ್ಟು ಜನರ ಮತ್ತು ಅವರ ಸಂಸ್ಕೃತಿಯ ಮೇಲೆ ಈ ಮೇಲೆ ಹೇಳಿದ ಪ್ರಕ್ರಿಯೆಗಳು ಬಿರುಗಾಳಿಯಾಗಿ ಬೀಸಿ ತಲ್ಲಣವನ್ನು ಎಬ್ಬಿಸುತ್ತಿವೆ. ನಾವು ಎಷ್ಟೇ ಪ್ರಯತ್ನ ಪಟ್ಟರೂ ನಗರೀಕರಣ, ಆಧುನೀಕರಣ ಪ್ರಕ್ರಿಯೆಗಳ ಪ್ರಭಾವವನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ ಮತ್ತು ಇವು ಈಗಿನ ಸಮಾಜಗಳ ಬದಲಾವಣೆಯ ಅವಿಭಾಜ್ಯ ಅಂಗಗಳಾಗಿವೆ. ಒಂದು ವಾದದ ಪ್ರಕಾರ ಬುಡಕಟ್ಟಿನ ಸಂಸ್ಕೃತಿಯು ನಾಶವಾಗುತ್ತಿದೆ, ಅದನ್ನು ರಕ್ಷಿಸಿ ಬುಡಕಟ್ಟಿನ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬುದು. ಆದರೆ ಬುಡಕಟ್ಟುಗಳಿಗೆ ಕೇವಲ ಸಾಂಸ್ಕೃತಿಕ ಅನನ್ಯತೆಗಳಿರದೆ ಇತರೆ ಸಾಮಾಜಿಕ–ಆರ್ಥಿಕ ಅಥವಾ ಇನ್ನಿತರೆ ಅನನ್ಯತೆಗಳು ಇರುತ್ತವೆ. ಉದಾಹರಣೆಗಾಗಿ ಬುಡಕಟ್ಟುಗಳ ದೇಶೀಯ ತಂತ್ರಜ್ಞಾನ ಮತ್ತು ಬುಡಕಟ್ಟುಗಳ ದೇಶೀಯ ಔಷಧ ಪದ್ಧತಿ ಇಂದು ಇವುಗಳ ಸಂರಕ್ಷಣೆ ಅತ್ಯಗತ್ಯವಾಗಿದೆ. ಇವುಗಳನ್ನು ಕಾಪಾಡಿ ಇವುಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸಬೇಕಾಗುತ್ತದೆ. ಕಾಲ ಕಳೆದಂತೆಲ್ಲಾ ಹಲವು ತೆರನಾದ ಪ್ರಭಾವಗಳಿಗೆ ತುತ್ತಾಗಿ ಬುಡಕಟ್ಟುಗಳಲ್ಲಿ ಸಾಮಾಜಿಕ ಚಲನೆ ಮತ್ತು ಬದಲಾವಣೆ ಉಂಟಾಗುವುದರಿಂದ ಬುಡಕಟ್ಟು ಸಂಸ್ಕೃತಿ ಮತ್ತು ಅವರ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಬುಡಕಟ್ಟುಗಳು ಅರಣ್ಯಗಳಲ್ಲಿ ತಲೆತಲಾಂತರದಿಂದ ವಾಸಿಸುತ್ತಾ ಅರಣ್ಯ ಜೀವಿಗಳಿಗೆ ತೊಂದರೆ ಮಾಡದಂತೆ ಮತ್ತು ಗಿಡಮೂಲಿಕೆಯ ಔಷಧಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಅರಣ್ಯಗಳ ಅವಿಭಾಜ್ಯ ಅಂಗವಾಗಿದ್ದಾರೆ. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆಗಳೆಂದರೆ ಬುಡಕಟ್ಟುಗಳು ತಮ್ಮ ಪಾಡಿಗೆ ತಾವು ತಮ್ಮ ಮೂಲ ಸಂಸ್ಕೃತಿಯಲ್ಲಿ ಇರಬೇಕೆ? ಅಥವಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆ? ಅಥವಾ ಸಮಾಜದ ಭಾಗವಾಗಬೇಕೆ? ಎಂಬುದು. ಹೇಗೊ ಸಾಮಾಜಿಕ ಪರಿವರ್ತನೆಗಳ ಪ್ರಭಾವ ಬುಡಕಟ್ಟು ಜನರ ಮೇಲೆ ಆಗುವುದರಿಂದ, ಬುಡಕಟ್ಟು ಜನರ ಸಂಸ್ಕೃತಿ, ನೆಲ, ಜಲ, ಅದರ ಸಾಂಪ್ರದಾಯಿಕ ಕಸುಬು ತಂತ್ರಜ್ಞಾನವನ್ನು ಸಂರಕ್ಷಿಸಿಕೊಂಡೇ ಅವರನ್ನು ನಿಜವಾದ ಅಭಿವೃದ್ಧಿಯ ದಿಕ್ಕಿನತ್ತ ತರುವುದು ಸೂಕ್ತವಾದುದಾಗಿದೆ. ಮೂಲ

**ಬುಡಕಟ್ಟು ಕುಟುಂಬ**

ಭಾರತದ ಕೆಲವು ಬುಡಕಟ್ಟುಗಳಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿ ರೂಢಿಯಲ್ಲಿದೆ. ಮೇಘಾಲಯದ ಖಾಸೀ ಬುಡಕಟ್ಟು ಜನರು ಮಾತೃ ಪ್ರಧಾನ ಕುಟುಂಬ ಪದ್ಧತಿಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಇದೇ ರೀತಿ ಜಾತಿ ವ್ಯವಸ್ಥೆಯಲ್ಲಿ ಬರುವ ಕೇರಳದ ನಾಯರ್‌ಗಳಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿಯನ್ನು ತರವಾಡ್ ಎಂದು ಕರೆಯುತ್ತಾರೆ.

ಮಾತೃ ಪ್ರಧಾನ ಕುಟುಂಬ ಪದ್ಧತಿಯಿರುವ ಖಾಸೀ ಜನಾಂಗದಲ್ಲಿ ತಾಯಿಯೇ ಮನೆಯ ಯಜಮಾನಿ ಅಥವಾ ಮನೆಯೊಡತಿ. ಕುಟುಂಬದ ಆಗು ಹೋಗುಗಳನ್ನು ಆಕೆಯ ತಂದೆ ಅಥವಾ ಸಹೋದರ ನೋಡಿಕೊಳ್ಳುತ್ತಾನೆ. ಮಕ್ಕಳು ತಾಯಿಯ ಜೊತೆ ಹೆಚ್ಚು ಸಮಯ ಇರುವುದರಿಂದ ತಾಯಿಯ ಅಧಿಕಾರದ ಪ್ರಭಾವ ಮಕ್ಕಳ ಮೇಲಿರುತ್ತದೆ. ಗಂಡ ಅತಿಥಿಯಂತೆ ಹೆಂಡತಿಯ ಮನೆಗೆ ಬಂದು ಹೋಗುತ್ತಾನೆ. ಇಂತಹ ಕುಟುಂಬಗಳಲ್ಲಿ ಆಸ್ತಿಯ ಹಂಚಿಕೆಯು ಮಾತೃವಂಶೀಯ ಮೂಲಕ ನಡೆಯುತ್ತದೆ. ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳು ಮಾತೃ ಪ್ರಧಾನ ಕುಟುಂಬ ಪದ್ಧತಿಯಿಂದ ಪ್ರಭಾವಿತಗೊಂಡಿದ್ದು ಇತ್ತೀಚೆಗೆ ಜಾತಿಗಳ ಸಂಪರ್ಕದಿಂದಾಗಿ ಪಿತೃ ಪ್ರಧಾನ ಕುಟುಂಬ ಪದ್ಧತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ.

ಸೌಕರ್ಯಗಳಾದ ನೀರು, ವಿದ್ಯುತ್, ರಸ್ತೆ, ಶಾಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿ ಜೀವನ ಮಟ್ಟವನ್ನು ಉತ್ತಮ ಪಡಿಸುವುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಬುಡಕಟ್ಟು ಆಯೋಗದ ರಾಷ್ಟ್ರೀಯ ಅಧ್ಯಕ್ಷರು ಹೇಳಿರುವಂತೆ "ಎಷ್ಟೋ ಬುಡಕಟ್ಟು ಪುನರ್‌ವಸತಿ ಯೋಜನೆಗಳು ವಿಫಲವಾಗಿವೆ" ಎಂದಿದ್ದಾರೆ. ಪುನರ್‌ವಸತಿ ಕಾಲೋನಿಗಳಲ್ಲಿ ವಿದ್ಯುತ್, ರಸ್ತೆ, ಶಾಲಾ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟುಗಳು ವಾಸಿಸುವ ಪ್ರದೇಶಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪ್ರದೇಶ ಗಳೆಂದು ಘೋಷಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳನ್ನೊಳಗೊಂಡಂತೆ ಹಲವು ಬುಡಕಟ್ಟು ನೆಲೆಗಳು ಕಂದಾಯದ ದಾಖಲಾತಿಗಳಲ್ಲಿ ನಮೂದಿಸಲ್ಪಟ್ಟಿಲ್ಲ. ಅಂತಹ ಬುಡಕಟ್ಟು ನೆಲೆಗಳನ್ನು ಗುರುತಿಸಿ ಕಂದಾಯ ಗ್ರಾಮಗಳೆಂದು ಘೋಷಿಸಬೇಕು. ಆಗ ಮಾತ್ರ ಸರ್ಕಾರದ ಯೋಜನೆಯ ಕಾರ್ಯಕ್ರಮಗಳು ನೇರವಾಗಿ ಬುಡಕಟ್ಟು ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಶಾಲೆಗಳನ್ನು ಸ್ಥಾಪಿಸಿ ಪ್ರಾಥಮಿಕ ಶಿಕ್ಷಣವನ್ನು ಕೊಡುವುದು ಮುಖ್ಯವಾಗುತ್ತದೆ. ಜೊತೆಗೆ ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸುವುದು, ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.

**ಬುಡಕಟ್ಟು ಆರ್ಥಿಕತೆ**

ಕೆಲವು ಭಾರತದ ಬುಡಕಟ್ಟುಗಳು ಸ್ಥಳಾಂತರ ಬೇಸಾಯ ಕ್ರಮವನ್ನು ಅನುಸರಿಸುತ್ತಾರೆ. ಉತ್ತರ ಈಶಾನ್ಯ ವಲಯದ ಲೋತಾ ಆಗಮನಾಗ, ಖಾಸೀ ಮತ್ತು ಕುಕಿ ಬುಡಕಟ್ಟುಗಳು, ಮಧ್ಯಪ್ರದೇಶದ ಬೈಗಾ ಮತ್ತು ಗೊಂಡಾ ಬುಡಕಟ್ಟುಗಳು ಸ್ಥಳಾಂತರ ಬೇಸಾಯ ಕ್ರಮವನ್ನು ಅನುಸರಿಸುತ್ತಿವೆ. ಈ ರೀತಿಯ ಬೇಸಾಯ ಪದ್ಧತಿಯು ಉತ್ತರ ಈಶಾನ್ಯ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕಂಡು ಬರುತ್ತದೆ. ಕೃಷಿಯು ಒಂದು ಮುಖ್ಯವಾದ ಆರ್ಥಿಕ ನಿರ್ವಹಣೆಯ ಕಸುಬಾಗಿದ್ದು, ಬಹುತೇಕ ಭಾರತದ ಬುಡಕಟ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಬುಡಕಟ್ಟು ಜನರು ಸಣ್ಣ ಭೂಹಿಡುವಳಿಗಳನ್ನು ಹೊಂದಿದ್ದು, ತಮ್ಮ ಜೀವನ ನಿರ್ವಹಣೆಗೆ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಮಿಜೋರಾಂನ ಮಿಜೋಗಳು ಮತ್ತು ಅರುಣಾಚಲ ಪ್ರದೇಶದ ಅಪತಾನಿಗಳು ಸ್ಥಳಾಂತರಿ ಕೃಷಿ ಪದ್ಧತಿಯನ್ನು ಬಿಟ್ಟು ಸಾಮಾನ್ಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಉಳಿದಂತೆ ಸಂತಾಲರು, ಒರಾನ್, ಹೋ, ಕೊರವ, ಗೊಂಡಾ, ಭಿಲ್, ಬಿಲಾರ್, ಬಡಗಾ ಮತ್ತು ದಕ್ಷಿಣ ಭಾರತದ ಬಹುತೇಕ ಬುಡಕಟ್ಟುಗಳು ಉತ್ತಮ ಕೃಷಿಕರಾಗಿ ಹೊರಹೊಮ್ಮಿದ್ದಾರೆ.

ಬುಡಕಟ್ಟು ಸಮುದಾಯಗಳಲ್ಲಿ ಜೀತ ಪದ್ಧತಿಯಿಂದಾಗಿ ಶಾಲೆಗೆ ಹೋಗುವವರ ಸಂಖ್ಯೆ ಕಡಿಮೆ ಇದೆ. ಇಂದಿಗೂ ಜಮೀನ್ದಾರರು ಬುಡಕಟ್ಟು ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡು ಶಾಲೆಗೆ ಹೋಗುವುದನ್ನು ತಡೆಯುವ ವ್ಯವಸ್ಥಿತ ಸಂಚನ್ನು ಕೆಲವು ಕಡೆಗಳಲ್ಲಿ ನೋಡಬಹುದಾಗಿದೆ. ಶಾಲೆಗೆ ಕಲಿಯಲು ಹೋದರೆ ವಿದ್ಯಾವಂತರಾಗಿ ತಮ್ಮ ಹಕ್ಕುಗಳ ಪ್ರತಿಪಾದನೆಯ ಬಗ್ಗೆ ಅರಿವು ಬರುತ್ತದೆ. ಆಗಾಗ ನಮ್ಮ ಜಮೀನಿನಲ್ಲಿ ಮತ್ತು ಮನೆಯಲ್ಲಿ ಜೀತದಾಳುಗಳಾಗಿ ದುಡಿಯಲು ಬರುವುದಿಲ್ಲವೆಂದು ನಂಬಿ ಬೇಕಂತಲೇ ಅವರನ್ನು ಶಾಲೆಗೆ ಹೋಗದಂತೆ ನೋಡಿಕೊಳ್ಳುತ್ತಾರೆ. ಸರ್ಕಾರ ಇತ್ತೀಚೆಗೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಮತ್ತು ಉತ್ತೇಜನ ಕೊಡುತ್ತಿದ್ದು, ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿರುವುದರಿಂದ ಇಂದು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿರುವುದನ್ನು ನೋಡಬಹುದು. ಇಂತಹದೇ ಶಿಕ್ಷಣದ ಕಾರ್ಯಕ್ರಮಗಳನ್ನು ವಿಶೇಷವಾಗಿ ಬುಡಕಟ್ಟು ಜನರ ಮಕ್ಕಳಿಗಾಗಿ ಅವರಿರುವ ಪ್ರದೇಶಗಳಿಗೆ ವಿಸ್ತರಿಸಿದರೆ ಅದರಿಂದ ಈ ಜನರ ಮೊದಲ ಪೀಳಿಗೆಯ ಜನರ ಶಿಕ್ಷಣದ ದಾಹದ ಸಮಸ್ಯೆ ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ ಮತ್ತು ಬುಡಕಟ್ಟು ಜನರು ಎಲ್ಲರಂತೆ ವಿದ್ಯಾವಂತರಾಗಿ ಅವರೂ ಅಭಿವೃದ್ಧಿಯ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಶಿಕ್ಷಣ ಬುಡಕಟ್ಟು ಜನರಿಗೆ ಒಂದು ಮುಖ್ಯವಾದ ವಾಹಕವಾಗಿದೆ

ಮತ್ತು ಅವರ ಸಾಮಾಜಿಕ ಚಲನೆಗೆ ಅನುವು ಮಾಡಿಕೊಡುತ್ತದೆ. ಈ ಪ್ರಕ್ರಿಯೆಯಿಂದ ಬುಡಕಟ್ಟುಗಳ ಅನನ್ಯತೆಯನ್ನು ಉಳಿಸಿ ಮತ್ತು ಸಂರಕ್ಷಿಸಿಕೊಂಡೇ ಅವರ ಅಭಿವೃದ್ಧಿ ಮಾಡಬಹುದು. ಉದಾ: ಈಶಾನ್ಯ ವಲಯದ ನಾಗಾಗಳು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡೇ ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ರಕ್ಷಿಸಿ ಮತ್ತು ಪ್ರತಿಪಾದಿಸಿಕೊಂಡು ಅಭಿವೃದ್ಧಿ ಹೊಂದುತ್ತಿದ್ದಾರೆ. ಪರಿಣಾಮವಾಗಿ ಅಲ್ಲಿನ ಸರ್ಕಾರ ನಾಗಾ ಬುಡಕಟ್ಟುಗಳ ಪ್ರದೇಶವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಬಯಲು ಪ್ರದೇಶಗಳಲ್ಲಿ ಕಂಡುಬರುವ ಕೆಲವು ಬುಡಕಟ್ಟು ಜನಾಂಗಗಳು ಜಾತಿ ವ್ಯವಸ್ಥೆಯ ಪ್ರಭಾವದಿಂದಾಗಿ ತಮ್ಮ ಸಾಂಸ್ಕೃತಿಕ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸತ್ಯವಾದ ಮಾತು. ಅದಾಗುವುದಕ್ಕೆ ಮೊದಲು ಅವರ ಸಾಂಸ್ಕೃತಿಕ ವೈವಿಧ್ಯತೆಯನ್ನು ರಕ್ಷಿಸಿ ದಾಖಲಿಸುವುದು ಅಗತ್ಯವಾಗಿದೆ. ಜೊತೆಗೆ ಹೆಚ್ಚಿನದಾಗಿ ಬುಡಕಟ್ಟುಗಳ ಸಾಂಸ್ಕೃತಿಕ ರಚನೆ ಮತ್ತು ಸ್ವರೂಪಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿ ಯೋಜನೆಗಳು ವಿಫಲಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬುಡಕಟ್ಟುಗಳ ಆಚಾರ-ವಿಚಾರಗಳು ನಾಶವಾಗದಂತೆ ನೋಡಿಕೊಳ್ಳಬೇಕು ಎಂಬುದು ಗಾಂಧೀಜಿಯವರ ಒಂದು ಮುಖ್ಯವಾದ ಆದರ್ಶವಾಗಿತ್ತು. ಯಾವ ರೀತಿಯಿಂದಲೂ ಅವರ ಸಂಸ್ಕೃತಿಯು ನಾಶವಾಗದಂತೆ ಅವರನ್ನು ಉದ್ಧರಿಸಬೇಕೆಂಬುದೇ ಅವರ ಇಚ್ಛೆಯಾಗಿತ್ತು. ನೆಹರೂರವರೂ ಸಹ ತಮ್ಮ ಪಂಚಶೀಲ ತತ್ವಗಳಲ್ಲಿ ಬುಡಕಟ್ಟುಗಳ ಜೀವನದ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಗೆ ಧಕ್ಕೆಯಾಗದಂತೆ ಸುಧಾರಿಸಬೇಕು, ಅಲ್ಲದೆ ರಸ್ತೆ, ಸಾರಿಗೆ ಸಂಪರ್ಕ, ಶಾಲೆಗಳ ಸ್ಥಾಪನೆ, ವೈದ್ಯ ಶಾಲೆ ಮತ್ತು ಗೃಹ ಕೈಗಾರಿಕೆಗಳ ನಿರ್ಮಾಣವು ಅವಶ್ಯಕ ಎಂದು ಅಭಿಪ್ರಾಯ ಪಟ್ಟಿದ್ದರು. ಜೊತೆಗೆ ಬುಡಕಟ್ಟು ಜನರಿಗೆ ಸೇರಿದ ಅರಣ್ಯ ಮತ್ತು ಭೂಮಿಗೆ ಸಂಬಂಧಿಸಿದ ಹಕ್ಕುಗಳನ್ನು ಸಂರಕ್ಷಿಸಬೇಕು ಎಂಬುದಾಗಿ ಹೇಳಿದ್ದರು.

**ಕರ್ನಾಟಕದ ಬುಡಕಟ್ಟುಗಳ ಕುಲ ಕಸುಬು**

ಕರ್ನಾಟಕದ ಬುಡಕಟ್ಟುಗಳಲ್ಲಿ ಕುಲಕಸುಬುಗಳಿಗೆ ಸಂಬಂಧಿಸಿದಂತೆ ವೈವಿಧ್ಯತೆಯನ್ನು ಕಾಣಬಹುದು. ಇಲ್ಲಿನ ಕೆಲವು ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳಾಗಿದ್ದು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಸುಬಿನ ನಿಮಿತ್ತ ವಲಸೆ ಹೋಗುತ್ತಾರೆ. ಉತ್ತರ ಕರ್ನಾಟಕದ ಚೆಂಚು, ಚೆಂಚ್‌ವಾರ್, ಅಡ್ವಿ ಚೆಂಚಾರ್, ರಾಜಗೊಂಡ, ಹಕ್ಕಿ ಪಿಕ್ಕಿ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳಾಗಿವೆ. ಆದರೆ ಕಾಡುಗೊಲ್ಲ ಬುಡಕಟ್ಟಿನವರು ಇತ್ತೀಚೆಗೆ ಬದಲಾವಣೆಯ ಗಾಳಿಯಿಂದಾಗಿ ಒಂದೆಡೆ ನೆಲೆ ನಿಂತು ಜೀವನ ಮಾಡುತ್ತಾರೆ. ರಾಜ್ಯದಲ್ಲಿ ಜೇನು ಕುರುಬ, ಸೋಲಿಗ, ಚೆಂಚು, ಹಕ್ಕಿಪಿಕ್ಕಿ, ಬೇಡ ಇತ್ಯಾದಿ ಬುಡಕಟ್ಟುಗಳು ಬೇಟೆ ಹಾಗೂ ಆಹಾರ ಸಂಗ್ರಾಹಕ ಬುಡಕಟ್ಟುಗಳಾಗಿವೆ. ಈ ಹಿಂದೆ ಹೇಳಿದಂತೆ ಕಾಡುಗೊಲ್ಲ ಬುಡಕಟ್ಟು ಪಶುಪಾಲನೆಯ ಕಾಯಕ ಮಾಡುವ ಬುಡಕಟ್ಟಾಗಿದ್ದು, ಇದರ ಜೊತೆಗೆ ಕಾಡುಕುರುಬ, ಜೇನುಕುರುಬ, ಹಸಲ, ಇರುಳ, ಕೋಟ ಪಳ್ಳಿಯನ್, ಪಣಿಯನ್, ಯರವ ಇತ್ಯಾದಿ ಬುಡಕಟ್ಟುಗಳು ಕುರಿಸಾಕಣೆ ಮತ್ತು ಪಶುಪಾಲನೆಯನ್ನು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನಾಗಿ ಮುಂದುವರಿಸಿಕೊಂಡು ಬಂದಿವೆ. ಇತ್ತೀಚೆಗೆ ನಾಯಕ, ಮರಾಠಿ ನಾಯಕ, ಬೇಡ ಮತ್ತು ದಕ್ಷಿಣ ಕರ್ನಾಟಕದ ಕೆಲವು ಬುಡಕಟ್ಟುಗಳು ಕೃಷಿಯನ್ನು ತಮ್ಮ ಜೀವನದ ಮುಖ್ಯ ಕಸುಬನ್ನಾಗಿ ಮುಂದುವರಿಸಿಕೊಂಡು ಬಂದಿವೆ. ದಕ್ಷಿಣ ಕನ್ನಡದ ಮತ್ತು ಉಡುಪಿ ಜಿಲ್ಲೆಯ ಕೊರಗ ಬುಡಕಟ್ಟಿನವರು ಹಿಂದೆ ಬೇಟೆಯಾಡುವುದನ್ನು ತಮ್ಮ ವೃತ್ತಿಯನ್ನಾಗಿಕೊಂಡಿದ್ದರು. ಜೊತೆಗೆ ಕಾಡಿನ ಉತ್ಪನ್ನಗಳಾದ ಗೆಡ್ಡೆ ಗೆಣಸು, ಹಣ್ಣುಗಳನ್ನು ಸಂಗ್ರಹಿಸಿ ಅದರಿಂದ ಜೀವನ ನಿರ್ವಹಣೆ ಮಾಡುತ್ತಿದ್ದರು. ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು, ತೊಗಟೆ ಸಂಗ್ರಹ ಇತ್ಯಾದಿಗಳು ಉಪಕಸುಬುಗಳಾಗಿದ್ದವು. ಇತ್ತೀಚೆಗೆ ಸಾಂಪ್ರದಾಯಿಕ ಕಸುಬುಗಳ ಕಣ್ಮರೆಯಿಂದಾಗಿ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದಾಗಿ ನಿಧಾನಗತಿಯಲ್ಲಿ ಕೊರಗರಲ್ಲಿ ಉದ್ಯೋಗ ಚಲನೆ ಕಂಡು ಬರುತ್ತಿದೆ. ಆದರೆ ಇದನ್ನು ಇತರೆ ಬುಡಕಟ್ಟುಗಳಿಗೆ ಹೋಲಿಸಿದರೆ ಉದ್ಯೋಗ ಸಂಚಲನೆ ತುಂಬಾ ಕಡಿಮೆ ಎಂದು ಹೇಳಬಹುದು.

**ಬುಡಕಟ್ಟುಗಳಲ್ಲಿ ಬದಲಾವಣೆ ಮತ್ತು ಸರ್ಕಾರೇತರ ಸಂಸ್ಥೆಗಳು**

ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರದ ಜೊತೆಗೆ ಕೆಲವು ಸರ್ಕಾರೇತರ ಸಂಸ್ಥೆಗಳು ಕೈ ಜೋಡಿಸಿರುವುದು ಇತ್ತೀಚಿನ ವಿದ್ಯಮಾನಗಳಲ್ಲಿ ಒಂದು. ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಗಳು ಬುಡಕಟ್ಟುಗಳಿಗೆ ತಲುಪುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಈ ನಿಟ್ಟಿನಲ್ಲಿ ಹಲವು ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪರಿಣಾಮಾತ್ಮಕವಾಗಿ ಭಾಗವಹಿಸಿರುವುದು ಶ್ಲಾಘನೀಯವಾದುದು. ಆದಾಗ್ಯೂ, ಕೆಲವು ಸರ್ಕಾರೇತರ ಸಂಸ್ಥೆಗಳು ಹೆಸರಿಗೆ ಮಾತ್ರ ಅಭಿವೃದ್ಧಿಯ ನೆಪದಲ್ಲಿ ಹಣ ಮಾಡುವ ಸಂಸ್ಥೆಗಳಾಗಿ ರೂಪುಗೊಳ್ಳುತ್ತಿವೆ. ಬುಡಕಟ್ಟುಗಳ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಅಭಿವೃದ್ಧಿಯಾಗಿರದೆ ಇತರೆ ಸಾಮಾಜಿಕ–ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ಸ್ವಾತಂತ್ರ್ಯ ನಂತರದ ದಿನಗಳಿಂದಲೂ ಬುಡಕಟ್ಟು ಅಭಿವೃದ್ಧಿಯ ಬಗ್ಗೆ ನೆಹರೂರವರನ್ನು ಒಳಗೊಂಡಂತೆ ಹತ್ತು ಹಲವಾರು ವ್ಯಕ್ತಿಗಳು, ಸಂಘ ಸಂಸ್ಥೆಗಳು, ಚಿಂತನೆ ನಡೆಸಿರುವುದನ್ನು ಗಮನಿಸಬಹುದು. ಸರ್ಕಾರಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಬುಡಕಟ್ಟು ಅಭಿವೃದ್ಧಿಯಲ್ಲಿ ತೊಡಗಿ ಕೊಂಡಿರುವುದು ಗಮನಾರ್ಹ ಸಂಗತಿ. ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮೊದಲು ಬುಡಕಟ್ಟು ಸಮಸ್ಯೆಗಳು ಗುರುತಿಸಲ್ಪಡಬೇಕು. ಬುಡಕಟ್ಟು ಸಮಸ್ಯೆಗಳನ್ನು ಗುರುತಿಸಬೇಕಾದರೆ ಅವುಗಳ ಶಾಸ್ತ್ರೀಯ ಮತ್ತು ವೈಜ್ಞಾನಿಕ ಅಧ್ಯಯನ ಅವಶ್ಯಕ. ಈ ದಿಸೆಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ಕೆಲವು ಸಂಸ್ಥೆಗಳು ಬುಡಕಟ್ಟು ಜನರ ಜೀವನ ಅಥವಾ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದರ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಸಂಬಂಧವಾಗಿ ಭಾರತದಲ್ಲಿ ಅನೇಕ ಸಂಸ್ಥೆಗಳು ಬುಡಕಟ್ಟು ಅಧ್ಯಯನವನ್ನು ಕೈಗೊಂಡಿವೆ. ಅವುಗಳಲ್ಲಿ ಮುಖ್ಯವಾದಂತಹುದು. ಇದು ಬುಡಕಟ್ಟು ಜನರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಸ್ಥೆ. ಬುಡಕಟ್ಟು ಜನರ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು, ಅವರ ಜೀವನ ವಿಧಾನಗಳ ಬಗ್ಗೆ ಅಧ್ಯಯನ ಮಾಡುವುದು ಇದರ ಕಾರ್ಯವಾಗಿದೆ.

**ಬುಡಕಟ್ಟು ಧರ್ಮ**

ಬುಡಕಟ್ಟು ಜನರು ದೇವರು, ಧರ್ಮಗಳಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದು, ಜೀವನದ ಆಗು ಹೋಗುಗಳಿಗೆ ಅಗೋಚರ ಶಕ್ತಿಯೇ ಮೂಲ ಕಾರಣವೆಂದು ನಂಬಿದ್ದಾರೆ. ಬುಡಕಟ್ಟು ಧರ್ಮವು ಸಮಾಜದ ವ್ಯವಸ್ಥೆಯಿಂದ ದೂರವಿದ್ದು, ತನ್ನದೇ ಆದ ಸಾಮಾಜಿಕ ನಿಯಂತ್ರಣದ ಸಾಮರ್ಥ್ಯವನ್ನು ಪಡೆದಿದೆ. ಬುಡಕಟ್ಟುಗಳ ಧಾರ್ಮಿಕ ನಂಬಿಕೆ ಅಥವಾ ಧರ್ಮವು ಸಮಾಜದ ಅಥವಾ ಸಮುದಾಯ ವಿರೋಧಿ ಧರ್ಮವಲ್ಲ. ಬದಲಿಗೆ ಸಮುದಾಯಕ್ಕೆ ಒಳ್ಳೆಯದನ್ನು ಬಯಸುವ ಧರ್ಮವಾಗಿದೆ. ಬುಡಕಟ್ಟು ಜನರು ಸರ್ವ ಚೇತನವಾದಿಗಳು. ಇವರು ಪ್ರಕೃತಿಯ ಅಂಗಗಳಾದ ಸೂರ್ಯ, ಚಂದ್ರ, ಭೂಮಿ, ಗಿಡ, ಮರ, ನದಿ, ಸರೋವರ, ಬೆಟ್ಟ ಮುಂತಾದವುಗಳನ್ನು ಪೂಜ್ಯ ದೇವರುಗಳೆಂದು ಆರಾಧಿಸುತ್ತಾರೆ. ಅಲ್ಲದೆ ಇವರು ಅಣು ರೇಣು ತೃಣ ಕಾಷ್ಠಗಳಲ್ಲಿಯೂ ಪರಮಾತ್ಮ ಅಡಗಿದ್ದಾನೆಂದು ನಂಬುತ್ತಾರೆ. ಸಾಮಾನ್ಯವಾಗಿ ಭಾರತದ ಬುಡಕಟ್ಟು ಜನರು ತಮ್ಮ ಪೂರ್ವಿಕರನ್ನು ಅಥವಾ ಬುಡಕಟ್ಟಿನ ಮೂಲ ಪುರುಷರನ್ನು ಅವರು ಸಮುದಾಯಕ್ಕೆ ಮಾಡಿದ ಉತ್ತಮ ಕೆಲಸಗಳಿಂದಾಗಿ ಅವರ ಮರಣದ ನಂತರ ಅವರಿಗೆ ದೇವಾಲಯ ನಿರ್ಮಿಸಿ ದೇವರೆಂದು ಪೂಜಿಸುತ್ತಾರೆ. ಅವರ ದೇವರುಗಳು ಬುಡಕಟ್ಟು ಜನರ ಸಾಂಸ್ಕೃತಿಕ ವೀರರಾಗುತ್ತಾರೆ. ಬುಡಕಟ್ಟು ಜನರು ತಮ್ಮ ದೇವರುಗಳಿಗೆ ಉತ್ಸವ ಮತ್ತು ಹಬ್ಬಗಳನ್ನು ಮಾಡುತ್ತಾರೆ. ಇವರ ಹಬ್ಬ ಮತ್ತು ಜಾತ್ರೆಗಳು ತಮ್ಮ ಸಾಂಸ್ಕೃತಿಕ ವೀರರ ಹೆಸರಿನಲ್ಲಿಯೇ ಆಚರಿಸಲ್ಪಡುತ್ತವೆ. ಇಂತಹ ಹಬ್ಬ ಮತ್ತು ಜಾತ್ರೆಗಳ ಸಂದರ್ಭದಲ್ಲಿ ಬುಡಕಟ್ಟಿನ ಜನರು ಸಾಮುದಾಯಿಕವಾಗಿ ಪಾಲ್ಗೊಳ್ಳುತ್ತಾರೆ. ಮಾಟ ಮತ್ತು ಮಂತ್ರ ವಿದ್ಯೆಯು ಬುಡಕಟ್ಟಿನ ಧಾರ್ಮಿಕ ಲಕ್ಷಣವಾಗಿದೆ. ಇದರಲ್ಲೂ ಪ್ರೇತ ರೂಪ ಮತ್ತು ಶಕ್ತಿ ರೂಪ ಎಂಬ ಎರಡು ನಮೂನೆಗಳಿವೆ. ಮಾಟ ಮಂತ್ರಗಳ ನೆರವಿನಿಂದ ಅಲೌಕಿಕ ಶಕ್ತಿಗಳ ನೆರವನ್ನು ಪಡೆಯಬಹುದೆಂದು ಇವರು ನಂಬುತ್ತಾರೆ.

ಬುಡಕಟ್ಟುಗಳ ಬಗ್ಗೆ ಅಧ್ಯಯನ ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ನಡೆಯುತ್ತದೆ. ವಿಶ್ವವಿದ್ಯಾಲಯಗಳು ಸರ್ಕಾರದಿಂದ ಮತ್ತು ಯು.ಜಿ.ಸಿ.ಯಿಂದ ಧನ ಸಹಾಯದ ನೆರವಿನಿಂದ ಬುಡಕಟ್ಟು ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿವೆ. ಮದರಾಸು ವಿಶ್ವವಿದ್ಯಾನಿಲಯ ಈ ರೀತಿಯ ಧನಸಹಾಯ ಪಡೆದು ಗಮನಾರ್ಹ ರೀತಿಯ ಕೆಲಸ ಮಾಡಿದೆ ಎಂದು ಹೇಳಲಾಗುತ್ತಿದೆ. ಇದೇ ರೀತಿ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರ ವಿಭಾಗಗಳು, ಮಾನವಶಾಸ್ತ್ರ ವಿಭಾಗಗಳು, ಕನ್ನಡ ವಿಭಾಗಗಳು ಬುಡಕಟ್ಟು ಅಧ್ಯಯನ ವಿಭಾಗಗಳು ಹಲವು ರೀತಿಯ ಬುಡಕಟ್ಟು ಯೋಜನೆಗಳನ್ನು ಕೈಗೆತ್ತಿಕೊಂಡು, ಬುಡಕಟ್ಟು ಜನರ ಜೀವನ, ಸಮಸ್ಯೆಗಳು, ಜಾನಪದ, ಅಭಿವೃದ್ಧಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಮಾಡುತ್ತಿವೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ರಾಜ್ಯ ಸರ್ಕಾರಗಳು ಅದರಲ್ಲೂ ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟುಗಳ ಅಧ್ಯಯನಕ್ಕೆ ವಿಶೇಷ ಆಸಕ್ತಿ ವಹಿಸಿ, ತನ್ನ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇತ್ಯಾದಿ ಇಲಾಖೆಗಳ ಮೂಲಕ ಬುಡಕಟ್ಟು ಜನರ ಅಧ್ಯಯನಕ್ಕೆ ಪ್ರೋತ್ಸಾಹಿಸಿ, ಪುಸ್ತಕ ಪ್ರಕಟಣೆಗೆ ಅನುವು ಮಾಡಿಕೊಟ್ಟಿದೆ. ಈ ಮೇಲೆ ಹೇಳಿದ ಇಲಾಖೆಗಳ ವತಿಯಿಂದ ಹಲವಾರು ಬುಡಕಟ್ಟು ಅಧ್ಯಯನಗಳ ಕುರಿತ ಪುಸ್ತಕಗಳು ಪ್ರಕಟವಾಗಿವೆ. ಅಲ್ಲದೆ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳು ಬುಡಕಟ್ಟು ಅಧ್ಯಯನದ ಕುರಿತು ಉಪನ್ಯಾಸಗಳನ್ನು ಏರ್ಪಡಿಸುವುದರೊಂದಿಗೆ, ಬುಡಕಟ್ಟುಗಳ ಕುರಿತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನಗಳನ್ನು ಕೈಗೊಂಡು ಕೃತಿ ಪ್ರಕಟಣೆಯಲ್ಲಿ ತೊಡಗಿವೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ ಈ ಎಲ್ಲಾ ಸಂಸ್ಥೆಗಳು, ಇಲಾಖೆಗಳು, ಪ್ರಸಾರಾಂಗಗಳು ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಿರುವುದು. ಈ ಒಂದು ಪ್ರಯತ್ನದಿಂದ ನಾಡಿನ ಜನತೆ ತಮ್ಮ ಮಾತೃ ಭಾಷೆಯಲ್ಲಿ ಬುಡಕಟ್ಟಿನ ಸಂಪೂರ್ಣ ಚಿತ್ರಣ ದೊರೆಯುವುದರಿಂದ ಅಲ್ಲಿರುವ ಸಮಸ್ಯೆಗಳನ್ನಾಗಲೀ, ಅಥವಾ ಅಭಿವೃದ್ಧಿಯನ್ನಾಗಲೀ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಜೊತೆಗೆ ಇದು ನೀತಿ ನಿರೂಪಕರಿಗೂ ಸಹಾಯಕವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಮತ್ತೊಂದು ಮೈಲುಗಲ್ಲೆಂದರೆ ಕನ್ನಡ ಹಂಪಿ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗವನ್ನು ಸ್ಥಾಪಿಸಲಾಗಿದೆ. ಈ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಬುಡಕಟ್ಟುಗಳ ಅಧ್ಯಯನ ಕೈಗೊಂಡಿದ್ದು, ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಪಿಎಚ್.ಡಿ. ಅಧ್ಯಯನಗಳೂ ಒಳಗೊಂಡಂತೆ, ಬುಡಕಟ್ಟು ಜನರ ಸಮಸ್ಯೆಗಳ ಅಧ್ಯಯನ, ಅವರ ಸಾಮಾಜಿಕ ಚಳುವಳಿಗಳ ಅಧ್ಯಯನ, ಅವರ ಅಭಿವೃದ್ಧಿಯ ಅಧ್ಯಯನ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಜೊತೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬುಡಕಟ್ಟು ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರ್ಣ ಮತ್ತು ಸಮ್ಮೇಳನಗಳನ್ನು ಏರ್ಪಡಿಸುವುದನ್ನು ನಾವು ಕಾಣಬಹುದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿಭಾಗವು ಬುಡಕಟ್ಟು ಅಧ್ಯಯನಗಳ ವಿವಿಧ ಸಂಶೋಧನೆಗಳನ್ನು ಕೃತಿಗಳ ರೂಪದಲ್ಲಿ ಪ್ರಕಟಿಸುತ್ತಿರುವುದು ಜ್ಞಾನ ಪ್ರಸಾರ ಮತ್ತು ಬುಡಕಟ್ಟುಗಳ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಒಂದು ಮಹತ್ತರ ಹೆಜ್ಜೆಯಾಗಿದೆ. ಇತ್ತೀಚೆಗೆ ಇದೇ ವಿಭಾಗದ ವತಿಯಿಂದ "ಬುಡಕಟ್ಟು ಅಧ್ಯಯನ" ಎಂಬ ಪತ್ರಿಕೆಯು ಪ್ರಕಟವಾಗುತ್ತಿರುವುದು ಅತ್ಯಂತ ಶ್ಲಾಘನೀಯವಾದುದು. ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಬುಡಕಟ್ಟು ಅಧ್ಯಯನ ಕೃತಿಗಳನ್ನು ಪ್ರಕಟಿಸಿದೆ. 2003ನೇ ಇಸವಿ ಆಗಸ್ಟ್

ತಿಂಗಳಿನಲ್ಲಿ ಲೋಕಸಭೆಯು, ರಾಷ್ಟ್ರೀಯ ಬುಡಕಟ್ಟುಗಳ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡುವ ಸಂವಿಧಾನಕ್ಕೆ 94ನೇ ತಿದ್ದುಪಡಿ ತರುವ ಮಸೂದೆಗೆ ಅಂಗೀಕಾರ ನೀಡಿರುವುದು ಬುಡಕಟ್ಟು ಅಭಿವೃದ್ಧಿಯ ಇನ್ನೊಂದು ಹೆಜ್ಜೆಯಾಗಿದೆ. ಇದುವರೆಗೂ ರಾಷ್ಟ್ರಮಟ್ಟದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಂದೇ ಆಯೋಗವಿದ್ದುದು ಗಮನಾರ್ಹ ಸಂಗತಿ. ಈಗ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಬುಡಕಟ್ಟು ಅಭಿವೃದ್ಧಿ ಖಾತೆಯನ್ನು ಸೃಷ್ಟಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ಬುಡಕಟ್ಟು ಜನರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಪ್ರಯತ್ನಿಸುತ್ತಿವೆ.

**ಪ್ರಮುಖ ಪದಗಳ ಅರ್ಥ**

1) ಬುಡಕಟ್ಟು : ಆದಿವಾಸಿ
2) ಸರ್ಕಾರೇತರ ಸಂಸ್ಥೆ : ಸ್ವಯಂ ಸೇವಾ ಸಂಸ್ಥೆ
3) ಬದಲಾವಣೆ : ಪರಿವರ್ತನೆ

## ಅಭ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಒಂದು ಪ್ರದೇಶದ ಮೂಲ ವಾಸಸ್ಥರನ್ನು ____________ ಎಂದು ಕರೆಯಲಾಗುತ್ತದೆ.
2) ಒಬ್ಬ ನಾಯಕನ ಅಧೀನದಲ್ಲಿ ಇರುವ ತಂಡವನ್ನು ____________ ಎಂದು ಕರೆಯುತ್ತಾರೆ.
3) ಗಾಂಧೀಜಿಯವರು ಆದಿವಾಸಿಗಳನ್ನು ____________ ಎಂದು ಕರೆಯುತ್ತಾರೆ.
4) ಭಾರತ ಸಂವಿಧಾನದ ____________ ಕಲಂನಲ್ಲಿ ಆದಿವಾಸಿಗಳನ್ನು ಪರಿಶಿಷ್ಟ ಬುಡಕಟ್ಟುಗಳೆಂದು ಉಲ್ಲೇಖಿಸಲಾಗಿದೆ.
5) ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಿವ ಅಧಿಕಾರ ಹೊಂದಿರುವವರು ____________

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಬುಡಕಟ್ಟು ಎಂದರೇನು?
2) ಕೇಂದ್ರ ಸರ್ಕಾರ ಯಾರ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಬುಡಕಟ್ಟು ಆಯೋಗವನ್ನು ರಚಿಸಲಾಯಿತು?
3) ಬ್ಲಾಕ್ ಪದ್ಧತಿ ಎಂದರೇನು?
4) ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಯಾರು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಭಾರತದಲ್ಲಿ ಬುಡಕಟ್ಟುಗಳಿಗಿರುವ ವಿವಿಧ ಹೆಸರುಗಳು ಯಾವುವು?

2) ಬುಡಕಟ್ಟು ಜನಾಂಗದ ಗುಣಲಕ್ಷಣಗಳನ್ನು ತಿಳಿಸಿ.

3) ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ರೂಪಿಸಿದ ಮೂರು ನೀತಿಗಳನ್ನು ತಿಳಿಸಿ.

4) ಬುಡಕಟ್ಟು ಜನಾಂಗಗಳ ಅವನತಿಗೆ ಕಾರಣಗಳನ್ನು ತಿಳಿಸಿ.

5) ಭಾರತದಲ್ಲಿ ಬುಡಕಟ್ಟು ಸಲಹಾ ಸಮಿತಿಯ ಕಾರ್ಯಗಳೇನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1) ಭಾರತದಲ್ಲಿ ಬುಡಕಟ್ಟುಗಳ ಐತಿಹಾಸಿಕ ಹಿನ್ನಲೆಯನ್ನು ಬರೆಯಿರಿ.

2) ಭಾರತದ ಬುಡಕಟ್ಟುಗಳಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಬದಲಾವಣೆಯನ್ನು ಗುರುತಿಸಿ.

3) ಭಾರತದಲ್ಲಿ ಬುಡಕಟ್ಟುಗಳ ಬದಲಾವಣೆಗೆ ಕಾರಣವಾಗುವ ಅಂಶಗಳನ್ನು ವಿವರಿಸಿ.

4) ಭಾರತದಲ್ಲಿ ಬುಡಕಟ್ಟುಗಳ ಬದಲಾವಣೆಯಲ್ಲಿ ಸರ್ಕಾರದ ಪಾತ್ರವನ್ನು ವಿವರಿಸಿ.

5) ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

**ಸಲಹಾತ್ಮಕ ಚಟುವಟಿಕೆಗಳು**

✦ ವಿದ್ಯಾರ್ಥಿಗಳನ್ನು ಬುಡಕಟ್ಟು ಜನಾಂಗದ ಪ್ರದೇಶಕ್ಕೆ ಪ್ರವಾಸಕ್ಕೆ ಕರೆದುಕೊಂಡು ಹೋಗುವುದು.

✦ ಬುಡಕಟ್ಟು ಜನಾಂಗದವರ ಜೀವನಕ್ಕೆ ಪೂರಕವಾದ ಸಾಹಿತ್ಯವನ್ನು ಓದಿ ತಿಳಿಸುವುದು.

# ಅಧ್ಯಾಯ-7

# ಸಾಮಾಜಿಕ ಬದಲಾವಣೆಯತ್ತ ಮಾಧ್ಯಮಗಳು

**ಈ ಅಧ್ಯಾಯದಲ್ಲಿ ನಾವು ಕೆಳಕಂಡ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.**

- ಪೀಠಿಕೆ
- ಸಮೂಹ ಮಾಧ್ಯಮಗಳ ಅರ್ಥ
- ಸಮೂಹ ಮಾಧ್ಯಮಗಳ ಪ್ರಕಾರಗಳು- ಮುದ್ರಣ, ವಿದ್ಯುನ್ಮಾನ ಮತ್ತು ಅಂತರ್‌ಜಾಲ.
- ಸಮಕಾಲೀನ ಸಮಾಜದಲ್ಲಿ ಮಾಧ್ಯಮಗಳ ಪ್ರಭಾವ ಮತ್ತು ಪಾತ್ರ.

**ಪೀಠಿಕೆ**

ಈ ಅಧ್ಯಾಯದಲ್ಲಿ ನಾವು ಸಮೂಹ ಮಾಧ್ಯಮಗಳು ಭಾರತದಲ್ಲಿ ಬೆಳೆದು ಬಂದ ರೀತಿಯನ್ನು ಪರಿಚಯ ಮಾಡಿಕೊಳ್ಳುತ್ತೇವೆ. ಅವುಗಳ ಅರ್ಥ ಮತ್ತು ಪ್ರಕಾರವನ್ನು ತಿಳಿದುಕೊಳ್ಳುತ್ತೇವೆ. ನಂತರ ಸಮಕಾಲೀನ ಸಮಾಜದಲ್ಲಿ ಅವುಗಳ ಪಾತ್ರವನ್ನು ಚರ್ಚಿಸುತ್ತೇವೆ.

ವೃತ್ತಪತ್ರಿಕೆಗಳು, ರೇಡಿಯೋ, ಟೆಲಿವಿಷನ್, ಇಂಟರ್ನೆಟ್, ಇ-ಮೇಲ್, ಟ್ವಿಟರ್ ಹಾಗೂ ಬ್ಲಾಗ್‌ಗಳನ್ನು ಸಮೂಹ ಮಾಧ್ಯಮಗಳಿಗೆ ಉದಾಹರಣೆಯಾಗಿ ನೀಡಬಹುದು. 21ನೇ ಶತಮಾನದಲ್ಲಿ ಭಾರತದಲ್ಲಿ ಸಮೂಹ ಮಾಧ್ಯಮದ ಕ್ರಾಂತಿಯೇ ನಡೆದಿದೆ. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಿಕೆ, ಸಾರ್ವಜನಿಕರ ಗಮನ ಸೆಳೆಯುವಿಕೆ, ಸರ್ಕಾರದ ನೀತಿ ನಿಯಮಗಳನ್ನು ಜನರಿಗೆ ತಿಳಿಸಲು ಮನರಂಜನೆ ನೀಡುವಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸಿವೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಆದರೆ ಅಭಿವೃದ್ಧಿ ಹೊಂದದ ಮತ್ತು ಹೊಂದುತ್ತಿರುವ ರಾಷ್ಟ್ರಗಳಲ್ಲಿ ಎಲ್ಲಾ ಜನರನ್ನೂ ಎಲ್ಲ ರೀತಿಯ ಮಾಧ್ಯಮಗಳೂ ತಲುಪಿಲ್ಲವೆನ್ನಬಹುದು. ಆದರೂ ಅವುಗಳ ಪ್ರಭಾವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಸಮೂಹ ಮಾಧ್ಯಮಗಳೆಂದರೆ ಮಾಹಿತಿ ಮತ್ತು ಜ್ಞಾನವನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸಬಹುದು. ಸರ್ಕಾರ ಅಥವಾ ಇತರ ಸಂಘಟನೆಗಳು ತಮ್ಮ ಮಾಹಿತಿಯನ್ನು ಜನರಿಗೆ ಮಾಧ್ಯಮಗಳ ಮೂಲಕ ಜನರಿಗೆ ಸ್ಥಳದಿಂದ ಸ್ಥಳಕ್ಕೆ ತಲುಪಿಸುತ್ತದೆಯೋ ಅದೇ ರೀತಿ ಸಮೂಹ ಮಾಧ್ಯಮಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಾಹಿತಿಯನ್ನು ತಲುಪಿಸುತ್ತವೆ. ವೃತ್ತಪತ್ರಿಕೆಗಳು, ರೇಡಿಯೋ, ಟೆಲಿವಿಷನ್ ಇಂಟರ್ನೆಟ್ ಮತ್ತು ಇ-ಮೇಲ್, ಟ್ವಿಟರ್ ಹಾಗೂ ಬ್ಲಾಗ್‌ಗಳನ್ನು ಸಮೂಹ ಮಾಧ್ಯಮಗಳಿಗೆ ಉದಾಹರಣೆಯಾಗಿ ನೀಡಬಹುದು.

**ಸಮೂಹ ಮಾಧ್ಯಮಗಳ ಸಾಮಾನ್ಯ ಲಕ್ಷಣಗಳು**

- ✦ ಈ ಮಾಧ್ಯಮಗಳಿಗೆ ಕಾಲ ಮತ್ತು ಸ್ಥಳಗಳ ನಿರ್ಬಂಧವಿಲ್ಲ
- ✦ ಏಕ ಕಾಲದಲ್ಲಿ ಲಕ್ಷಾಂತರ ಜನರನ್ನು ತಲುಪಬಲ್ಲದು.
- ✦ ಶೈಕ್ಷಣಿಕ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಪ್ರಸಾರವಾಗುತ್ತವೆ.
- ✦ ಸಂದೇಶಗಳನ್ನು / ವಿಷಯಗಳನ್ನು ವರ್ಗಾಯಿಸುತ್ತವೆ.

## 7.2 ಸಮೂಹ ಮಾಧ್ಯಮಗಳ ಪ್ರಕಾರಗಳು

ಸಮೂಹ ಮಾಧ್ಯಮಗಳು ಎರಡು ಪ್ರಕಾರವಾಗಿವೆ

1) ಮುದ್ರಣ ಮಾಧ್ಯಮ

2) ವಿದ್ಯುನ್ಮಾನ ಮಾಧ್ಯಮ

ವೃತ್ತಪತ್ರಿಕೆಗಳು, ರೇಡಿಯೋ, ಟೆಲಿವಿಷನ್, ಇಂಟರ್ನೆಟ್, ಇವು ಭಾರತದಲ್ಲಿ ಬೆಳೆದು ಬಂದ ಬಗೆ ಮತ್ತು ಮಹತ್ವವನ್ನು ತಿಳಿದುಕೊಳ್ಳೋಣ.

**ವೃತ್ತಪತ್ರಿಕೆಗಳು :**

ಭಾರತದಲ್ಲಿ ವೃತ್ತಪತ್ರಿಕೆಗಳ ಇತಿಹಾಸವು ದೊಡ್ಡದು. 19ನೇ ಶತಮಾನದಲ್ಲಿ ಬ್ರಿಟಿಷ್ ಸರ್ಕಾರದ ಗೆಜೇಟಿಯರ್ಗಳು ಕಂಡುಬಂದವು. ಅಂದರೆ ಸರ್ಕಾರದ ಮಾಹಿತಿಯನ್ನು ಜನರಿಗೆ ತಿಳಿಸಲು ಇವುಗಳನ್ನು ಬಳಸಲಾಗುತ್ತಿತ್ತು. ಆ ನಂತರ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು, ಪತ್ರಿಕೆಗಳನ್ನು ಪ್ರಾರಂಭಿಸಿದರು. ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರರು ಮೂಕನಾಯಕ, ಮಹಾತ್ಮ ಗಾಂಧೀಜಿಯವರು ಹರಿಜನ, ಬಾಲ ಗಂಗಾಧರ ತಿಲಕ್ ರವರು ಕೇಸರಿ ಹೀಗೆ ಅನೇಕ ಪತ್ರಿಕೆಗಳು ಪ್ರಕಟವಾದವು ಇದರಿಂದ ಅವುಗಳ ಜನಪ್ರಿಯತೆ ಜಾಸ್ತಿಯಾಯಿತು. ಈಗಂತು ಭಾರತದಲ್ಲಿ ಸಾವಿರಾರು ದಿನ ಪತ್ರಿಕೆಗಳಿವೆ. ಜೊತೆಗೆ ವಾರ, ತಿಂಗಳು ಮತ್ತು ವಾರ್ಷಿಕ ಪತ್ರಿಕೆಗಳು ಪ್ರಕಟವಾಗುತ್ತಿವೆ.

ಭಾರತದ ಮೊದಲ ವರ್ತಮಾನ ಪತ್ರಿಕೆ 'ದಿ ಬೆಂಗಾಲ್ ಗೆಜೆಟ್' 1780ರಲ್ಲಿ ಪ್ರಕಟವಾಯಿತು. ಮಂಗಳೂರು ಸಮಾಚಾರ ಪತ್ರಿಕೆಯು ಕನ್ನಡದ ಮೊದಲ ಪತ್ರಿಕೆಯಾಗಿದ್ದು ಇದನ್ನು ಮೋಗ್ಲಿಂಗ್ ಮಿಷನರಿಯವರು ಪ್ರಾರಂಭಿಸಿದರು. ಮೈಸೂರು ರೆಕಾರ್ಡರ್ ಮತ್ತು ಕರ್ನಾಟಕ ಪ್ರಕಾಶಿತ ಇವು ಕರ್ನಾಟಕದ ಇತರ ಪತ್ರಿಕೆಗಳಾಗಿವೆ.

**ರೇಡಿಯೋ** : ಭಾರತದಲ್ಲಿ 1920ರಲ್ಲಿ ಹ್ಯಾಮ್ ರೇಡಿಯೋಗಳು ಜಾರಿಗೆ ಬಂದವು. ಕೊಲ್ಕತ್ತಾ ಮತ್ತು ಚೆನ್ನೈಗಳಲ್ಲಿ ರೇಡಿಯೋ ಕ್ಲಬ್‌ಗಳನ್ನು ಸ್ಥಾಪಿಸಿಕೊಳ್ಳಲಾಗಿತ್ತು. 1940ರ ಎರಡನೇ ಮಹಾಯುದ್ಧದ ಸಮಯದಲ್ಲಿ ರೇಡಿಯೋ ವ್ಯವಸ್ಥೆಯು ಪೂರ್ಣ ರೂಪವನ್ನು ಪಡೆಯಿತು. ಜರ್ಮನಿಯ ಹಿಟ್ಲರ್‌ನ ಸರ್ವಾಧಿಕಾರದ ವಿರುದ್ಧ ಹೋರಾಡುವ ಸಲುವಾಗಿ ಮಿತ್ರ ರಾಷ್ಟ್ರಗಳ ಗುಂಪು ಈ ರೇಡಿಯೋವನ್ನು ಪರಿಣಾಮಕಾರಿಯಾಗಿ ಬಳಸಿದವು. ಭಾರತದಲ್ಲಿಯೂ ಇದನ್ನು ಬಳಸಲಾಯಿತು.

ಭಾರತದಲ್ಲಿ ಬಾನುಲಿ ಪ್ರಸಾರವು 1927ರಲ್ಲಿ ಆರಂಭವಾಯಿತು. ಆಗ ಮುಂಬೈ, ಕೊಲ್ಕತ್ತಾಗಳಲ್ಲಿ ಎರಡು ಖಾಸಗಿ ಟ್ರಾನ್ಸಮೀಟರ್‌ಗಳಿದ್ದವು. ಅವುಗಳನ್ನು ಸರ್ಕಾರ ಕೊಂಡುಕೊಂಡು 1930ರಲ್ಲಿ ಭಾರತ ಪ್ರಸಾರ ಸೇವೆಯನ್ನು ಪ್ರಾರಂಭಿಸಿತು. (ಇಂಡಿಯನ್ ಬ್ರಾಡ್ ಕಾಸ್ಟಿಂಗ್ ಸರ್ವಿಸಸ್) 1936ರಲ್ಲಿ ಆಲ್ ಇಂಡಿಯಾ ರೇಡಿಯೋ ಎಂದು ಕರೆಯಲಾಯಿತು. 1957ರಲ್ಲಿ ಆಕಾಶವಾಣಿ ಎಂಬ ಹೆಸರು ಬಂದಿತು.

ಸ್ವಾತಂತ್ರ್ಯದ ಸಂದರ್ಭದಲ್ಲಿ ಕೇವಲ ಆರು ರೇಡಿಯೋ ಕೇಂದ್ರಗಳಿದ್ದವು. ಸ್ವತಂತ್ರ್ಯ ಭಾರತದಲ್ಲಿ ಸುದ್ದಿ ಸಮಾಚಾರ, ಪ್ರಚಲಿತ ವಿದ್ಯಾಮಾನಗಳು, ಅಭಿವೃದ್ಧಿ ಕುರಿತ ಚರ್ಚೆ ಮೊದಲಾದವುಗಳಿಗೆ ಆದ್ಯತೆ ನೀಡಲಾಗಿತ್ತು. ವಿವಿಧ ಭಾರತಿ ಕಾರ್ಯಕ್ರಮವನ್ನು 1952ರಲ್ಲಿ ಆರಂಭಿಸಲಾಯಿತು. ಇದರಿಂದಾಗಿ ರೇಡಿಯೋ ತುಂಬಾ ಜನಪ್ರಿಯವಾಯಿತು. ಏಕೆಂದರೆ, ಚಲನಚಿತ್ರಗೀತೆ, ನಾಟಕ ಮೊದಲಾದ ಕಾರ್ಯಕ್ರಮಗಳನ್ನು ಅದರಲ್ಲಿ ಪ್ರಸಾರ ಮಾಡಲಾಗುತ್ತಿತ್ತು.

ಮೊದಲು ರೇಡಿಯೋವನ್ನು ಸಾಮಾನ್ಯ ಜನರು ಹೊಂದಲು ಸಾಧ್ಯವಾಗುತ್ತಿರಲಿಲ್ಲ. ರೇಡಿಯೋ ಸೆಟ್‌ನ ಬೆಲೆ ತುಂಬಾ ದುಬಾರಿಯಾಗಿತ್ತು. ರೇಡಿಯೋ ಗಾತ್ರ ದೊಡ್ಡದಾಗಿದ್ದರಿಂದ ಅದನ್ನು ಒಂದೇ ಕಡೆ ಇಡಬೇಕಾಗಿತ್ತು. ಟ್ರಾನ್ಸಿಸ್ಟರ್‌ಗಳು ಅಂದರೆ ಸಣ್ಣ ಗಾತ್ರದ ರೇಡಿಯೋಗಳು ಜನಜೀವನದ ಒಂದು ಅವಿಭಾಜ್ಯ ಅಂಗವಾಯಿತು.

ಚೀನಾದ ವಿರುದ್ಧ 1962ರಲ್ಲಿ ನಡೆದ ಯುದ್ಧದ ಸಮಾಚಾರಗಳನ್ನು ಬಿತ್ತರಿಸುವಲ್ಲಿ ರೇಡಿಯೋ ಪ್ರಮುಖ ಮಾಧ್ಯಮವಾಯಿತು. 1971ರ ಬಾಂಗ್ಲಾದೇಶದ ಯುದ್ಧದ ಸಂದರ್ಭದಲ್ಲಿ ಗಂಟೆಗೊಂದು ಸಾರಿಯಂತೆ ಸುದ್ದಿಯನ್ನು ಬಿತ್ತರಿಸಲಾಗುತ್ತಿತ್ತು. ಆಕಾಶವಾಣಿ ಸ್ಥಾಪಿತವಾದ ಮೇಲೆ ದೇಶದ ಎಲ್ಲಾಕಡೆಯೂ ರೇಡಿಯೋ ಕೇಂದ್ರಗಳಿವೆ. ಹಾಗಾಗಿ, ನೂರಾರು ಎಫ್ ಎಂ ಚಾನೆಲ್‌ಗಳು ಅಸ್ತಿತ್ವದಲ್ಲಿರುವುದನ್ನು ನೀವೂ ಕೇಳಿರುತ್ತೀರಾ. ಮೊಬೈಲ್ ಫೋನ್‌ಗಳಲ್ಲಿ ಎಫ್ ಎಂ ಚಾನೆಲ್ ಮತ್ತು ಟಿವಿ ಕೂಡ ಲಭ್ಯವಿದೆ.

**ಟೆಲಿವಿಷನ್** : ರೇಡಿಯೋದಂತೆ ಭಾರತದಲ್ಲಿ ದೂರದರ್ಶನಕ್ಕೂ ಸಹ ಅದರದೇ ಆದ ಇತಿಹಾಸವಿದೆ. 1959ರಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಪ್ರಾಯೋಗಿಕವಾಗಿ ದೂರದರ್ಶನವನ್ನು ಆರಂಭಿಸಲಾಯಿತು. 1975 ಮತ್ತು 76 ರಲ್ಲಿ ಪ್ರಮುಖ ನಗರಗಳಾದ ದೆಹಲಿ, ಶ್ರೀನಗರ, ಅಮೃತಸರ, ಮುಂಬೈಗಳಲ್ಲಿ ದೂರದರ್ಶನಗಳನ್ನು ಸ್ಥಾಪಿಸಲಾಯಿತು. ಮುಂದಿನ ವರ್ಷ ಕೊಲ್ಕತ್ತಾ, ಚೆನ್ನೈ ಹಾಗೂ ಜಲಂಧರ್‌ಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಯಿತು. ಮೊದಲು ಈ ಕೇಂದ್ರಗಳು ಕೃಷಿ, ಗ್ರಾಮೀಣಾಭಿವೃದ್ಧಿ, ಮಹಿಳೆಯರು ಮತ್ತು ಸಾಮಾಜಿಕ ಬದಲಾವಣೆ ಕುರಿತ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದವು. ಮನರಂಜನೆಗೆ ಅಷ್ಟೇನೂ ಮಹತ್ವವಿರಲಿಲ್ಲ.

1975ರ ನಂತರ ದೂರದರ್ಶನದಲ್ಲಿ ಜಾಹೀರಾತುಗಳನ್ನು ಪ್ರಕಟಿಸಲು ಅನುಮತಿ ನೀಡಲಾಯಿತು. ಕೈಗಾರಿಕೋದ್ಯಮಿಗಳು ಕೆಲವು ಕಾರ್ಯಕ್ರಮಗಳನ್ನು ಪ್ರಾಯೋಜಿಸುತ್ತಿದ್ದರು. ಇದರೊಂದಿಗೆ ಮನರಂಜನಾ ಕಾರ್ಯಕ್ರಮಗಳು ಕೂಡ ಹೆಚ್ಚಾದವು. 1984ರಿಂದ 88ರವರೆಗೆ ಅನೇಕ ಜನಪ್ರಿಯ ಧಾರಾವಾಹಿಗಳು ಪ್ರಸಾರವಾದವು. ರಾಮಾಯಣ ಮತ್ತು ಮಹಾಭಾರತದಂತಹ ಧಾರಾವಾಹಿಗಳು ಮತ್ತು ಕ್ರಿಕೆಟ್ ಪಂದ್ಯಗಳು ಹೆಚ್ಚು ಹೆಚ್ಚು ಜನರನ್ನು ಟಿ.ವಿ.ಯ ಮುಂದೆ ಕುಳಿತುಕೊಳ್ಳುವಂತೆ ಮಾಡಿದವು.

1991ರಲ್ಲಿ ದೂರದರ್ಶನವು ಕೇಂದ್ರ ಸರ್ಕಾರದ ಹತೋಟಿಯಲ್ಲಿತ್ತು. ಖಾಸಗಿ ಚಾನೆಲ್‌ಗಳಿಗೆ ಅವಕಾಶವಿರಲಿಲ್ಲ. ಉದಾರೀಕರಣದ ನಂತರ ಖಾಸಗೀ ಚಾನೆಲ್‌ಗಳು ಅಸ್ತಿತ್ವಕ್ಕೆ ಬಂದವು. ಮನರಂಜನೆ, ಕ್ರೀಡೆ, ಪ್ರವಾಸ, ಮಹಿಳೆ, ಅಡುಗೆ, ಅಲಂಕಾರ, ಸಿನಿಮಾ ಹೀಗೆ ಪ್ರತಿಯೊಂದಕ್ಕೂ ಒಂದೊಂದು ಚಾನೆಲ್‌ಗಳು ಅಸ್ತಿತ್ವಕ್ಕೆ ಬಂದ ಮೇಲೇ ದೂರದರ್ಶನದ ವ್ಯಾಪ್ತಿಯು ಹೆಚ್ಚಾಗಿದೆ. ಭಾರತದಲ್ಲಿ ಟಿ.ವಿ.ಯು ಮೊದಲು ಕೇವಲ ನಗರ ಪ್ರದೇಶದಲ್ಲಿ ಕಂಡುಬರುತ್ತಿತ್ತು. ಈಗ ಟಿ.ವಿ. ಇಲ್ಲದ ಸ್ಥಳವನ್ನು ಕಾಣಲು ಸಾಧ್ಯವಿಲ್ಲ.

**ಇಂಟರ್ನೆಟ್** : ಉದಾರೀಕರಣದ ನಂತರ ಭಾರತದಲ್ಲಿ ಕಂಪ್ಯೂಟರ್ ಕ್ರಾಂತಿಯಾಗಿರುವುದನ್ನು ಗಮನಿಸಬಹುದು. ಕರ್ನಾಟಕ ರಾಜ್ಯದ ಬೆಂಗಳೂರು ನಗರವು ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧಿಯಾಗಿದೆ. ಸಾಫ್ಟ್‌ವೇರ್ ಕಂಪೆನಿಗಳು ಪ್ರಪಂಚದಾದ್ಯಂತ ಹೆಸರು ಮಾಡಿವೆ. ಆಡಳಿತದಲ್ಲಿ ಶಾಲಾ–ಕಾಲೇಜುಗಳಲ್ಲಿ, ಮನೆಮನೆಗಳಲ್ಲಿ ಕಂಪ್ಯೂಟರ್ ಶಿಕ್ಷಣವು ಕಡ್ಡಾಯ ಎನ್ನುವಂತಾಗಿದೆ. ಕಂಪ್ಯೂಟರ್ ಕಲಿಯದೆ ಇರುವವರನ್ನು ಕಂಪ್ಯೂಟರ್ ಅನಕ್ಷರಸ್ಥರೆಂದು ಗುರುತಿಸಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣವಾಗಿ ಇ–ಗೌರ್ನೆನ್ಸ್ ಅಥವಾ ಕಾಗದ ರಹಿತ ಆಡಳಿತವನ್ನು ಜಾರಿಗೆ ತರುವ ಗುರಿಯನ್ನು ಹೊಂದಿವೆ. ಭಾರತದಲ್ಲಿ ಸುಮಾರು 70 ಕೋಟಿ ಮೊಬೈಲ್ ಫೋನ್ ಬಳಕೆದಾರರಿದ್ದಾರೆ. ಮೊಬೈಲ್ ಫೋನ್‌ಗಳು ಅಭಿವೃದ್ಧಿ ಹೊಂದಿ ಇಂಟರ್ನೆಟ್, ಇ–ಮೇಲ್, ಫೇಸ್‌ಬುಕ್, ವಾಟ್ಸ್‌ಅಪ್ ಮೊದಲಾದವುಗಳ ಬಳಕೆಗೆ ಅನುಕೂಲಕರವಾಗಿವೆ. ಕಂಪ್ಯೂಟರ್ ಮತ್ತು ಮೊಬೈಲ್ ಇಲ್ಲದೆ ಜೀವನ ಸಾಗಿಸುವುದೇ ಕಷ್ಟ ಎಂಬಂತಾಗಿದೆ. ಹೀಗೆ ಸಮೂಹ ಮಾಧ್ಯಮಗಳು ಜೀವನದ ಅವಿಭಾಜ್ಯ ಅಂಗವಾಗಿದೆ.

ಜನರ ಜೀವನಶೈಲಿ, ಅಭಿರುಚಿ, ಆಚಾರ–ವಿಚಾರ, ಲೋಕರೂಢಿ, ನಡವಳಿಕೆಯ ವರ್ತನೆ, ಮೌಲ್ಯಗಳು, ಅಭಿಪ್ರಾಯಗಳು ಮೇಲೆ ಪ್ರಭಾವ ಬೀರಿ ಸಾಮಾಜಿಕ ಬದಲಾವಣೆಯನ್ನು ಉಂಟುಮಾಡುತ್ತಿವೆ. ಇದನ್ನು ಅರ್ಥಮಾಡಿಕೊಳ್ಳುವ ಮೊದಲು ಸಮೂಹ ಮಾಧ್ಯಮಗಳು ಸಮಾಜದಲ್ಲಿ ವಹಿಸುವ ಪಾತ್ರವನ್ನು ತಿಳಿದುಕೊಳ್ಳೋಣ.

### 7.3 ಸಮಕಾಲೀನ ಸಮಾಜದಲ್ಲಿ ಸಮೂಹ ಮಾಧ್ಯಮಗಳ ಪಾತ್ರ

ಸಮೂಹ ಮಾಧ್ಯಮಗಳು ದಿನನಿತ್ಯದ ಸಾಮಾಜಿಕ ಆಗುಹೋಗುಗಳನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ರಾಷ್ಟ್ರೀಯ, ಅಂತರಾಷ್ಟ್ರೀಯ ಘಟನೆಗಳು, ರಾಜಕೀಯ ಸುದ್ದಿಗಳು, ಪ್ರಾಕೃತಿಕ ವಿಕೋಪಗಳನ್ನು ತಿಳಿಸಿಕೊಡುತ್ತವೆ. ಸಮೂಹ ಮಾಧ್ಯಮಗಳ ಮೂಲಕ ಜನರು ಸಿನಿಮಾ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಅಪರಾಧದ ಸುದ್ದಿಗಳು, ಕ್ರೀಡಾ ಸುದ್ದಿಗಳನ್ನು ತಿಳಿದುಕೊಳ್ಳುತ್ತಾರೆ. ಸಾಂಸ್ಕೃತಿಕ ಅಂಶಗಳನ್ನು ಸಮೂಹ ಮಾಧ್ಯಮಗಳು ನೆನಪಿಸುತ್ತವೆ. ಮಕ್ಕಳನ್ನು ಮತ್ತು ವಯಸ್ಕರನ್ನು ಸಾಮಾಜೀಕರಣಗೊಳಿಸುವಲ್ಲಿ ಇವುಗಳ ಪಾತ್ರ ದೊಡ್ಡದು. ಸಾರ್ವತ್ರಿಕ ಚುನಾವಣೆಯ ಸಂದರ್ಭಗಳಲ್ಲಿ ರಾಜಕೀಯ ಚರ್ಚೆಗಳನ್ನು ಏರ್ಪಡಿಸುತ್ತವೆ ಮತ್ತು ಜನರ

ಅಭಿಪ್ರಾಯವನ್ನು ರೂಪಿಸುತ್ತವೆ. ಸರ್ಕಾರವು ದಾರಿ ತಪ್ಪಿದಾಗ ವಿರೋಧ ಪಕ್ಷಗಳಂತೆ ಮಾಧ್ಯಮಗಳು ಕಾರ್ಯನಿರ್ವಹಿಸಿರುವುದನ್ನೂ ಕಾಣಬಹುದು.

ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಜನರ ಮೂಲಭೂತ ಹಕ್ಕುಗಳನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುವಲ್ಲಿ ಮೊದಲಿನಿಂದಲೂ ಮಾಧ್ಯಮಗಳು ಮಹತ್ತರ ಪಾತ್ರ ನಿರ್ವಹಿಸಿವೆ. ಆದರೂ ಇತ್ತೀಚೆಗೆ ಪ್ರಾಯೋಜಕರು, ಜಾಹೀರಾತುದಾರರು ಮತ್ತು ಕೈಗಾರಿಕೋದ್ಯಮಿಗಳ ಹಿಡಿತದಿಂದಾಗಿ ಮಾಧ್ಯಮಗಳು ಸ್ವತಂತ್ರವಾಗಿ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಬಹುದು. ಯಾವುದೋ ಒಂದು ಪಕ್ಷ ಅಥವಾ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿದು ಪೂರ್ವಾಗ್ರಹ ಪೀಡಿತವಾಗಿ ವರ್ತಿಸುತ್ತಿರುವುದು ಕಂಡುಬರುತ್ತಿದೆ. ಇದರ ನಡುವೆಯೂ ಅನೇಕ ಪರ್ಯಾಯ ಮಾಧ್ಯಮಗಳು ಇವರ ಹಿಡಿತದಿಂದ ಸ್ವತಂತ್ರವಾಗಿ ವಸ್ತುನಿಷ್ಠ ವರದಿ ಮಾಡುವುದನ್ನು ಕಾಣಬಹುದು.

ಭಾರತದಲ್ಲಿ ಏಕಕಾಲದಲ್ಲಿ ಸಾಂಪ್ರದಾಯಿಕವೂ, ಆಧುನಿಕವೂ ಆಗಿರುವ ದೇಶವಾಗಿದೆ. ಇಲ್ಲಿ ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಜಾಸ್ತಿ ಇದೆ. ದೊಡ್ಡ ನಗರಗಳು ಮತ್ತು ಸಣ್ಣ ಸಣ್ಣ ಗ್ರಾಮಗಳು ಇವೆ. ಕೆಲವು ಪ್ರದೇಶಗಳಲ್ಲಿ ಉನ್ನತ ಸಾರಿಗೆ ಸಂಪರ್ಕವಿದ್ದರೆ ಇನ್ನಿತರೆ ಪ್ರದೇಶಗಳಲ್ಲಿ ಕೇವಲ ಕಾಲುದಾರಿಗಳಲ್ಲೇ ಜನ ಸಂಚರಿಸುತ್ತಾರೆ. ಮೂಢನಂಬಿಕೆ, ಜಾತಿಪದ್ಧತಿ, ಅಸ್ಪೃಶ್ಯತೆಯ ಆಚರಣೆ, ಅನಕ್ಷರತೆ, ಅಭಿವೃದ್ಧಿ ಅಸಮಾನತೆ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಮಾಧ್ಯಮಗಳ ಪಾತ್ರ ಭಾರತೀಯ ಸಮಾಜದಲ್ಲಿ ಬಹಳ ಪ್ರಮುಖವಾಗಿರುತ್ತದೆ.

ನಾವು ಭಾರತೀಯ ಮಾಧ್ಯಮದ ಇತಿಹಾಸವನ್ನು ಗಮನಿಸಿದಾಗ ರೇಡಿಯೋ, ಟೆಲಿವಿಷನ್, ಚಲನಚಿತ್ರಗಳು, ಸುದ್ದಿಮಾಧ್ಯಮಗಳು, ವೃತ್ತಪತ್ರಿಕೆಗಳು ಭಾರತೀಯ ಸಂಸ್ಕೃತಿಯ ಮೇಲೆ ಅಪಾರ ಪ್ರಭಾವ ಬೀರಿರುವುದನ್ನು ಗಮನಿಸಬಹುದಾಗಿದೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಬಂದ ಚಲನಚಿತ್ರಗಳು ಮತ್ತು ಟೆಲಿವಿಷನ್ ಕಾರ್ಯಕ್ರಮಗಳು ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ಕೈಗಾರಿಕೆಯ ಬೆಳವಣಿಗೆಗೆ ಮಹತ್ವವನ್ನು ನೀಡಿದವು. ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದ ನಂತರ ಕೋಮುಗಲಭೆಯು ಭುಗಿಲೆದ್ದಿತು. ಆದುದರಿಂದ ದೂರದರ್ಶನ ಮತ್ತು ಚಲನಚಿತ್ರ, ರೇಡಿಯೋ ಕಾರ್ಯಕ್ರಮಗಳಲ್ಲಿ ಸೌಹಾರ್ದತೆಗೆ ಹೆಚ್ಚಿನ ಮಹತ್ವ ನೀಡಲಾಯಿತು.

ಅನಕ್ಷರತೆ ಪ್ರಮಾಣವನ್ನು ತಗ್ಗಿಸಲು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಸಮೂಹ ಮಾಧ್ಯಮಗಳ ಪಾತ್ರವು ಪ್ರಮುಖವಾಯಿತು. ಸಾಕ್ಷ್ಯಚಿತ್ರಗಳ ಪ್ರಸಾರದ ಮೂಲಕ ವಿದ್ಯುತ್ ಉಳಿತಾಯ, ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ದೊಡ್ಡದು. ಚಲನಚಿತ್ರವು ಭಾರತೀಯ ಸಮೂಹ ಮಾಧ್ಯಮಗಳಲ್ಲಿ ಅಗ್ರಸ್ಥಾನವನ್ನು ಪಡೆದಿವೆ. ಭಾರತೀಯ ಸಮಾಜವು ಚಲನಚಿತ್ರಗಳಿಂದ ಅತಿಹೆಚ್ಚು ಪ್ರಭಾವಿತವಾಗಿದೆ. ಚಲನಚಿತ್ರ ನಟರ ಹೆಸರಿನಲ್ಲಿ ಅಭಿಮಾನಿ ಸಂಘಟನೆಗಳಿವೆ. ಉತ್ತಮ ಚಲನಚಿತ್ರಗಳನ್ನು ನೋಡಿ ಅದರ ಆದರ್ಶಗಳನ್ನು ಮೈಗೂಡಿಸಿಕೊಂಡ ಉದಾಹರಣೆಗಳಿವೆ.

ಕನ್ನಡದ ವರನಟ ಡಾ. ರಾಜ್‌ಕುಮಾರ್‌ರವರ ಚಲನಚಿತ್ರಗಳನ್ನು ನೋಡಿ ನಗರಪ್ರದೇಶದಲ್ಲಿ ವಾಸಿಸುತ್ತಿದ್ದ ಜನರು ಹಳ್ಳಿಯ ಪ್ರದೇಶಗಳಿಗೆ ಹೋಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಈಗಲೂ ಕೂಡ ಅವರ

ಹೆಸರಿನಲ್ಲಿ ಅಲ್ಲಲ್ಲಿ ಉಚಿತ ಗ್ರಂಥಾಲಯಗಳಿವೆ. ವೈಜ್ಞಾನಿಕ ಮನೋಭಾವದ ಕೊರತೆಯಿಂದಾಗಿ ಜನರು ವ್ಯಕ್ತಿಯ ನಿಧನದ ನಂತರ ನೇತ್ರದಾನ, ಅಂಗಾಂಗದಾನ ಮಾಡಲು ಹಿಂಜರಿಯುತ್ತಿದ್ದರು. ರಾಜ್‌ಕುಮಾರ್ ಅವರು ತಮ್ಮ ಕಣ್ಣುಗಳನ್ನು ದಾನ ಮಾಡಿದ ಮೇಲೆ ಲಕ್ಷಾಂತರ ಜನರು ನೇತ್ರದಾನ ಮಾಡಿದ್ದಾರೆ. ಈ ರೀತಿಯಲ್ಲಿ ಸಮೂಹ ಮಾಧ್ಯಮದ ಪ್ರಭಾವದಿಂದ ಸಾಮಾಜಿಕ ಮೌಲ್ಯಗಳಲ್ಲಿ ಬದಲಾವಣೆ ಉಂಟಾಗುತ್ತದೆ.

ಸಮೂಹ ಮಾಧ್ಯಮಗಳಿಂದ ಭಾರತೀಯ ವಿವಾಹಗಳ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿದೆ. ಯುವಕ, ಯುವತಿಯರು ತಮ್ಮ ಜಾತಿಯಲ್ಲಿಯೇ ವಿವಾಹವಾಗುತ್ತಿದ್ದರು. ಜೊತೆಗೆ ತಮ್ಮ ತಂದೆ ತಾಯಿಯರು ಹುಡುಕಿದ ಸಂಗಾತಿಗಳೊಂದಿಗೆ ಮಾತ್ರ ವಿವಾಹ ಏರ್ಪಡುತ್ತಿತ್ತು. ಆದರೆ ಚಲನಚಿತ್ರ ಹಾಗೂ ಸಮೂಹ ಮಾಧ್ಯಮಗಳ ಪ್ರಭಾವದಿಂದ ಅಂತರ್ಜಾತಿಯ ಮತ್ತು ಪ್ರೇಮ ವಿವಾಹಗಳು ಹೆಚ್ಚಾಗಿವೆ. ಫೇಸ್‌ಬುಕ್, ವಾಟ್ಸ್‌ಅಪ್ ಮತ್ತು ಇಂಟರ್ನೆಟ್‌ಗಳ ಮೂಲಕವೇ ಈಗ ತಮ್ಮ ಸಂಗಾತಿಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದರಿಂದ ಸಾಂಪ್ರಾದಾಯಿಕ ವಿವಾಹ ಪದ್ಧತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಉಂಟಾಗಿದೆ.

ಚಲನಚಿತ್ರ ನಟರ ಜೀವನಶೈಲಿ, ಅಭಿರುಚಿ, ಉಡುಪುಗಳನ್ನು ಯುವಕ ಯುವತಿಯರು ಅನುಕರಿಸುವುದನ್ನು ಕಾಣಬಹುದು. ಹಳೆಯ ಸಂಪ್ರದಾಯಗಳನ್ನು, ಮೌಢ್ಯವನ್ನು ಸಮೂಹ ಮಾಧ್ಯಮಗಳಲ್ಲಿ ಪ್ರಸಾರಮಾಡಿ ಚರ್ಚೆಗೆ ಒಳಪಡಿಸುವುದರಿಂದ ಎಷ್ಟೋ ಮಾರ್ಪಾಟುಗಳಾಗಿದೆ.

ಭಾರತದ ವಿವಿಧ ಭಾಷೆಗಳ ಚಾನೆಲ್‌ಗಳನ್ನು ಜನ ನೋಡುವುದರಿಂದ ಭಾಷೆಯ ಕಲಿಕೆ ಮತ್ತು ಸೌಹಾರ್ದತೆಯು ಜಾಸ್ತಿಯಾಗಿದೆ. ಆಹಾರ ಅಭ್ಯಾಸವು ಬದಲಾಗಿದೆ. ಹೀಗೆ ಅನೇಕ ವಿಚಾರಗಳಲ್ಲಿ ಸಮೂಹ ಮಾಧ್ಯಮಗಳು ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಈ ಪ್ರಭಾವಗಳನ್ನು ಗುರುತಿಸುವಾಗ ಸಮೂಹ ಮಾಧ್ಯಮಗಳು ಉಂಟುಮಾಡುತ್ತಿರುವ ದುಷ್ಪ ಪರಿಣಾಮಗಳನ್ನೂ ಗುರುತಿಸಬಹುದು.

ಭಾರತೀಯ ಸಮಾಜದಲ್ಲಿ ಕೊಳ್ಳು-ಬಾಕ ಸಂಸ್ಕೃತಿಗೆ ಹೆಚ್ಚಿನ ಮಹತ್ವವಿರಲಿಲ್ಲ. ಸರಳ ಜೀವನಕ್ಕೆ ಆದ್ಯತೆ ಇತ್ತು. ಆದರೆ, ಸಮೂಹ ಮಾಧ್ಯಮಗಳಲ್ಲಿ ಶ್ರೀಮಂತ ಜೀವನಶೈಲಿಯೇ ಶ್ರೇಷ್ಠ ಎಂಬ ಅರ್ಥ ಬರುವ ಜಾಹೀರಾತುಗಳನ್ನು ತೋರಿಸುವುದರಿಂದ ಜನರು ಕೊಳ್ಳು-ಬಾಕ ಸಂಸ್ಕೃತಿಗೆ ಮಾರುಹೋಗುತ್ತಿದ್ದಾರೆ. ಕೆಲವು ಚಾನೆಲ್‌ಗಳು ವೈಜ್ಞಾನಿಕ ಮನೋಭಾವವನ್ನು ವಿರೋಧಿಸುವ ಮೂಢನಂಬಿಕೆಗಳನ್ನು ನಿರಂತರವಾಗಿಯೇ ಪ್ರಚಾರ ಮಾಡುತ್ತಾ ಬರುತ್ತಿವೆ. ಜ್ಯೋತಿಷ್ಯದಂತಹ ಅವೈಜ್ಞಾನಿಕ ವಿಚಾರಗಳನ್ನು ಪ್ರತಿದಿನವೂ ಪ್ರಸಾರ ಮಾಡಲಾಗುತ್ತಿದೆ. ಯಾವುದೋ ಒಂದು ಪಕ್ಷದ ಪರ ಅಥವಾ ವ್ಯಕ್ತಿಯ ಪರ ಪ್ರಚಾರ ಮಾಡುವ ಮಾಧ್ಯಮಗಳಿವೆ. ಮಹಿಳೆಯರನ್ನು ಕೇವಲ ಸಂಕುಚಿತ ಮನೋಭಾವದ ವ್ಯಕ್ತಿಗಳಂತೆ ತೋರಿಸುವ ಧಾರಾವಾಹಿಗಳು ಹೇರಳವಾಗಿ ಪ್ರಸಾರವಾಗುತ್ತಿವೆ. ಇದರಿಂದ ಮಹಿಳೆಯರ ಸ್ಥಾನಮಾನಗಳ ಬದಲಾವಣೆಗೆ ಧಕ್ಕೆ ಉಂಟಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಭಾರತೀಯ ಸಮಾಜದ ಮೇಲೆ ಸಮೂಹ ಮಾಧ್ಯಮಗಳು ಏಕಕಾಲದಲ್ಲಿ ನಕಾರಾತ್ಮಕ ಹಾಗೂ ಸಕಾರಾತ್ಮಕವಾದ ಪ್ರಭಾವ ಬೀರಿರುವುದನ್ನು ಗುರುತಿಸಬಹುದು.

## 7.4 ಸಾರಾಂಶ :

ಈ ಅಧ್ಯಾಯದಲ್ಲಿ ನಾವು ಸಮೂಹ ಮಾಧ್ಯಮಗಳು ಭಾರತದಲ್ಲಿ ಬೆಳೆದು ಬಂದ ರೀತಿಯನ್ನು ಪರಿಚಯ ಮಾಡಿಕೊಂಡಿದ್ದೇವೆ. ಅವುಗಳ ಅರ್ಥ ಮತ್ತು ಪ್ರಕಾರಗಳನ್ನು. ನಂತರ ಸಮಕಾಲೀನ ಸಮಾಜದಲ್ಲಿ ಅವುಗಳ ಪಾತ್ರವನ್ನು ಚರ್ಚಿಸಿದ್ದೇವೆ.

## 7.5 ಪ್ರಮುಖ ಪದಗಳು

ಸಮೂಹ ಮಾಧ್ಯಮಗಳು – ಸಮೂಹ ಮಾಧ್ಯಮಗಳೆಂದರೆ ಮಾಹಿತಿ ಮತ್ತು ಜ್ಞಾನವನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುವುದು.

## ಅಭ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ಭಾರತೀಯ ಜನಜೀವನದ ಅವಿಭಾಜ್ಯ ಅಂಗ ______________

2) ಸಮೂಹ ಮಾಧ್ಯಮದ ಎರಡು ಪ್ರಕಾರಗಳು ______________ ಮತ್ತು ______________

3) ಕೇಸರಿ ಪತ್ರಿಕೆಯನ್ನು ಪ್ರಕಟಿಸಿದವರು ______________

4) ದೂರದರ್ಶನದಲ್ಲಿ ಜಾಹೀರಾತುಗಳನ್ನು ಪ್ರಕಟಿಸಲು ______________ ರಲ್ಲಿ ಅನುಮತಿ ನೀಡಲಾಯಿತು.

5) ಸಿಲಿಕಾನ್ ಸಿಟಿ ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ನಗರ ______________

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಸಮೂಹ ಮಾಧ್ಯಮ ಎಂದರೇನು?

2) ಮುದ್ರಣ ಮಾಧ್ಯಮಕ್ಕೆ ಎರಡು ಉದಾಹರಣೆ ಕೊಡಿ?

3) ದೂರದರ್ಶನದಲ್ಲಿ ಕೃಷಿಗೆ ಸಂಬಂಧಿಸಿದಂತೆ ಪ್ರಸಾರವಾಗುವ ಒಂದು ಕಾರ್ಯಕ್ರಮವನ್ನುತಿಳಿಸಿ.

4) ವಯಸ್ಕರ ಶಿಕ್ಷಣ ಎಂದರೇನು?

5) ರೇಡಿಯೋದಲ್ಲಿ ಪ್ರಸಾರವಾಗುವ ಒಂದು ಶೈಕ್ಷಣಿಕ ಕಾರ್ಯಕ್ರಮವನ್ನು ಹೆಸರಿಸಿ.

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1) ಸಮೂಹ ಮಾಧ್ಯಮದ ಎರಡು ಪ್ರಕಾರಗಳನ್ನು ಉದಾಹರಣೆಯೊಂದಿಗೆ ತಿಳಿಸಿ.

2) ಸಮೂಹ ಮಾಧ್ಯಮವಾಗಿ ರೇಡಿಯೋ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತಿವೆ?

3) ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯುಕ್ತತೆಯನ್ನು ತಿಳಿಸಿ.

4) ಜನರ ಜೀವನ ಶೈಲಿಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವವನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1) ಸಮಕಾಲೀನ ಸಮಾಜದಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವಿವರಿಸಿ ?

2) ಪ್ರಜಾಪ್ರಭುತ್ವ ದೇಶದಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ ಚರ್ಚಿಸಿ.

3) ಚಲನಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ?

**ಸಲಹಾತ್ಮಕ ಚಟುವಟಿಕೆಗಳು**

- ✦ ದೂರದರ್ಶನದ ಅನುಕೂಲತೆಗಳು ಮತ್ತು ಅನಾನುಕೂಲತೆಗಳನ್ನು ಕುರಿತಂತೆ ತರಗತಿಯಲ್ಲಿ ಚರ್ಚಾಸ್ಪರ್ಧೆಯನ್ನು ಏರ್ಪಡಿಸಿ.
- ✦ ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತ ಪತ್ರಿಕೆಗಳ ಮಹತ್ವವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ.
- ✦ ಕಲಿಕೆಯಲ್ಲಿ ಸಮೂಹ ಮಾಧ್ಯಮಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳುವಿರಿ. ಚರ್ಚಿಸಿ.